ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 17 ಬುಧವಾರ 2025

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 239 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4





ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಕೆ.ಪಿ.ಪ್ರಸನ್ನ ಕುಮಾರ್ ಬಿನ್ ಲೇಟ್ ಪುಟ್ಟೇಗೌಡ, ಮನೆ ನಂ.468/1, ವೆಂಕಟೇಶ್ವರ ನಿಲಯ, ಗಿರಿದರ್ಶಿನಿ ಬಡಾವಣೆ, ಮೈಸೂರು ಇವರ ಇರಾದೆ ಮೇರೆಗೆ ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಈ ಕೆಳಕಂಡ ಷೆಡ್ಯೂಲ್ ಸ್ವತ್ತು ನಮ್ಮ ಕಕ್ಷಿದಾರರಿಗೆ ದಿನಾಂಕ: 11–11–2021 ರಂದು ಶ್ರೀಮತಿ ಜಯಂತಿ ಹಾಗೂ ಶ್ರೀಮತಿ ಜಯಮ್ಮ ಮತ್ತು ಇವರ ಕುಟುಂಬದವರಿಂದ ಕ್ರಯದ ಕರಾರು ಪತ್ರವಾಗಿದ್ದು ಸದರಿ ಷೆಡ್ಯೂಲ್ ಸ್ವತ್ತಿನ ವಿಚಾರವಾಗಿ ನಮ್ಮ ಕಕ್ಷಿದಾರರು ಶ್ರೀಮತಿ ಜಯಂತಿ ಮತ್ತು ಶ್ರೀಮತಿ ಜಯಮ್ಮ ಹಾಗೂ ಕೆ.ಸುಬ್ರಮ್ಮಣ್ಯ ರೈ ಇತರರ ವಿರುದ್ಧ ಮೈಸೂರಿನ 6ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ **O.S.867/2022** ಹಾಗೂ **O.S.868/2022**ರಂತೆ ನಿರ್ದಿಷ್ಟ ಪರಿಹಾರ ಕೋರಿ **(Specific Performance)** ದಾವೆಯನ್ನು ಸಲ್ಲಿಸಿದ್ದು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುತ್ತದೆ ಹಾಗೂ ಮಾನ್ಯ ಗೌರವಾನ್ವಿತ ನ್ಯಾಯಾಲಯವು ದಿನಾಂಕ: 14–11–2025 ರಂದು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಗಳಿಗೆ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದ ನಿವೇಶನಗಳನ್ನು ಮುಂದಿನ ಆದೇಶದವರೆಗೆ ಮಾರಾಟ ಮಾಡದಂತೆ ಹಾಗೂ ಯಾವುದೇ ರೀತಿಯ ಅಭಿವೃದ್ಧಿ ಕೆಲಸ ಮಾಡದಂತೆ ಹಾಗೂ 3ನೇ ವ್ಯಕ್ತಿಗೆ ಯಾವುದೇ ರೀತಿಯ ಅಧಿಕಾರ ನೀಡದಂತೆ ತಡೆಯಾಜ್ಞೆ ಆದೇಶ ಮಾಡಿರುತ್ತದೆ.


ವಸ್ತುಸ್ಥಿತಿ ಈಗಿರುವಾಗ ಮೇಲ್ಕಂಡ ದಾವೆಯ 19ನೇ ಪ್ರತಿವಾದಿಯಾದ ಕೆ.ಸುಬ್ರಮ್ಮಣ್ಯ ರೈ ರವರು ಷೆಡ್ಯೂಲ್ ಸ್ವತ್ತಿನ ವಿಚಾರವಾಗಿ ಮೈಸೂರು ಅಭಿವೃದ್ಧಿ ಪ್ರಾಧಿಕಾರದಿಂದ ನಕ್ಷೆ ಅನುಮೋದನೆ ಪಡೆದುಕೊಂಡು ನಿವೇಶನಗಳನ್ನು ರಚಿಸಿ ಕಾನೂನು ಬಾಹಿರವಾಗಿ ನಿವೇಶನಗಳನ್ನು ಮಾರಾಟ ಮಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿದ್ದು ನ್ಯಾಯಾಲಯದಲ್ಲಿ ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಪ್ರಕರಣ ಬಾಕಿ ಇರುವುದರಿಂದ ಮತ್ತು ತಡೆಯಾಜ್ಞೆ ಇರುವುದರಿಂದ ಸಾರ್ವಜನಿಕರು ಷೆಡ್ಯೂಲ್ ಸ್ವತ್ತಿನ ವಿಚಾರವಾಗಿ ಯಾವುದೇ ರೀತಿಯ ಕ್ರಯದ ಕರಾರು, ಕ್ರಯಪತ್ರ, ಭೋಗ್ಯ ಇತರೆ ಯಾವುದೇ ರೀತಿಯ ವ್ಯವಹಾರ ಮಾಡಬಾರದೆಂದು ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುತ್ತಿದ್ದೇವೆ. ಇದರ ಹೊರತಾಗಿಯೂ ಸಾರ್ವಜನಿಕರು ಷೆಡ್ಯೂಲ್ ಸ್ವತ್ತಿನ ವಿಚಾರವಾಗಿ ವ್ಯವಹರಿಸಿದ್ದಲ್ಲಿ ಸದರಿಯವರನ್ನು ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿ ಕಾನೂನು ಕ್ರಮ ತೆಗೆದುಕೊಳ್ಳಬೇಕಾಗಿರುತ್ತದೆ ಮತ್ತು ಈ ವ್ಯವಹಾರಕ್ಕೆ ನನ್ನ ಕಕ್ಷಿದಾರರು ಬದ್ಧರಿರುವುದಿಲ್ಲವೆಂದು ಈ ಮೂಲಕ ತಿಳಿಸುತ್ತಿದ್ದೇವೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ವರುಣಾ ಹೋಬಳಿ, ವಾಜಮಂಗಲ ಗ್ರಾಮದ ಸರ್ವೆ ನಂಬರ್: 127/2 (ಹಳೇ ನಂಬರ್ 127) ವಿಸ್ತೀರ್ಣ 5 ಎಕರೆ 15 ಗುಂಟೆ ಜಮೀನಿನಲ್ಲಿ ನಿರ್ಮಿಸಿರುವ ನಿವೇಶನಗಳ ಸಂಖ್ಯೆ 514 ರಿಂದ 653ರವರೆಗೆ ಚೆಕ್ಕುಬಂದಿ: ಪೂರ್ವಕ್ಕೆ : ವರುಣಾ ನಾಲಾ ಮತ್ತು ಸರ್ವೆ ನಂಬರ್: 132, ಪಶ್ಚಿಮಕ್ಕೆ: ಸರ್ವೆ ನಂಬರ್: 126 ಮತ್ತು 125ರ ಜಮೀನು, ದಕ್ಷಿಣಕ್ಕೆ: ಸರ್ವೆ ನಂಬರ್: 136ರ ಜಮೀನು, ಉತ್ತರಕ್ಕೆ: ಸರ್ವೆ ನಂಬರ್: 123ರ ಜಮೀನು

ಸಹಿ/– ಎ.ಎಸ್.ನಟರಾಜು (ವಕೀಲರು)
ನೋಂದಣಿ ಸಂಖ್ಯೆ: 120/1974
ನಂ.116, ಮೊದಲನೇ ಮಹಡಿ, ಬನುಮಯ್ಯ ಚೌಕ, ಮೈಸೂರು.
ಮೊ: 9845110636

ಸ್ಥಳ : ಮೈಸೂರು.
ದಿನಾಂಕ: 16–12–2025









ಮೈಸೂರು ಮಿತ್ರ

ಮಣಿಪಾಲ್ ಆಸ್ಪತ್ರೆಯಲ್ಲಿ 'ಪೇರೆಂಟ್ ಕ್ರಾಫ್ಟ್' ಕಾರ್ಯಕ್ರಮ



ಮೈಸೂರಿನ ಮಣಿಪಾಲ್ ಆಸ್ಪತ್ರೆ ವತಿಯಿಂದ ಆಯೋಜಿಸಿದ್ದ 'ಪೇರೆಂಟ್ ಕ್ರಾಫ್ಟ್-2025' ಕಾರ್ಯಕ್ರಮದಲ್ಲಿ ತಜ್ಞ ವೈದ್ಯರು, ಸುರಕ್ಷಿತ ಹೆರಿಗೆ ಹಾಗೂ ನಂತರದ ಪೋಷಣೆ ಬಗ್ಗೆ ಮಾಹಿತಿ ನೀಡಿದರು.

ಮೈಸೂರು, ಡಿ.16- ಮೈಸೂರಿನ ಮಣಿಪಾಲ್ ಆಸ್ಪತ್ರೆ ವತಿಯಿಂದ 'ಪೇರೆಂಟ್ ಕ್ರಾಫ್ಟ್-2025' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಆಸ್ಪತ್ರೆ ಸಭಾಂಗಣದಲ್ಲಿ ಭಾನುವಾರ ನಡೆದ ಈ ಕಾರ್ಯಕ್ರಮದಲ್ಲಿ 65ಕ್ಕೂ ಹೆಚ್ಚು ಗರ್ಭಿಣಿಯರಿಗೆ ಗರ್ಭಧಾರಣೆ, ಸುರಕ್ಷಿತ ಹೆರಿಗೆ ಮತ್ತು ನಂತರದ ಪೋಷಣೆ ಬಗ್ಗೆ ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗದ ತಜ್ಞ ವೈದ್ಯರಾದ ಡಾ.ಶಾಹೀನ್ ಅಖ್ತರ್, ಡಾ.ಕೆ.ಜಿ.ಅಮೂಲ್ಯ, ಮಕ್ಕಳ ತಜ್ಞ ಡಾ.ವೈ.ಸಿ.ಅನಿಲ್ ಕುಮಾರ್ ಅವರನ್ನೊಳಗೊಂಡ ತಜ್ಞರ ತಂಡ ಮಾರ್ಗದರ್ಶನ ನೀಡಿತು. ಇದೇ ವೇಳೆ ಫಿಸಿಯೋಥೆರಪಿ ಮತ್ತು ಆಹಾರ ತಜ್ಞರೂ, ಗರ್ಭಾವಸ್ಥೆ ಪೂರ್ವ ಮತ್ತು ನಂತರದ ಆರೈಕೆ, ಹೆರಿಗೆಯ ವಿಧಾನಗಳು, ನವಜಾತ ಶಿಶುವಿನ ಆರೋಗ್ಯ ಮತ್ತು ತಾಯಿಯ ಆರೋಗ್ಯ ಕುರಿತ ಮಾಹಿತಿ ಹಂಚಿಕೊಂಡರು.

ಕಾರ್ಯಕ್ರಮ ಡಾ.ಶಾಹೀನ್ ಅಖ್ತರ್ ಮಾತನಾಡಿ, ಮಾಹಿತಿಗಾಗಿ ಉತ್ಸಾಹದಿಂದ ಭಾಗವಹಿಸಿರುವ ಭಾವಿ ಪೋಷಕರನ್ನು ನೋಡುವುದು ನಿಜಕ್ಕೂ ಸ್ಫೂರ್ತಿ ದಾಯಕವಾಗಿದೆ. ಆತ್ಮವಿಶ್ವಾಸದಿಂದ ಈ ತಾಯ್ತನದ ಪ್ರಯಾಣದಲ್ಲಿ ಸ್ಪಷ್ಟತೆ, ಸಹಾಯ ಮತ್ತು ಭರವಸೆ ನೀಡುವುದು ನಮ್ಮ ಮುಖ್ಯ ಗುರಿಯಾಗಿದೆ ಎಂದು ತಿಳಿಸಿದರು.

ಡಾ.ಕೆ.ಜಿ.ಅಮೂಲ್ಯ ಮಾತನಾಡಿ, ವಿಶ್ವಾಸಾರ್ಹ ಮಾಹಿತಿ ಮತ್ತು ಸಮಗ್ರ ಮಾರ್ಗದರ್ಶನದೊಂದಿಗೆ ಪೋಷಕರನ್ನು ಪ್ರೋತ್ಸಾಹಿಸುವುದು 'ಪೇರೆಂಟ್ ಕ್ರಾಫ್ಟ್' ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ. ಪೋಷಕರು ಉತ್ಸಾಹದಿಂದ ಪಾಲ್ಗೊಂಡು ಉತ್ತಮ ಪ್ರಶ್ನೆಗಳನ್ನು ಕೇಳುವ ಮೂಲಕ ಆರೋಗ್ಯಕರ ತಾಯ್ತನದ ಬಗ್ಗೆ ತಿಳಿದುಕೊಂಡಿದ್ದೀರಿ. ಪೋಷಕರಿಗೆ ಇಂತಹ ವೇದಿಕೆಗಳು ಅತ್ಯಂತ ಅವಶ್ಯವಾಗಿವೆ ಎಂದರು.

ಡಾ.ವೈ.ಸಿ.ಅನಿಲ್‌ಕುಮಾರ್, ನವಜಾತ ಶಿಶುವಿನ ಆರೈಕೆಯಲ್ಲಿರುವ ಆರಂಭಿಕ ಕಷ್ಟಗಳು, ಮಗುವಿಗೆ ಹಾಲುಣಿಸುವ ರೀತಿ, ಸೋಂಕು ಬರದಂತೆ ತಡೆಯುವ ವಿಧಾನ ಸೇರಿದಂತೆ ಹಲವು ಮಹತ್ವದ ಮಾಹಿತಿ ಹಂಚಿಕೊಂಡರು. ಇದೇ ವೇಳೆ ಫಿಸಿಯೋಥೆರಪಿ ತಂಡವು ಗರ್ಭಿಣಿಯರಿಗಾಗಿ ಸುರಕ್ಷಿತ ವ್ಯಾಯಾಮಗಳನ್ನು ಹೇಳಿಕೊಟ್ಟರು. ಆಹಾರ ತಜ್ಞರ ತಂಡ, ಆರೋಗ್ಯಕರ ಅಡುಗೆ ಮಾಡುವ ವಿಧಾನ ತಿಳಿಸಿಕೊಟ್ಟರು. ಗರ್ಭಧಾರಣೆಯ ಬಗ್ಗೆ ಇರುವ ತಪ್ಪು ಕಲ್ಪನೆಗಳು ಮತ್ತು ವಾಸ್ತವದ ಬಗ್ಗೆ ಚರ್ಚೆ, ಮೋಜಿನ ಆಟಗಳನ್ನು ಏರ್ಪಡಿಸಲಾಗಿತ್ತು.

ಹೆಣ್ಣು ಭ್ರೂಣ ಹತ್ಯೆ ತಡೆಗೆ ಎಲ್ಲಾ ಜಿಲ್ಲೆಗಳಲ್ಲಿ ಪ್ರತ್ಯೇಕ ನೋಡಲ್ ಅಧಿಕಾರಿಗಳ ನೇಮಕ

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಘೋಷಣೆ

ಬೆಳಗಾವಿ, ಡಿ.16- ರಾಜ್ಯದಲ್ಲಿ ಹೆಣ್ಣು ಭ್ರೂಣ ಹತ್ಯೆ ನಿಂತಿಲ್ಲ ಎಂಬುದನ್ನು ಒಪ್ಪಿಕೊಂಡಿರುವ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಇದನ್ನು ತಡೆಯಲು ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತಿದೆ ಎಂದು ಮಂಗಳವಾರ ವಿಧಾನಪರಿಷತ್ತಿನಲ್ಲಿ ಘೋಷಿಸಿದ್ದಾರೆ.

ಹೆಣ್ಣು ಭ್ರೂಣ ಹತ್ಯೆ ಸಾಮಾಜಿಕ ಅನಿಷ್ಟ ಎಂದು ಕರೆದ ಸಚಿವರು, ಇದನ್ನು ತಡೆಗಟ್ಟಲು ಸರ್ಕಾರ ಕಠಿಣ ಕ್ರಮ ಕೈಗೊಳ್ಳುತ್ತಿದೆ. ಎಲ್ಲಾ ಜಿಲ್ಲೆಗಳಲ್ಲಿ ಪ್ರತ್ಯೇಕ ನೋಡಲ್ ಅಧಿಕಾರಿಗಳನ್ನು ನೇಮಿಸುತ್ತಿದೆ. ಇಂತಹ ಚಟುವಟಿಕೆಗಳನ್ನು ನಿಯಂತ್ರಿಸಲು ಕಾನೂನು ಬಲಪಡಿಸುವಿಕೆಯನ್ನು ಸರ್ಕಾರ ಪರಿಗಣಿಸಲಿದೆ ಎಂದು ಅವರು ಭರವಸೆ ನೀಡಿದರು.

ಬಿಜೆಪಿ ಸದಸ್ಯ ಸಿ.ಟಿ. ರವಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಹೆಣ್ಣು ಭ್ರೂಣ ಹತ್ಯೆ ಖಂಡಿತ ನಿಂತಿಲ್ಲ. ನೀವು ಲಿಂಗ ಅನುಪಾತವನ್ನು ನೋಡಿದರೆ, ಬಹಳಷ್ಟು ವ್ಯತ್ಯಾಸವಿದೆ. ಇದು ನಡೆಯುತ್ತಿದೆ ಎಂದು ನಾನು ಒಪ್ಪಿಕೊಳ್ಳುತ್ತೇನೆ ಎಂದು ದಿನೇಶ್ ಗುಂಡೂರಾವ್ ಹೇಳಿದರು.

ಭ್ರೂಣ ಹತ್ಯೆಗಳು ಒತ್ತಡದಲ್ಲಿ ನಡೆಯುತ್ತಿಲ್ಲ. ಹೆಣ್ಣು ಮಗು ಬೇಡ ಎಂಬ ಕಾರಣಕ್ಕೆ ಸ್ವಯಂಪ್ರೇರಣೆಯಿಂದ ನಡೆಯುತ್ತಿದೆ. ಕೆಲವು ಆಸ್ಪತ್ರೆಗಳಲ್ಲಿ ಲಿಂಗ ಪತ್ತೆ ಆಧಾರದ ಮೇಲೆ ಇಂತಹ ಘಟನೆಗಳು ನಡೆಯುತ್ತಿವೆ. ಇದು ಕಾನೂನುಬಾಹಿರವಾಗಿದ್ದು, ತಂತ್ರಜ್ಞಾನದ ಪ್ರಗತಿಯೊಂದಿಗೆ ಪೋರ್ಟಬಲ್ ಅಲ್ಟ್ರಾಸೌಂಡ್ ಯಂತ್ರಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇದನ್ನು ಎಲ್ಲಿ ಬೇಕಾದರೂ ಸುಲಭವಾಗಿ ಸಾಗಿಸಬಹುದು ಪರಿಶೀಲಿಸಬಹುದು. ಇದಕ್ಕೆ ಕಡಿವಾಣ ಹಾಕಬೇಕಾದ ಅಗತ್ಯವಿದೆ. ಇದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರುತ್ತೇವೆ ಎಂದರು.



ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಮತ್ತು ಕೆಲವು ಆಸ್ಪತ್ರೆಗಳಲ್ಲಿ ಹೆಚ್ಚಿನ ಸಂಖ್ಯೆಯ ಗಂಡು ಮಕ್ಕಳ ಜನನಗಳು ದಾಖಲಾಗುತ್ತಿವೆ ಎಂಬುದು ಗುಪ್ತಚರ ಮಾಹಿತಿಯ ಮೂಲಕ ತಿಳಿದುಬರುತ್ತಿದೆ. ಯಾವ ತಾಲೂಕಿನಲ್ಲಿ ಪುರುಷ-ಮಹಿಳೆಯರ ಅನುಪಾತ ಹದಗೆಡುತ್ತಿದೆ, ಯಾವ ಆಸ್ಪತ್ರೆಯಲ್ಲಿ ಏನಾಗುತ್ತಿದೆ ಎಂಬ ಮಾಹಿತಿ ಕಲೆಹಾಕಿ ಸೂಕ್ತ ಪರಿಶೀಲನೆ ನಡೆಸಿ ಇಂತಹ ಜಾಲಕ್ಕೆ ಕಡಿವಾಣ ಹಾಕಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸಚಿವರು ತಿಳಿಸಿದರು.

ಹೆಣ್ಣು ಭ್ರೂಣ ಹತ್ಯೆಗೆ ಸಂಬಂಧಿಸಿ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾದವರನ್ನು ಗುರುತಿಸಲು ಕಳೆದ ಎರಡು ವರ್ಷಗಳಲ್ಲಿ ಏಳು ಕಡೆ ಡೆಕಾಯ್ ಆಪರೇಷನ್ ಮಾಡಲಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಮತ್ತು ಆಸ್ಪತ್ರೆಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಆದ್ಯತೆಯ ಮೇಲೆ ಹೆಚ್ಚಿನ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಎಂದು ಅವರು ಹೇಳಿದರು.

ಯಾವುದೇ ಕಟ್ಟುನಿಟ್ಟಿನ ಕಾನೂನನ್ನು ತರಲಾಗುತ್ತಿದೆಯೇ ಎಂಬ ರವಿ ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ಸರ್ಕಾರವು ಕಾನೂನನ್ನು ಬಲಪಡಿಸುವ ಮತ್ತು ಇದನ್ನು ನಿಯಂತ್ರಿಸಲು ಕಟ್ಟುನಿಟ್ಟಾಗಿ ಮಾಡುವ ಬಗ್ಗೆ ಪರಿಗಣಿಸುತ್ತದೆ ಎಂದರು.

ಕಳೆದ ಎರಡು ವರ್ಷಗಳಲ್ಲಿ ಅಸ್ತಿತ್ವದಲ್ಲಿರುವ ಕಾನೂನುಗಳಿಗೆ ಕೆಲವು ತಿದ್ದುಪಡಿಗಳನ್ನು ಮಾಡಲಾಗಿದೆ. ಸುಧಾರಿತ ತಂತ್ರಜ್ಞಾನ ಮತ್ತು ಅಂತರ್ಜಾಲವನ್ನು ಇಂತಹ ವಿಚಾರಗಳನ್ನು ಕೈಗೊಳ್ಳಲು ಬಳಸಲಾಗುತ್ತಿದೆ, ಗರ್ಭಪಾತಕ್ಕೆ ಮೌಖಿಕ ಔಷಧಿಗಳು ಕೌಂಟರ್‌ನಲ್ಲಿ ಲಭ್ಯವಿದೆ. ಅವುಗಳ ನಿಯಂತ್ರಣಕ್ಕೆ ಕಾನೂನು ತರಲು ನಾವು ಪರಿಶೀಲಿಸಬೇಕಾಗಿದೆ. ಅಂತಹ ಔಷಧಿಗಳ ಮಾರಾಟವನ್ನು ದಾಖಲಿಸಬೇಕು ಎಂದು ಆಹಾರ ಮತ್ತು ಔಷಧಿ ಆಡಳಿತವು ಫಾರ್ಮಾಸಿಸ್ಟ್‌ಗಳಿಗೆ ಸೂಚನೆಗಳನ್ನು ನೀಡಿದೆ. ಗರ್ಭಧಾರಣೆಯ ಪೂರ್ವ ಮತ್ತು ಪ್ರಸವಪೂರ್ವ ರೋಗನಿರ್ಣಯ ತಂತ್ರಗಳ (ಪಿಸಿ ಮತ್ತು ಪಿಎನ್‌ಡಿಟಿ) ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಮತ್ತು ಹೆಣ್ಣು ಭ್ರೂಣಗಳನ್ನು ಗುರುತಿಸುವುದು ಮತ್ತು ಹೆಣ್ಣು ಭ್ರೂಣ ಹತ್ಯೆಯ ವಿರುದ್ಧ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಸಚಿವರು ಹೇಳಿದರು.

ಪರಿಹಾರದ ಚೆಕ್ ಹಸ್ತಾಂತರ



ಇತ್ತೀಚೆಗೆ ಅಕಾಲಿಕವಾಗಿ ನಿಧನರಾದ ಹೆಚ್.ಡಿ.ಕೋಟೆ ತಾಲೂಕು ಆಲನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ರಾಜೇಶ್ ಅವರ ಪತ್ನಿ ಯೋಗಮಣಿ ಅವರಿಗೆ ಮೈಸೂರು ಜಿಲ್ಲಾ ಹಾಲು ಒಕ್ಕೂಟಗಳ ಸಹಕಾರ ಸಂಘದ ಅಧ್ಯಕ್ಷ ಈರೇಗೌಡ 1 ಲಕ್ಷ ರೂ. ಪರಿಹಾರದ ಚೆಕ್ ನೀಡಿದರು. ಈ ವೇಳೆ ಆಲನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಎ.ಪಿ.ಶಿವರಾಜು, ಉಪಾಧ್ಯಕ್ಷ ಮಲ್ಲಿಕಾರ್ಜುನಾಚಾರ್, ನಿರ್ದೇಶಕರಾದ ಶಿವರಾಜು, ರವಿಶಂಕರ್, ಶಿವಶಂಕರ್, ಸೌಭಾಗ್ಯ, ರಾಜನಾಯಕ, ವಸಂತ, ಕುಮಾರ್, ನವೀನ್ ಕುಮಾರ್, ಕಾರ್ಯದರ್ಶಿ ಮತ್ತಿತರರು ಉಪಸ್ಥಿತರಿದ್ದರು.

ಗಾಂಧೀಜಿ ಗ್ರಾಮ ಸ್ವರಾಜ್ ಆಶಯಕ್ಕೆ ಬಿಜೆಪಿ ಎಳ್ಳುನೀರು

ಸಂಸದ ಸುನಿಲ್ ಬೋಸ್ ಆರೋಪ

ಮೈಸೂರು, ಡಿ.16- ಮಹಾತ್ಮ ಗಾಂಧೀಜಿಯವರ ಗ್ರಾಮ ಸ್ವರಾಜ್ ಆಶಯಕ್ಕೆ ಕೇಂದ್ರದ ಬಿಜೆಪಿ ಸರ್ಕಾರ ಎಳ್ಳು-ನೀರು ಬಿಡುತ್ತಿದೆ ಎಂದು ಚಾಮರಾಜನಗರ ಕ್ಷೇತ್ರದ ಸಂಸದ ಸುನೀಲ್‌ಬೋಸ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಯುಪಿಎ ಅವಧಿಯಲ್ಲಿ ಗ್ರಾಮೀಣ ಜನರ ಉದ್ಯೋಗ ಅವಕಾಶಗಳನ್ನು ಖಾತರಿಪಡಿಸುವ ಮತ್ತು ಗ್ರಾಮೀಣ ಜನರ ಶ್ರಮದ ಬದುಕಿಗೆ ನೆರವಾಗುವ ನಿಟ್ಟಿನಲ್ಲಿ ಜಾರಿಗೊಳಿಸಲಾದ ಮನ್‌ರೇಗಾ ಯೋಜನೆಯ ಹೆಸರನ್ನು ಬದಲಿಸುವ ಕೆಲಸಕ್ಕೆ ಕೇಂದ್ರ ಸರ್ಕಾರ ಕೈ ಹಾಕಿದ್ದು, ಮಹಾನ್ ಶಾಂತಿದೂತ, ಸ್ವಾತಂತ್ರ್ಯ ಹೋರಾಟಗಾರ ಗಾಂಧೀಜಿಯವರ ಮೇಲಿನ ದ್ವೇಷದ ಮನಸ್ಥಿತಿಯನ್ನು ಮುಂದುವರೆಸಿದೆ. ಗಾಂಧೀಜಿಯವರ ಜೊತೆಗೆ ಅವರ ಕನಸಿನ ಗ್ರಾಮ ಸ್ವರಾಜ್ಯ ಕಲ್ಪನೆಯ ಆಶಯಕ್ಕೂ ಕೊಡಲಿ ಪೆಟ್ಟು ನೀಡುವ ಪ್ರಯತ್ನ ಮಾಡುತ್ತಿರುವ ಕೇಂದ್ರ ಸರ್ಕಾರ, ಎಲ್ಲದರಲ್ಲೂ ರಾಮನನ್ನು ಎಳೆದು ತರುವ ಉಮೇದಿಗೆ ಬಿದ್ದಂತೆ ಕಾಣುತ್ತಿದೆ.




ಮನ್‌ರೇಗಾ ಯೋಜನೆ ಹೆಸರು ಬದಲಾವಣೆ ಚಿಂತನೆ ಖಂಡಿಸಿ ನವದೆಹಲಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಸಂಸದ ಸುನೀಲ್ ಬೋಸ್ ಪಾಲ್ಗೊಂಡಿದ್ದರು.

ಕರ್ನಾಟಕ ರಾಜ್ಯವು ಈಗಾಗಲೇ ದೇಶದಲ್ಲಿ ಹೆಚ್ಚು ತೆರಿಗೆ ಪಾವತಿಸುವ ರಾಜ್ಯಗಳ ಪೈಕಿ ಮುಂಚೂಣಿಯಲ್ಲಿದ್ದರೂ ಸಹ, ತೆರಿಗೆ ಪಾಲನ್ನು ಪಡೆಯುವಾಗ ಬಹಳಷ್ಟು ಅನ್ಯಾಯವನ್ನು ಎದುರಿಸುವಂತಾಗಿದೆ. ಒಕ್ಕೂಟ ವ್ಯವಸ್ಥೆಯ ಭಾಗವಾಗಿ ನಮ್ಮ ರಾಜ್ಯವು ಇದರ ಬಗ್ಗೆ ಹಲವು ಬಾರಿ ದನಿ ಎತ್ತಿದರೂ ರಾಜ್ಯಗಳ ಬೇಡಿಕೆಯನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿರುವ ಕೇಂದ್ರ ಸರ್ಕಾರ, ಮನ್‌ರೇಗಾ ಯೋಜನೆಯ ಹೆಸರು ಬದಲಿಸಿ, ದೇಶದ ಮಹಾನ್ ಸ್ವಾತಂತ್ರ್ಯ ಹೋರಾಟಗಾರರಿಗೆ ಅಪಮಾನ ಎಸಗುತ್ತಿದೆ.

ಪರಿಸ್ಥಿತಿ ಹೀಗಿರುವಾಗ ಒಕ್ಕೂಟ ವ್ಯವಸ್ಥೆಯ ಭಾಗವಾಗಿರುವ ರಾಜ್ಯಗಳು ಕೇಂದ್ರ ಸರ್ಕಾರಕ್ಕೆ ಪಾವತಿಸಬೇಕಾದ ತೆರಿಗೆ ಪ್ರಮಾಣವನ್ನು ಕಡಿತಗೊಳಿಸುವ ನಿಟ್ಟಿನಲ್ಲಿ ದಿಟ್ಟ ನಿರ್ಧಾರ ತೆಗೆದುಕೊಳ್ಳಬೇಕು ಎಂದು ನಾನು ಭಾವಿಸುತ್ತೇನೆ. ಬಹುಮುಖ್ಯವಾಗಿ ಗಾಂಧೀಜಿಯವರಿಗೆ ಅಗೌರವ ತೋರುವವರು ದೇಶದ ಜನರ ಮುಂದೆ ಕ್ಷಮೆಯಾಚಿಸಬೇಕೆಂದು ಸುನೀಲ್ ಬೋಸ್ ಪತ್ರಿಕಾ ಹೇಳಿಕೆಯಲ್ಲಿ ಆಗ್ರಹಿಸಿದ್ದಾರೆ.

ಜ.1, ಅರ್ಥಪೂರ್ಣವಾಗಿ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನ ಆಚರಣೆ

ಮೈಸೂರು,ಡಿ.16(ಎಸ್‌ಪಿಎನ್)- ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯನ್ನು ಜ.1 ರಂದು ಬೆಳಗ್ಗೆ 11 ಗಂಟೆಗೆ ಕರ್ನಾಟಕದ ಕಲಾಮಂದಿರದ ಆವರಣದಲ್ಲಿರುವ ಕಿರುರಂಗಮಂದಿರದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಅವರು ತಿಳಿಸಿದರು.



ಇಂದು ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ವಿಶ್ವಕರ್ಮ ಅಮರ ಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯ ಸಂಬಂಧ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಮರಶಿಲ್ಪಿ ಜಕಣಾಚಾರಿ ಅವರು ಒಬ್ಬರು ಮಹಾನ್ ಶಿಲ್ಪಿ ಇಂದು ಅವರ ಶಿಲ್ಪಕಲೆಗಳು ಹಲವಾರು ಶಿಲ್ಪಿಗಳಿಗೆ ಸ್ಫೂರ್ತಿ ಆಗಿವೆ.

ಅಂತಹವರ ಸಾಧನೆಗಳನ್ನು ಎಲ್ಲರಿಗೂ ತಿಳಿಸುವುದು ನಮ್ಮೆಲ್ಲರ ಕರ್ತವ್ಯವಾಗಿರುವುದರಿಂದ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯನ್ನು ಆಚರಿಸಲಾಗುತ್ತಿದೆ ಎಂದು ತಿಳಿಸಿದರು. ಸರ್ಕಾರದ ಶಿಷ್ಟಾಚಾರದಂತೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.

ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಡಿ. 16-ಮೈಸೂರಿನ ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಡಿ. 18 ರಂದು ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821-4259259 ಸಂಪರ್ಕಿಸಬಹುದು.

ಸಾಲುಮರದ ತಿಮ್ಮಕ್ಕರ ಸ್ಮರಣೆ



ಮೈಸೂರಿನ ಜಯನಗರದ ಇಸ್ಕಾನ್ ದೇವಾಲಯದ ಪಕ್ಕದಲ್ಲಿರುವ ಸಾಲುಮರದ ತಿಮ್ಮಕ್ಕ ಉದ್ಯಾನವನದಲ್ಲಿ ವಾಯುವಿಹಾರಿಗಳ ವತಿಯಿಂದ ಸಾಲುಮರದ ತಿಮ್ಮಕ್ಕರ ತಿಂಗಳ ಪುಣ್ಯ ತಿಥಿಯನ್ನು ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಅವರ ನೆನಪಿನಲ್ಲಿ ಗಿಡಗಳನ್ನು ನೆಟ್ಟು ಅರ್ಥಪೂರ್ಣವಾಗಿ ಸ್ಮರಿಸಲಾಯಿತು. ಈ ವೇಳೆ ನ್ಯಾಯವಾದಿ ವಿಜಯಾನಂದ, ಪೊಲೀಸ್ ಕಾನ್ಸ್‌ಟೇಬಲ್ ಮಹೇಶ್ ಕುಮಾರ್.ಬಿ, ಉದ್ಯಮಿ ಏಕನಾಥ್ ರೈ, ವೆಂಕಟೇಶ್, ವಕೀಲರಾದ ಜೋಷಿ, ನಾಗರಾಜು, ಮಧುರಾಜ್, ಪ್ರಕಾಶ್, ಮುತ್ತುರಾಜ್, ಅರಣ್ಯ ಇಲಾಖೆಯ ಶಿವಶಂಕರ್, ಶ್ರೀನಿಧಿ, ರಾಘವೇಂದ್ರ, ಅಯ್ಯಪ್ಪ, ಸಂಪತ್, ಪಟಾಕಿ ಮಂಜುನಾಥ್, ಅಕ್ಷಯ್, ವೇದಿತ.ಎಂ ಮತ್ತಿತರರು ಉಪಸ್ಥಿತರಿದ್ದರು.

ಕಡೇಮಾಡ ಬಿ.ಕಾರ್ಯಪ್ಪ ನಿಧನ

ಮೈಸೂರು, ಡಿ.16- ನಗರದ ಯಾದವಗಿರಿ ವಿವೇಕಾನಂದ ರಸ್ತೆಯ ದಿವಂಗತ ಕೆ.ಜಿ.ಬೆಳ್ಳಿಯಪ್ಪ ಅವರ ಪುತ್ರ ಕಡೇಮಾಡ ಬಿ.ಕಾರ್ಯಪ್ಪ (ವೃದ್ಧಿ-76 ವರ್ಷ) ಅವರು ಮಂಗಳವಾರ ಮುಂಜಾನೆ ನಿಧನರಾದರು.



ಇವರು ಪತ್ನಿ ಉಷಾ (ತಾಮನೆ ಕೊನೆರಿರಾ) ಮಗಳು ನೇಹಾ, ಅಳಿಯ ವರ ನಾಗರಾಜ್ ಮತ್ತು ಮೊಮ್ಮಗ ವಿಹಾನ್ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ(ಡಿ.17) ಮಧ್ಯಾಹ್ನ 2ಕ್ಕೆ ಗೋಕುಲಂ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.12.2025 ಬುಧವಾರ, ಮಳೆ ನಕ್ಷತ್ರ: ಮೂಲ, 16.12.2025 ರಿಂದ 28.12.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ವಿಶಾಖ, ರಾಹುಕಾಲ: ಮಧ್ಯಾಹ್ನ 12 ರಿಂದ 1.30 ರವರೆಗೆ

- **ಮರಿಮಲ್ಲಪ್ಪನವರ ಪ್ರೌಢಶಾಲೆ** : ಶಾಲಾ ವಾರ್ಷಿಕೋತ್ಸವ, ವಿದ್ಯಾರ್ಥಿ ಸಂಘದ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಮರಿಮಲ್ಲಪ್ಪನವರ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಪ್ರೊ. ಕೆ.ಎನ್. ಪಂಚಾಕ್ಷರಿಸ್ವಾಮಿ, ಮುಖ್ಯ ಆಹ್ವಾನಿತರು : ಅಪರ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು, ಉಪಸ್ಥಿತರು : ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಡಿ. ಉದಯಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣ, ಹೆಚ್.ಎಸ್. ಮಹೇಶ್, ಎಂ. ಜಯಶೇಖರ, ಪರಮೇಶ್ವರ ಕಣ್ಣೀಮನೆ, ಸ್ಥಳ: ಕಲಾಮಂದಿರ, ಬೆಳಗ್ಗೆ 9.30ಕ್ಕೆ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಕ್ಕಳಲ್ಲಿ ಕಂಡು ಬರುವ ಆಟಿಸಂ, ಕುತ್ತಿಗೆ ನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.
- **ಶ್ರೀಸೂತ್ರ ಆಯುರ್ಧಾಮ** : ಕಿಡ್ನಿ ಸ್ಟೋನ್ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಉಚಿತ ವೈದ್ಯಕೀಯ ತಪಾಸಣಾ ಹಾಗೂ ಸಲಹಾ ಶಿಬಿರ, ಸ್ಥಳ: ಶ್ರೀ ಸೂತ್ರ ಆಯುರ್ಧಾಮ, ಚಾಮುಂಡಿಪುರಂ, ಬೆಳಗ್ಗೆ 10 ರಿಂದ.
- **ಸುಯೋಗ್ ಆಸ್ಪತ್ರೆ** : ಉಚಿತ ಪ್ರಾಸ್ಟೇಟ್ ಗ್ರಂಥಿ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.
- **ರೈಲ್ವೆ ನಿವೃತ್ತಿದಾರರ ಸಂಘ** : ನಿವೃತ್ತಿದಾರರ ದಿನಾಚರಣೆ, ಉಪಸ್ಥಿತರು : ಮುದಿತ್ ಮಿತ್ತಲ್, ಹಿರಿಯ ಕಾರ್ಮಿಕ ಅಧಿಕಾರಿ ವಿಷ್ಣುಗೌಡ, ಹಿರಿಯ ಲೇಖಾಧಿಕಾರಿ ಹರ್ಷವರ್ಧನ್, ಪಾರ್ಥಸಾರಥಿ, ಜಿ.ಎಸ್. ಸ್ವಾಮಿನಾಥನ್, ಸ್ಥಳ: ಎಸ್‌ಸಿ,ಎಸ್‌ಟಿ ಸಭಾಂಗಣ, ಶೇಷಾದ್ರಿ ಅಯ್ಯರ್ ರಸ್ತೆ, ಬೆಳಗ್ಗೆ 10.30ಕ್ಕೆ.
- **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ** : ಧನುರ್ಮಾಸದ ವಿಶೇಷ ಪೂಜಾ, ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ರಾಘವೇಂದ್ರನಗರ.
- **ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ** : ಗೊಂಬೆಯಾಟ (ಪೊಪೆಟ್) ಕಾರ್ಯಾಗಾರ, ಸ್ಥಳ: ಹಾರ್ಡ್ವಿಕ್ ಶಾಲಾ ಆವರಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.
- **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ** : ರಾಷ್ಟ್ರೀಯ ಐಕ್ಯತಾ ಸಪ್ತಾಹ ದಿನಾಚರಣೆ ಅಂಗವಾಗಿ ಅಲ್ಪಸಂಖ್ಯಾತರ ಕಲ್ಯಾಣ ದಿನ ಕಾರ್ಯಕ್ರಮ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಮುಖ್ಯ ಅತಿಥಿಗಳು : ನಿವೃತ್ತ ಪ್ರಾಧ್ಯಾಪಕ ಪ್ರೊ. ಅಷ್ನಾ ಉರೂಜ್, ಕುಲಸಚಿವ ಪ್ರೊ. ಎಸ್.ಕೆ. ನವೀನ್ ಕುಮಾರ್, ಸ್ಥಳ: ಬಿಒಎಂ ಸಭಾಂಗಣ, ಆಡಳಿತ ಭವನ, ಬೆಳಗ್ಗೆ 11ಕ್ಕೆ.
- **ಸಾಧನಾ ಮಂದಿರ:** ಸರಸ್ವತಿ ಪೂಜೆ ವಿಶೇಷ ತರಬೇತಿ, ಅರ್ಥ, ಸಂಕೇತ, ಮಹತ್ವ, ಪ್ರಾಮುಖ್ಯತೆ, ಪ್ರಯೋಜನ ಮತ್ತು ವಿಧಾನಗಳೊಂದಿಗೆ, ಸ್ಥಳ: ಸಂಜೆ 6.30ಕ್ಕೆ ಶ್ರೀ ಸಂಕಷ್ಟಹರ ಗಣಪತಿ ದೇವಸ್ಥಾನ, ಬಿಇಎಂಎಲ್‌ನಗರ, ಶ್ರೀರಾಮಪುರ, ಸಂಜೆ 7.30ಕ್ಕೆ ಮೈಸೂರು ಮೃಗಾಲಯ, ಎಸ್‌ವಿಎಂ ಲೇಔಟ್, ಕೆನರಾ ಬ್ಯಾಂಕ್ ಹಿಂಭಾಗ, ವಿವೇಕಾನಂದನಗರ.
- **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ** : ವಿದುಷಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ಅವರಿಂದ ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಸ್ಥಳ: ಶ್ರೀವೇಣುಗೋಪಾಲಸ್ವಾಮಿ ದೇವಸ್ಥಾನ, ತ್ಯಾಗರಾಜ ರಸ್ತೆ, ಸಂಜೆ 6.30 ರಿಂದ.
- **ಮೈಸೂರು ವಿಶ್ವವಿದ್ಯಾನಿಲಯ** : ಮಾನಸ ಯುವ ಸಂವರ್ಧನೆ, ಯುವ ಸಬಲೀಕರಣ ಮತ್ತು ಔದ್ಯೋಗಿಕ ಕಾರ್ಯಾಗಾರದ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಉಪ ಪೊಲೀಸ್ ಆಯುಕ್ತರಾದ ಆರ್.ಎನ್. ಬಿಂದುಮಣಿ, ಅಪರ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು, ಅಧ್ಯಕ್ಷತೆ : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾ, ಉಪಸ್ಥಿತರು : ಮಾನಸ ಯುವ ಸಂವರ್ಧನೆ ಕಾರ್ಯಕಾರಿ ಸಮಿತಿ ಅಧ್ಯಕ್ಷ ಪ್ರೊ. ಡಿ. ಆನಂದ್, ಸ್ಥಳ: ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣ, ಸೆನೆಟ್ ಭವನ, ಮಾನಸಗಂಗೋತ್ರಿ, ಸಂಜೆ 4ಕ್ಕೆ.
- **ಸಪಸ ಸಂಗೀತ ವಿದ್ಯಾಲಯ, ಮೈಸೂರು, ಅಖಿಲ ಕರ್ನಾಟಕ ಸುಗಮ ಸಂಗೀತ ಒಕ್ಕೂಟ:** ಭಾವಗೀತೆಗಳ ಕಾರ್ಯಾಗಾರ, ಸ್ಥಳ: ಸಪಸ ಸಂಗೀತ ಶಾಲೆ, ಗಾನಭಾರತಿ ಹತ್ತಿರ, ಕುವೆಂಪುನಗರ, ಬೆಳಗ್ಗೆ 11 ಮತ್ತು ಸಂಜೆ 5 ರಿಂದ.
- **ನಿರಂತರ ಫೌಂಡೇಷನ್** : ನಿರಂತರ ರಂಗ ಉತ್ಸವ, ಕವಿ, ಸಂಸ್ಕೃತಿ ಚಿಂತಕ ಎಸ್ ಜಿ ಸಿದ್ದರಾಮಯ್ಯ, ಹಿರಿಯ ರಂಗಕರ್ಮಿ ರಾಮೇಶ್ವರಿ ವರ್ಮ, ಪ್ರಸಾದ್ ಕುಂದೂರು, ಸಂಜೆ 7ಕ್ಕೆ ಹಾಸನ ಮಾನವ ತಂಡದಿಂದ ಜಡೆ ಕೋಲಾಟ, ಸಂಜೆ 7ಕ್ಕೆ ಬೆಂಗಳೂರಿನ ಕಲಾಮಾಧ್ಯಮ ಕಲಾವಿದರಿಂದ ರಾಜೇಶ್ವರಿ ತೇಜಸ್ವಿಯವರ ಆತ್ಮಕಥೆ ಆಧಾರಿತ ನನ್ನ ತೇಜಸ್ವಿ ನಾಟಕ ಪ್ರದರ್ಶನ, ಸಂಗೀತ : ಬಿ.ಜೆ. ಭರತ್, ನಿರ್ದೇಶನ : ಬಿ.ಎಂ. ಗಿರಿರಾಜ, ಸ್ಥಳ: ಕಿರು ರಂಗಮಂದಿರ.
- **ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್** : ಕಲಾ ಸಪ್ತಮಿ ವಾರದ ಸಂಗೀತ ಕಾರ್ಯಕ್ರಮ, ಹಿಂದೂಸ್ಥಾನಿ ಕೊಳಲು ವಾದಕ ಸಮೀರ್ ರಾವ್ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಆದರ್ಶ ಶೆಣೈ ಕೆ.-ತಬಲಾ, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್, ವಿಜಯನಗರ 1ನೇ ಹಂತ, ಸಂಜೆ 6 ರಿಂದ.

ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು

- **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ** : ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ ಮತ್ತು ಶ್ರೀ ನಾರಾಯಣಸ್ವಾಮಿ ದೇವಸ್ಥಾನಗಳಲ್ಲಿ ಧನುರ್ಮಾಸ ವಿಶೇಷ ಪೂಜೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ-ಚಂದ್ರಶೇಖರ ದಾಮ್ಲೆ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಅಂಚೆ ದನಿ ಪಾರಿವಾಳದಿಂದ ಡ್ರೋನ್ ವರೆಗೆ ಅಂಚೆ ಪಯಣ - ಬಾನುಲಿ ಸರಣಿ, ಪ್ರಸ್ತುತಿ-ಡಾ. ಅಮ್ಮಸಂದ್ರ ಸುರೇಶ್, 6.40 ಅರಿವಿನ ಶಿಖರ-ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ-ಟಿ. ಎನ್. ಅಶ್ವಿನಿ ಹಾಗೂ ಕೆ. ಪಿ. ರೇವತಿ, ವ್ಯಾಖ್ಯಾನ-ಡಾ. ಮ. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು-ಹಂಸಿನಿ ಎಸ್. ಕುಮಾರ್, 8.30 ಚಿತ್ರಗೀತೆಗಳು, 9.00 ವೃತ್ತಿ ಮಾರ್ಗದರ್ಶನ ಸೌಂಡ್ ಇಂಜಿನಿಯರಿಂಗ್ ಕ್ಷೇತ್ರದಲ್ಲಿನ ಸಂಶೋಧನೆ ಮತ್ತು ವೃತ್ತಿಪರ ಅವಕಾಶಗಳು ಕುರಿತು ಇಂಜಿನಿಯರ್ ಮತ್ತು ಡಿ.ಆರ್.ಸಿ. ಸಿನಿಮಾಸ್ ಮಾಲೀಕರಾದ ಹನುಮಂತ್ ಸಿ.ಆರ್. ಅವರೊಂದಿಗಿನ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ-ಬೇದ್ರೆ ಎನ್. ಮಂಜುನಾಥ, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಮೈಸೂರು ಎಂ. ನಾಗರಾಜ್-ವೈಯೋಲಿನ್ ಹಾಗೂ ರಫೀಕ್ ಖಾನ್-ಸಿತಾರ್ ವಾದನದ ಜುಗಲ್ ಬಂದಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ-ನಿತಿನ್ ರಾಜಾರಾಂ ಶಾಸ್ತ್ರಿ, 12.45 ಜನಪದ ಸಂಗೀತ, 1.00 ಪ್ರಗತಿ ಪಥ - ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು-ಶಾಂತಲ ವಟ್ಟಂ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಪ್ರೊ. ರಾ. ವಿಶ್ವೇಶ್ವರನ್ - ವೀಣಾವಾದನ, 4.00 ಮಹಿಳಾರಂಗ-ಮಕ್ಕಳ ಪರೀಕ್ಷಾ ತಯಾರಿಯಲ್ಲಿ ಪೋಷಕರ ಪಾತ್ರ ಕುರಿತು ಶಿಕ್ಷಣ ಕ್ಷೇತ್ರದ ರಾಜ್ಯ ಸಂಪನ್ಮೂಲ ವ್ಯಕ್ತಿ, ಪಠ್ಯ ಪರಿಷ್ಕರಣ ಸಮಿತಿ ಸದಸ್ಯರು ಹಾಗೂ ತರಬೇತಿದಾರರಾದ ಎಂ. ದಿವಾಕರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು-ಕೆ. ನೇತ್ರಾ, 4.30 ಹಿಂದಿಚಿತ್ರಗೀತೆಗಳು, 4.45 ಹಿಂದಿ ಪಾಠ-ಎಸ್. ಎನ್. ಭಟ್ ಸೈಪಂಗಲ್ಲು, 5.00 ಕಟ್ಟೋಣ ಬನ್ನಿ ನಿರ್ಮಾಣ ತಾಂತ್ರಿಕತೆಗಳನ್ನ ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಪ್ರಾಯೋಜಕರು-ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಇಂಡಿಯಾ, ಮೈಸೂರು ಛಾಪ್ಟರ್, ವಿಷಯ-ಮಳೆ ನೀರಿನ ಸಂರಕ್ಷಣೆ, ಭಾಗವಹಿಸುತ್ತಾರೆ-ಮೈಸೂರಿನ ನ್ಯಾಷನಲ್ ಇನ್ಸಿಟಿಟ್ಯೂಟ್ ಆಫ್ ಇಂಜಿನಿಯರಿಂಗ್‌ನ ಕರ್ಟ್ ಸಂಸ್ಥೆಯ ನಿವೃತ್ತ ನಿರ್ದೇಶಕರಾದ ಯು.ಎನ್. ರವಿಕುಮಾರ್ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿವೃತ್ತ ಪರಿಸರ ಅಧಿಕಾರಿ ಜಿ.ಆರ್. ಗಣೇಶನ್. ಪ್ರಸ್ತುತಿ-ಎನ್. ಕೇಶವಮೂರ್ತಿ, 6.50 ಕೃಷಿರಂಗ-ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಕುರಿತು ಸಂವಾದ ಭಾಗವಹಿಸುತ್ತಾರೆ- ಮೈಸೂರಿನ ಗ್ರಾಮ್ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ. ಬಸವರಾಜ್, ಆರ್. ಶ್ರೇಷ್ಠ ಮತ್ತು ಹುಣಸೂರು ತಾಲೂಕು ಬಿಳಿಕೆರೆ ಗ್ರಾಮದ ಪಾರ್ವತಿ, ಪ್ರಸ್ತುತಿ-ಎನ್. ಕೇಶವಮೂರ್ತಿ, 7.45 ವಿಧಾನಮಂಡದಲ್ಲಿ ಇಂದು, 8.00 ಸಂಸತ್ ಸಮೀಕ್ಷಾ, 8.15 ವಿಶೇಷ ಕಾರ್ಯಕ್ರಮ ಸರಣಿ, ಮೈಸೂರು ಆಕಾಶವಾಣಿ ತೊಂಬತ್ತು- ನೆನಪುಗಳ ಹೊತ್ತು - ಮಾಲಿಕೆಯಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪುರಸ್ಕೃತರು ಮತ್ತು ಕುವೆಂಪು ಭಾಷಾ ಭಾರತಿಯ ಅಧ್ಯಕ್ಷರಾಗಿದ್ದ ಡಾ. ಪ್ರಧಾನ ಗುರುದತ್ತ ಅವರೊಂದಿಗಿನ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ -ಲೇಖಕಿ ಮತ್ತು ಅನುವಾದಕಿ ನಿವೇದಿತಾ .ಹೆಚ್., 8.45 ಹಿಂದಿ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣದ ಪ್ರಸಾರ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 17 ಬುಧವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 239 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮಳವಳ್ಳಿಯಲ್ಲಿ ಶ್ರೀ ಶಿವರಾತ್ರಿ ಶಿವಯೋಗಿಗಳ 1066ನೇ ಜಯಂತಿ ಮಹೋತ್ಸವಕ್ಕೆ ಚಾಲನೆ

ಧರ್ಮ, ಆರೋಗ್ಯ, ಶೈಕ್ಷಣಿಕ ಅಭಿವೃದ್ಧಿಗೆ ಸುತ್ತೂರು ಮಠದಿಂದ ನಿರಂತರ ಶ್ರಮ

ರಾಷ್ಟ್ರಪತಿ ದ್ರೌಪದಿ ಮುರ್ಮು ಶ್ಲಾಘನೆ

ಮಳವಳ್ಳಿ, ಡಿ.16(ಮೋಹನ್‌ರಾಜ್)– ಧರ್ಮ, ಆರೋಗ್ಯ ಮತ್ತು ಶೈಕ್ಷಣಿಕ ಅಭಿವೃದ್ಧಿಗೆ ಸುತ್ತೂರು ಸಂಸ್ಥಾನ ಮಠ ಹಿಂದಿನಿಂದಲೂ ನಿರಂತರವಾಗಿ ಶ್ರಮಿಸುತ್ತಿದ್ದು, ಜೆಎಸ್‌ಎಸ್ ಮಹಾ ವಿದ್ಯಾಪೀಠವು ದೇಶದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾಗಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಶ್ಲಾಘಿಸಿದರು.

ಮಳವಳ್ಳಿಯ ಶಾಂತಿ ಕಾಲೇಜು ಎದುರಿನ ಮೈದಾನದಲ್ಲಿ ಮಂಗಳವಾರದಿಂದ 6 ದಿನಗಳ ಕಾಲ ನಡೆಯಲಿರುವ ಸುತ್ತೂರಿನ ಆದಿ ಜಗದ್ಗುರು ಶ್ರೀಶಿವರಾತ್ರಿ ಶಿವಯೋಗಿಗಳ 1066ನೇ ಜಯಂತಿ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸುತ್ತೂರು ಮಠದ ಮಠಾಧೀಪತಿಗಳಾದ ರಾಜೇಂದ್ರ ಶ್ರೀಗಳು ಶಿಕ್ಷಣದ ಬಗ್ಗೆ ಸಾಕಷ್ಟು ದೂರದೃಷ್ಟಿ ಇಟ್ಟುಕೊಂಡಿದ್ದರು. ಅವರ ಸೇವೆಯ ಪರಂಪರೆಯನ್ನು ಇಂದಿಗೂ ಮುಂದುವರೆಸಿಕೊಂಡು ಬರುತ್ತಿರು ವುದು ಶ್ಲಾಘನೀಯ ಎಂದರು.

ಶಿವಯೋಗಿಗಳ ತ್ಯಾಗ ಮತ್ತು ಆಧ್ಯಾತ್ಮಿಕ ಶಕ್ತಿಗಳು ಬೆಳಕಿನ ದೀವಿಗೆಗಳಂತೆ. 8ನೇ ಶತಮಾನದಲ್ಲಿ ಮಠ ಸ್ಥಾಪಿಸಿದ ಶಿವಯೋಗಿಗಳು ಒಬ್ಬ ಅಖಂಡ ಗುರುಗಳಾಗಿದ್ದಾರೆ. ನಂತರ ಮುಂದೆ ಬಂದ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸಿದ್ದರು ಎಂದರು.

ಇಂದಿನ ಕ್ಷಿಪ್ರ ಬದಲಾವಣೆ ಮತ್ತು ಅನಿಶ್ಚಿತ ಕಾಲದಲ್ಲಿ ನೈತಿಕ ನಾಯಕತ್ವ ಗುಣಗಳು ಯುವ ಜನರಲ್ಲಿ ಮೂಡಬೇಕು. ಭಾರತದಲ್ಲಿ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಒಳಗೊಳ್ಳುವಿಕೆ ಅಭಿವೃದ್ಧಿ ಮತ್ತು ಮಾನವೀಯತೆ ಒಟ್ಟಿಗೆ ಸಾಗಬೇಕೆಂದು ಸಲಹೆ ನೀಡಿದರು.



ಮಳವಳ್ಳಿಯಲ್ಲಿ ಆದಿ ಜಗದ್ಗುರು ಶ್ರೀಶಿವರಾತ್ರಿ ಶಿವಯೋಗಿಗಳ 1066ನೇ ಜಯಂತಿ ಮಹೋತ್ಸವಕ್ಕೆ ಮಂಗಳವಾರ ರಾಷ್ಟ್ರಪತಿ ದ್ರೌಪದಿ ಮುರ್ಮು ಚಾಲನೆ ನೀಡಿದರು.

ನಾಳಿನ ಭಾರತಕ್ಕಾಗಿ ಯುವ ಜನರಲ್ಲಿ ಇಂತಹ ಮಠಗಳು ಸ್ಫೂರ್ತಿ ತುಂಬಬೇಕು. ಕರ್ನಾಟಕ ಇಂತಹ ಮಠಗಳ ಸೇವೆಯನ್ನು ಕಂಡಿವೆ. ಕಾಯಕವೇ ಕೈಲಾಸ ಎನ್ನುವುದು ಸಂತರಿಗೆ ಬರಿಯ ಮಾತಾಗಿರುವ ಪ್ರಸ್ತುತ ಸಂದರ್ಭದಲ್ಲಿ ಸುತ್ತೂರು ಶ್ರೀಗಳ ಜಯಂತಿಯನ್ನು ಮಠದಲ್ಲಿ ಮಾತ್ರ ಸೀಮಿತಗೊಳಿಸದೇ ನಾಡಿನಾದ್ಯಂತ ಪಸರಿಸುತ್ತಿರುವುದು ಉತ್ತಮ ಬೆಳವಣಿಗೆ. ಸುತ್ತೂರು ದೇಶ–ವಿದೇಶದಲ್ಲಿಯೂ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆಗಳನ್ನು ಆರಂಭಿಸಿದೆ. ಮಠದ ಪೀಠಾಧ್ಯಕ್ಷ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಸೇವೆ ಅಪಾರ ಎಂದು ಸ್ಮರಿಸಿದರು.

■ 6ನೇ ಪುಟಕ್ಕೆ

ಮೈಸೂರು ವಿಮಾನ ನಿಲ್ದಾಣ ವಿಸ್ತರಣೆಗೆ ಅಧಿಕಾರಿಗಳಿಂದ ಜಂಟಿ ಸ್ಥಳ ಪರಿಶೀಲನೆ

ಭಾರೀ ವಿಮಾನ ಕಾರ್ಯಾಚರಣೆಗೆ ಭೂಮಿ ಹಸ್ತಾಂತರ ಪ್ರಕ್ರಿಯೆ ಆರಂಭ

ಮೈಸೂರು, ಡಿ.16(ಆರ್‌ಕೆ)– ಬಹುನಿರೀಕ್ಷಿತ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದ ರನ್‌ವೇ ವಿಸ್ತರಿಸಿ ಭಾರೀ ವಿಮಾನಗಳ ಕಾರ್ಯಾಚರಣೆಗೆ ಸಜ್ಜುಗೊಳಿಸುವ ಪ್ರಕ್ರಿಯೆಯು ಇದೀಗ ವೇಗ ಪಡೆದುಕೊಂಡಿದೆ.

ಮೈಸೂರಿನಿಂದ ದೇಶದ ಹಲವು ನಗರಗಳಿಗೆ ವಿಮಾನ ಹಾರಾಟ ಸಂಪರ್ಕ ಕಲ್ಪಿಸುವ ಮೂಲಕ ನಗರದ ಪ್ರವಾಸೋದ್ಯಮ, ಕೈಗಾರಿಕೋದ್ಯಮ, ಐಟಿ–ಬಿಟಿ ಕ್ಷೇತ್ರ ಸೇರಿದಂತೆ ಸಮಗ್ರ ಅಭಿವೃದ್ಧಿಗೆ ಪೂರಕ ವಾತಾವರಣ ಕಲ್ಪಿಸಬೇಕೆಂಬ ಹಲವು ವರ್ಷಗಳ ಕನಸು ನನಸಾಗುವ ಕಾಲ ಇದೀಗ ಸಮೀಪಿಸುತ್ತಿದೆ.

ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಎಎಐ) ದ ಅಧಿಕಾರಿಗಳು ಸೋಮವಾರದಿಂದ 3 ದಿನಗಳ ಕಾಲ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಕರ್ಯ ಅಭಿವೃದ್ಧಿ ನಿಗಮ (ಕೆಎಸ್‌ಐಐಡಿಸಿ), ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್), ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಹೆಚ್‌ಎಐ) ಹಾಗೂ ಕಾವೇರಿ ನೀರಾವರಿ ನಿಗಮ ನಿಯಮಿತ (ಸಿಎನ್‌ಎನ್‌ಎಲ್) ಅಧಿಕಾರಿಗಳೊಂದಿಗೆ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ರನ್‌ವೇ ವಿಸ್ತರಣೆಗೆ ಭೂಮಿ ಹಸ್ತಾಂತರ ಸಂಬಂಧ ಜಂಟಿ ಸ್ಥಳ ಪರಿಶೀಲನೆ ನಡೆಸುತ್ತಿದ್ದಾರೆ.

ವಿಮಾನ ನಿಲ್ದಾಣದ ರನ್‌ವೇ ವಿಸ್ತರಣೆ ಹಾಗೂ ಮೇಲ್ದರ್ಜೆಗೇರಿಸುವ ಸಲುವಾಗಿ ಅಗತ್ಯವಿರುವ 206.12 ಎಕರೆ ಭೂಮಿಯನ್ನು ಹಸ್ತಾಂತಸರಿಸುವ ಪ್ರಕ್ರಿಯೆಗೆ ಇದೀಗ ಔಪಚಾರಿಕವಾಗಿ ಚಾಲನೆ ನೀಡಲಾಗಿದೆ. 2022 ರ ಏ.16 ರಂದು ಸರ್ಕಾರ ಹೊರಡಿಸಿದ ಆದೇಶದನ್ವಯ ರಾಜ್ಯ ಸರ್ಕಾರವು ಭೂಮಿ ಸ್ವಾಧೀನಪಡಿಸಿಕೊಂಡು ಹಸ್ತಾಂಸರಿಸಬೇಕಾಗಿದೆ.



ಮೈಸೂರು ವಿಮಾನ ನಿಲ್ದಾಣದ ನಿರ್ದೇಶಕಿ ಪಿ.ವಿ. ಉಷಾಕುಮಾರಿ ಮತ್ತಿತರರ ಅಧಿಕಾರಿಗಳು ವಿಮಾನ ನಿಲ್ದಾಣ ವಿಸ್ತರಣೆ ಸಂಬಂಧ ಮೈಸೂರು–ನಂಜನಗೂಡು ರಸ್ತೆಯುಲ್ಲಿ ಪರಿಶೀಲನೆ ನಡೆಸಿದರು.

ಮಂಡಕಳ್ಳಿ ವಿಮಾನ ನಿಲ್ದಾಣವನ್ನು ಬೋಯಿಂಗ್ 737 ಮತ್ತು ಏರ್‌ಬಸ್ ಎ 320 ನಂತಹ ವೈಡ್ ಬಾಡೀಡ್ ವಿಮಾನ ಹಾರಾಟಕ್ಕೆ ಸಜ್ಜುಗೊಳಿಸಲು ಇದೀಗ ಅಧಿಕಾರಿಗಳು ತೀವ್ರ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಸ್ಥಳ ಪರಿಶೀಲನೆ ನಡೆಸಿ, ಅಗತ್ಯ ದಾಖಲೆಗಳೊಂದಿಗೆ ವರದಿ ಸಲ್ಲಿಸಲು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಸಮನ್ವಯ ಸಾಧಿಸಲು ಪ್ರಯತ್ನ ಮಾಡುತ್ತಿದ್ದಾರೆ.

ಭಾರೀ ಗಾತ್ರದ ವಿಮಾನಗಳ ಕಾರ್ಯಾಚರಣೆಗೆ ರನ್‌ವೇಯನ್ನು ಪ್ರಸ್ತುತ ಇರುವ 1.7 ಕಿ.ಮೀ. ನಿಂದ 2.3 ಕಿ.ಮೀಗೆ ವಿಸ್ತರಿಸುವ ಯೋಜನೆಯಿಂದ ಅಂತರರಾಜ್ಯ ಸಂಪರ್ಕ ಕಲ್ಪಿಸುವ ಜೊತೆಗೆ ಮೈಸೂರಿನ ಪ್ರಸಿದ್ಧ ಭೌಗೋಳಿಕ ಸೂಚನೆ (ಜಿಐ) ಉತ್ಪನ್ನಗಳು, ಕೃಷಿ ಮತ್ತು ಕೈಗಾರಿಕಾ ರಫ್ತು ಮಾಡಲು ಅನುಕೂಲವಾಗಲಿದೆ. ಅಲ್ಲದೇ ಅಂತರಾಷ್ಟ್ರೀಯ ಪ್ರವಾಸಿಗರಿಗೆ ಅದರಲ್ಲೂ ವಿಶ್ವ ಪ್ರಸಿದ್ಧ ನಾಡಹಬ್ಬ ದಸರಾ ಸಂದರ್ಭದಲ್ಲಿ ಪ್ರಪಂಚಾದ್ಯಂತ ಪ್ರವಾಸಿಗರನ್ನು ಮೈಸೂರಿನತ್ತ ಆಕರ್ಷಿಸಲು ಪೂರಕವಾಗಲಿದೆ.

ಹೂಡಿಕೆಗಳು, ವ್ಯಾಪಾರ ಮತ್ತು ಉದ್ಯೋಗಾವಕಾಶ ವೃದ್ಧಿಗೊಳಿಸುವ ಹಾಗೂ ಆರ್ಥಿಕ ಅಭಿವೃದ್ಧಿಗೆ ಅನುಕೂಲವಾಗುವಂತೆ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸುವ ಬಗ್ಗೆ ಈ ಹಿಂದಿನ ಸಂಸದ ಪ್ರತಾಪ್ ಸಿಂಹ ಅವರು ನಿರಂತರ ಪ್ರಯತ್ನ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

■ 6ನೇ ಪುಟಕ್ಕೆ

ಮೈಸೂರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂಗೆ ಸರ್ಕಾರದೊಂದಿಗೆ ಸಮನ್ವಯತೆ


ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಮಾಹಿತಿ

ಮೈಸೂರು, ಡಿ.16(ಎಂಕೆ)– ಅರಮನೆ ನಗರಿ ಮೈಸೂರಿನಲ್ಲಿ ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂ ಆಗಬೇಕು. ಈ ನಿಟ್ಟಿನಲ್ಲಿ ಸರ್ಕಾರದೊಂದಿಗೆ ಸಮನ್ವಯ ಸಾಧಿಸಲಾಗುವುದು ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ(ಕೆಎಸ್‌ಸಿಎ) ನೂತನ ಅಧ್ಯಕ್ಷ ಹಾಗೂ ಅಂತರರಾಷ್ಟ್ರೀಯ ಮಾಜಿ ಕ್ರಿಕೆಟಿಗ ವೆಂಕಟೇಶ್ ಪ್ರಸಾದ್ ತಿಳಿಸಿದರು.

ಕೆಎಸ್‌ಸಿಎ ನೂತನ ಅಧ್ಯಕ್ಷರಾದ ಬಳಿಕ ಮೈಸೂರಿನ ಮಾನಸ ಗಂಗೋತ್ರಿಯಲ್ಲಿರುವ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರಿಕೆಟ್ ಸ್ಟೇಡಿಯಂಗೆ ಮಂಗಳವಾರ ಭೇಟಿ ನೀಡಿ ಮಾಧ್ಯಮ ಗಳಿಗೆ ಪ್ರತಿಕ್ರಿಯಿಸಿದ ಅವರು, ಮೈಸೂರು ಪ್ರತಿಯೊಬ್ಬರಿಗೂ ಹತ್ತಿರವಾದ ನಗರವಾಗಿದ್ದು, ಮೈಸೂರಿನಲ್ಲಿ ಅಂತರಾಷ್ಟ್ರೀಯ ಮಟ್ಟದ ಸ್ಟೇಡಿಯಂ ಆಗಬೇಕು ಎಂಬುದು ಎಲ್ಲರ ಅಭಿಲಾಷೆಯಾಗಿದೆ ಎಂದರು.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯಲ್ಲಿ ಉತ್ತಮ ತಂಡ ಕಟ್ಟಿದ್ದೇವೆ. ಹೊಸ ತಂಡದ ಮೂಲಕ ಕಳೆದ ಮೂರು ವರ್ಷದಲ್ಲಿ ಕಳೆದುಕೊಂಡಿರುವುದನ್ನು ಮತ್ತೆ ಕಟ್ಟುವ ಪ್ರಯತ್ನ ಮಾಡುತ್ತೇವೆ. ಶಾಲಾ, ಕಾಲೇಜು ಮಟ್ಟದಿಂದಲೂ ಕ್ರಿಕೆಟ್‌ಗೆ ಆದ್ಯತೆ ನೀಡಲಾಗುವುದು. ತಳಮಟ್ಟದಿಂದಲೂ ಪ್ರೋತ್ಸಾಹ ನೀಡುವ ಉದ್ದೇಶ ಹೊಂದಿದ್ದೇವೆ. ಮಹಿಳಾ ಕ್ರಿಕೆಟರ್‌ಗಳಿಗೂ ಅವಕಾಶ ಮಾಡಿಕೊಡಲಾಗುವುದು ಎಂದು ಭರವಸೆ ನೀಡಿದರು. ಬೆಂಗಳೂರಿನ ಹೊರವಲಯದಲ್ಲಿ ಸ್ಟೇಡಿಯಂ ನಿರ್ಮಾಣ ಕುರಿತು ಪ್ರತಿಕ್ರಿಯಿಸಿ,

■ 6ನೇ ಪುಟಕ್ಕೆ



ಕೆಎಸ್‌ಸಿಎ ನೂತನ ಅಧ್ಯಕ್ಷ ವೆಂಕಟೇಶ್ ಪ್ರಸಾದ್, ಕಾರ್ಯದರ್ಶಿ ಸಂತೋಷ್ ಮೆನನ್, ವ್ಯವಸ್ಥಾಪಕ ಸಮಿತಿ ಸದಸ್ಯ ಅವಿನಾಶ್ ವೈದ್ಯ ಹಾಗೂ ಬಿಸಿಸಿಐ ಮ್ಯಾಚ್ ರೆಫರಿ ಡಾ.ರೋಹಿತ್ ಪ್ರಕಾಶ್ (ಎಡದಿಂದ ಮೂರನೇಯವರು) ಅವರನ್ನು ಮೈಸೂರು ಝೋನ್ ಸಂಚಾಲಕ ಪಿ.ಶ್ರೀನಿವಾಸ್ ಪ್ರಸಾದ್ ಸ್ವಾಗತಿಸಿದರು.

ಒಂಟಿ ಮಹಿಳೆ ಮೇಲೆ ಹಲ್ಲೆ ನಡೆಸಿ, ಕೊಠಡಿಗೆ ಬೆಂಕಿ

ಮೈಸೂರಿನ ಬಿಎಂಶ್ರೀ ನಗರದಲ್ಲಿ ದುಷ್ಕರ್ಮಿಗಳ ಅಟ್ಟಹಾಸ

ಮೈಸೂರು, ಡಿ.16(ಪಿಎಂ)– ಮನೆಗೆ ನುಗ್ಗಿದ ದುಷ್ಕರ್ಮಿಗಳಿಬ್ಬರು, ಒಂಟಿ ಮಹಿಳೆಯ ಮೇಲೆ ಹಲ್ಲೆ ನಡೆಸಿದ್ದಲ್ಲದೆ, ರೂಂಗೆ ಬೆಂಕಿ ಇಟ್ಟು ಪರಾರಿಯಾದ ಘಟನೆ ಮಂಗಳವಾರ ರಾತ್ರಿ ಮೇಟಗಳ್ಳಿಯ ಬಿಎಂಶ್ರೀ ನಗರದಲ್ಲಿ ನಡೆದಿದೆ.

ಇಲ್ಲಿನ 3ನೇ ಮೇನ್‌ನ 14ನೇ ಕ್ರಾಸ್‌ನ ಮನೆಯೊಂದರ ಮೊದಲ ಅಂತಸ್ತಿನ ಮನೆಯಲ್ಲಿ ಒಬ್ಬರೇ ಇದ್ದ ನಾಗರತ್ನ (46) ಎಂಬ ಮಹಿಳೆಯ ಮೇಲೆ ಹಲ್ಲೆ ನಡೆಸಿದ ದುಷ್ಕರ್ಮಿಗಳು, ಅಷ್ಟಕ್ಕೆ ಸುಮ್ಮನಾಗದೇ ಮನೆಯ ಕೊಠಡಿಯೊಂದಕ್ಕೆ ಬೆಂಕಿ ಹಾಕಿ ಪರಾರಿಯಾಗಿದ್ದಾರೆ.

ಕೃತ್ಯ ನಡೆಸಿದ ಬಳಿಕ ದುಷ್ಕರ್ಮಿಗಳು ತಲೆಗೆ ಹೆಲ್ಮೆಟ್ ಧರಿಸಿ, ಕೈಗೆ ಗ್ಲೌಸ್ ಹಾಗೂ ಮುಖಕ್ಕೆ ಮಾಸ್ಕ್ ಹಾಕಿಕೊಂಡು ಓಡಿ ಹೋಗುವುದನ್ನು ಕಂಡು ಸ್ಥಳೀಯರು ಗಾಬರಿಯಾಗಿದ್ದಾರೆ. ಬಳಿಕ ನಾಗರತ್ನ ಅವರ ಮನೆಗೆ ಹೋಗಿ ನೋಡಿದಾಗ, ನಾಗರತ್ನ ಅವರು ರಕ್ತದ ಮಡುವಿನಲ್ಲಿ ಬಿದ್ದಿರುವುದು ಕಂಡು ಬಂದಿದೆ.

■ 6ನೇ ಪುಟಕ್ಕೆ

ಮೈಸೂರಲ್ಲಿ ಬೀದಿ ನಾಯಿಮರಿಗಳ ದತ್ತು ಸ್ವೀಕಾರ ಅಭಿಯಾನಕ್ಕೆ ಚಾಲನೆ



ಮೈಸೂರಿನ ಪುರಭವನದ ಆವರಣದಲ್ಲಿ ಮಂಗಳವಾರ ಆಯೋಜಿಸಿದ್ದ ಬೀದಿ ನಾಯಿ ಮರಿಗಳ ದತ್ತು ಸ್ವೀಕಾರ ಅಭಿಯಾನಕ್ಕೆ ಮೈಸೂರು ಮಹಾನಗರ ಪಾಲಿಕೆಯ ಆಯುಕ್ತ ಶೇಖ್ ತನ್ವೀರ್ ಆಸಿಫ್ ಹಾಗೂ ಇತರ ಗಣ್ಯರು ಚಾಲನೆ ನೀಡಿದರು.

ಮೈಸೂರು, ಡಿ.16(ಎಂಟಿವೈ)– ಮೈಸೂರಿನ ಪ್ರಾಣಿ ಪ್ರಿಯರು ದೇಸಿ ತಳಿ(ಬೀದಿ ನಾಯಿ)ಯ ಶ್ವಾನಗಳನ್ನು ದತ್ತು ತೆಗೆದುಕೊಂಡು ಸಾಕಲು ಮುಂದಾಗಬೇಕು ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮನವಿ ಮಾಡಿದರು.

ಮೈಸೂರಿನ ಪುರಭವನದ ಆವರಣದಲ್ಲಿ ಮಂಗಳವಾರ ಮೈಸೂರು ಮಹಾನಗರ ಪಾಲಿಕೆ, ಪಶುಸಂಗೋಪನಾ ಇಲಾಖೆ ಹಾಗೂ ಪೀಪಲ್ಸ್ ಫಾರ್ ಅನಿಮಲ್ಸ್ (ಪಿಎಫ್‌ಎ) ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಬೀದಿ ನಾಯಿಮರಿಗಳ ದತ್ತು ಸ್ವೀಕಾರ' ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಬೀದಿ ನಾಯಿಗಳ ಸಂರಕ್ಷಣೆ ವಿಚಾರದಲ್ಲಿ ಸುಪ್ರಿಂಕೋರ್ಟ್ ನೀಡಿರುವ ಆದೇಶದ ಹಿನ್ನೆಲೆಯಲ್ಲಿ ಮೈಸೂರಲ್ಲಿ ಬೀದಿ ನಾಯಿಗಳ ಸಂರಕ್ಷಣೆಗೆ ವಿವಿಧ ಕಾರ್ಯಕ್ರಮ ರೂಪಿಸಲಾಗಿದೆ. ಅದರ ಒಂದು ಭಾಗವಾಗಿ ಬೀದಿ ನಾಯಿಗಳ ದತ್ತು ಸ್ವೀಕಾರ ಅಭಿಯಾನ ಜಾರಿಗೆ ತರಲಾಗಿದೆ. ಇದರಿಂದ ಮೈಸೂರಿನ ನಾಗರೀಕರು, ಪ್ರಾಣಿ ಪ್ರಿಯರು ಸ್ಥಳೀಯ ತಳಿಯಾದ ಬೀದಿ ನಾಯಿಗಳನ್ನು ದತ್ತು ಪಡೆದು ಸಾಕುವುದರಿಂದ ಅವುಗಳಿಗೆ ಆಶ್ರಯ ನೀಡಿದಂತಾಗುತ್ತದೆ ಎಂದರು.

■ 6ನೇ ಪುಟಕ್ಕೆ

ಪಾಲಿಕೆಯ ವಲಯ ಆಯುಕ್ತರೂ ಸೇರಿದಂತೆ ಮೂವರಿಂದ ನಾಲ್ಕು ಶ್ವಾನ ಮರಿ ದತ್ತು ಸ್ವೀಕಾರ

ಮೈಸೂರು ಮಹಾನಗರ ಪಾಲಿಕೆ ಆಯೋಜಿಸಿದ್ದ ಬೀದಿ ನಾಯಿ ಮರಿಗಳ ದತ್ತು ಸ್ವೀಕಾರ ಅಭಿಯಾನದಲ್ಲಿ ಸಾಂಕೇತಿಕವಾಗಿ ನಾಲ್ಕು ನಾಯಿ ಮರಿಯನ್ನು ದತ್ತು ನೀಡಲು ತರಲಾಗಿತ್ತು ಅವುಗಳಲ್ಲಿ ಮೈಸೂರು ಮಹಾನಗರ ಪಾಲಿಕೆಯ ವಲಯ 6ರ ವಲಯ ಆಯುಕ್ತರಾದ ಎಂ.ಎಸ್.ಪ್ರತಿಭಾ ಅವರು ಎರಡು ನಾಯಿ ಮರಿಗಳನ್ನು ದತ್ತು ಪಡೆದರೆ, ಮೈಸೂರಿನ ಆದರ್ಶ ಹಾಗೂ ಸುದೀಪ್ ಎಂಬುವರು ಒಂದೊಂದು ನಾಯಿ ಮರಿಯನ್ನು ದತ್ತು ಸ್ವೀಕರಿಸಿ ಮನೆಗೆ ಕೊಂಡೊಯ್ದರು.


ಡಿ.21ರಿಂದ ಅರಮನೆ ಆವರಣದಲ್ಲಿ ವರ್ಣರಂಜಿತ ಮಾಗಿ ಉತ್ಸವ

10 ದಿನ ನಡೆಯಲಿರುವ ಫಲಪುಷ್ಪ ಪ್ರದರ್ಶನ ಹೂಗಳಲ್ಲಿ ಅರಳಿದೆ ಶೃಂಗೇರಿ ಶಾರದಾಂಭೆ ದೇವಾಲಯ

ಮೈಸೂರು, ಡಿ.16(ಎಂಟಿವೈ)– ಹೊಸ ವರ್ಷದ ಅಂಗವಾಗಿ ಮೈಸೂರು ಅರಮನೆಯ ಆವರಣದಲ್ಲಿ ಡಿ.21ರಿಂದ 31ರವರೆಗೆ ಮಾಗಿ ಉತ್ಸವದ ಫಲ–ಪುಷ್ಪ ಪ್ರದರ್ಶನ ಏರ್ಪಡಿಸಲಾಗಿದ್ದು, ಈ ಬಾರಿ ಲಕ್ಷಾಂತರ ಹೂವುಗಳಿಂದ ಶೃಂಗೇರಿ ದೇವಸ್ಥಾನದ ಮಾದರಿ ತಲೆ ಎತ್ತಿ ಪ್ರವಾಸಿಗರ ಕಣ್ಮನ ಸೆಳೆಯಲಿದೆ.

ಪ್ರತೀ ವರ್ಷದಂತೆ ಮಾಗಿ ಉತ್ಸವದ ಹಿನ್ನೆಲೆಯಲ್ಲಿ ಮೈಸೂರು ಅರಮನೆ ಮಂಡಳಿ 10 ದಿನಗಳ ಫಲ–ಪುಷ್ಪ ಪ್ರದರ್ಶನವನ್ನು ಈ ಬಾರಿಯೂ ಆಯೋಜಿಸಿದ್ದು, ಬಣ್ಣ–ಬಣ್ಣದ ಹೂವುಗಳಿಂದ ವಿವಿಧ ಆಕೃತಿಗಳನ್ನು ನಿರ್ಮಿಸಿ, ಹೆಸರಾಂತ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಿದೆ.

ಈ ಬಾರಿಯ ಫಲ–ಪುಷ್ಪ ಪ್ರದರ್ಶನದಲ್ಲಿ ಮೇರಿ ಗೋಲ್ಡ್, ಸಾಲ್ವಿಯಾ, ಡೇಲಿಯಾ, ಪಿಟೋನಿಯಾ, ಸೇವಂತಿಗೆ, ಕೋಲಿಯಸ್, ಸಿಲೋಷಿಯಾ, ಫ್ರೆಂಚ್ ಮೆರಿ ಗೋಲ್ಡ್, ಜೇನಿಯಾ ಸೇರಿದಂತೆ 35ಕ್ಕೂ ಹೆಚ್ಚು ಬಗೆಯ ಹೂವಿನ ಗಿಡಗಳನ್ನು 25 ಸಾವಿರ ಪಾಟ್‌ಗಳಲ್ಲಿ ಬೆಳೆಸಿ ಪ್ರವಾಸಿಗರನ್ನು ಆಕರ್ಷಿಸಲು ಜೋಡಣೆ ಮಾಡಲಾಗುತ್ತದೆ. ಈಗಾಗಲೇ ಹೂವಿನ ಗಿಡಗಳನ್ನು ಪಾಟ್‌ಗಳಲ್ಲಿ ಬೆಳೆಸಲಾಗಿದ್ದು, ಇನ್ನೆರಡು ದಿನದಲ್ಲಿ ಅರಮನೆಯ ಆವರಣದಲ್ಲಿರುವ ವರಾಹ ಸ್ವಾಮಿ ದೇವಾಲಯದ ಪಕ್ಕದ ಉದ್ಯಾನದಲ್ಲಿ ಫಲ–ಪುಷ್ಪ ಪ್ರದರ್ಶನಕ್ಕೆ ವಿವಿಧ ವಿನ್ಯಾಸದಲ್ಲಿ ಜೋಡಣೆ ಮಾಡಲಾಗುತ್ತದೆ.



ಆಕೃತಿಗಳು: ಮಾಗಿ ಉತ್ಸವದ ಫಲ–ಪುಷ್ಪ ಪ್ರದರ್ಶನದಲ್ಲಿ ಈ ಬಾರಿ ಲಕ್ಷಾಂತರ ಹೂಗಳಿಂದ ಆಕರ್ಷಕವಾಗಿ ಶೃಂಗೇರಿಯ ಶಾರದಾಂಭೆ ದೇವಾಲಯದ ಮಾದರಿಯನ್ನು ನಿರ್ಮಿಸಲಾಗುತ್ತದೆ. 50 ಅಡಿ ಅಗಲ, 16 ಅಡಿ ಉದ್ದ, 25 ಅಡಿ ಎತ್ತರದ ದೇವಾಲಯದ ಆಕೃತಿ ಮನಸೂರೆಗೊಳ್ಳಲಿದೆ. ಅಲ್ಲದೇ ವೃಕ್ಷಮಾತೆ ದಿವಂಗತ ಸಾಲು ಮರದ ತಿಮ್ಮಕ್ಕನವರ ಭಾವಚಿತ್ರವನ್ನು ಸಿರಿ ಧಾನ್ಯಗಳಿಂದ ಮೂಡಿಸಲಾಗುತ್ತದೆ. ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಮಾದರಿ ಚಿತ್ರ, ಭಾರತದ ಸಂವಿಧಾನದ ಘೋಷ ವಾಕ್ಯ, ತರಕಾರಿಯ ಕೆತ್ತನೆ, ಉಯ್ಯಾಲೆಯಲ್ಲಿ ಕುಳಿತಿರುವ ಕೃಷ್ಣ ಮತ್ತು ರಾಧೆ, ಭಾರತದ ಮಹಿಳಾ ಕ್ರಿಕೆಟಿಗರು ಗೆದ್ದ ವಿಶ್ವ ಕಪ್ ಮಾದರಿ, ಖೋ–ಖೋ, ಕಬಡ್ಡಿ, ಅಂಧರ ಕ್ರಿಕೆಟ್ ಆಟಗಾರರ ಭಾವಚಿತ್ರವನ್ನು ಡಿಜಿಟಲ್ ಬೋರ್ಡ್‌ನಲ್ಲಿ ಪ್ರದರ್ಶಿಸಲಾಗುತ್ತದೆ.

ಆಪರೇಷನ್ ಸಿಂಧೂರ: ಉಗ್ರಗಾಮಿಗಳನ್ನು ಸದೆಬಡಿಯಲು ಭಾರತೀಯ ಸೇನೆ ನಡೆಸಿದ ಆಪರೇಷನ್ ಸಿಂಧೂರದ ಯುದ್ಧ ಟ್ಯಾಂಕರ್,

■ 6ನೇ ಪುಟಕ್ಕೆ



ದೀಪಾಲಂಕಾರ, ಪಟಾಕಿ ಸಿಡಿತ

ಫಲ–ಪುಷ್ಪ ಪ್ರದರ್ಶನಕ್ಕೆ ಮೆರಗು ನೀಡುವ ನಿಟ್ಟಿನಲ್ಲಿ ಡಿ.21ರಿಂದ ಡಿ.31ರವರೆಗೆ ಪ್ರತೀ ದಿನ ಸಂಜೆ 7ರಿಂದ ರಾತ್ರಿ 9 ಗಂಟೆವರೆಗೆ ಅರಮನೆಗೆ ದೀಪಾಲಂಕಾರ ಮಾಡಲಾಗುತ್ತದೆ. ಅಲ್ಲದೇ ಡಿ.21ರಿಂದ 25ರವರೆಗೆ ಪ್ರತೀ ದಿನ ಸಂಜೆ 5 ಗಂಟೆಯಿಂದ 9.30ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಡಿ.31ರಂದು ರಾತ್ರಿ 11 ಗಂಟೆಯಿಂದ 12 ಗಂಟೆವರೆಗೆ ಕರ್ನಾಟಕ ಪೊಲೀಸ್ ಬ್ಯಾಂಡ್ ವಾದನದ ತಂಡದಿಂದ ಕರ್ನಾಟಕ ಮತ್ತು ಆಂಗ್ಲ ಬ್ಯಾಂಡ್ ವಾದನದ ಕಾರ್ಯಕ್ರಮ ಜರುಗಲಿದೆ. ಜ.1 (2026) ಮಧ್ಯರಾತ್ರಿ 12ರಿಂದ 12.15ರವರೆಗೆ ಅರಮನೆ ಆವರಣದಲ್ಲಿ ಶಬ್ದ ರಹಿತ ಹಸಿರು ಪಟಾಕಿ ಸಿಡಿಸುವ ಮೂಲಕ ಹೊಸ ವರ್ಷವನ್ನು ಸಂಭ್ರಮದಿಂದ ಬರಮಾಡಿಕೊಳ್ಳಲು ಮೈಸೂರು ಅರಮನೆ ಮಂಡಳಿ ಸಿದ್ಧತೆ ಮಾಡಿಕೊಂಡಿದೆ.

ನಕ್ಕರೆ ಅದೇ ಸ್ವರ್ಗ

ಗಂಡ : ನಾನು ಸತ್ತ ಮೇಲೆ ನೀನು ಇನ್ನೊಂದು ಮದುವೆ ಆಗ್ತೀಯಾ?

ಹೆಂಡತಿ : ಇಲ್ಲ... ನನ್ನ ತಂಗಿ ಜೊತೆ ಇದ್ದುಬಿಡ್ತೀನಿ!
ಒಂದು ವೇಳೆ ನಾನು ಸತ್ತರೆ ನೀವು ಬೇರೆ ಮದುವೆ ಆಗ್ತೀರಾ...?

ಗಂಡ : ಇಲ್ಲ ಮಾರಾಯ್ತಿ... ನಾನೂ ಕೂಡಾ ನಿನ್ನ ತಂಗಿ ಜೊತೆ ಇದ್ದು ಬಿಡ್ತೀನಿ.

ಮೈಸೂರು ಮಿತ್ರ

ಬುಧವಾರ, 17 ಡಿಸೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಯಾರನ್ನೇ ಆದರೂ ಪರೀಕ್ಷಿಸದೇ ನಂಬಬಾರದು,
ನಂಬಿದ ಮೇಲೆ ಪರೀಕ್ಷಿಸಬಾರದು. –ತಿರುವಳ್ಳವರ್.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮರಿ ಮಾಡುವ ಮೊದಲೇ ಮೊಟ್ಟೆಗಳನ್ನು ಎಣಿಸಬೇಡ.

ನಿಮ್ಮ ಪತ್ರಗಳು

ಕಾರ್ಯ ನಿರ್ವಹಿಸದ ಚುನಾವಣಾಧಿಕಾರಿಗಳು, ಕರೆ ಸ್ವೀಕರಿಸದ ಪಾಲಿಕೆ ಸಹಾಯವಾಣಿ

ಮಾನ್ಯರೆ,

'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಇತ್ತೀಚೆಗೆ ಪ್ರಕಟವಾದ 'ದಿನಾಂಕ 13 ಮತ್ತು 14 ರಂದು ಜಿಲ್ಲೆಯ 2915 ಬೂತ್‌ಗಳಲ್ಲಿ ಮತದಾರರ ಪಟ್ಟಿಯ ಮ್ಯಾಪಿಂಗ್ ಕಾರ್ಯ, ಮತದಾರರ ದಾರಿ ಕಾಯ್ದ ಬೂತ್ ಮಟ್ಟದ ಅಧಿಕಾರಿಗಳು, ಮತ ಗಟ್ಟೆಯತ್ತ ತಿರುಗಿಯೂ ನೋಡದ ಮತದಾರರು' ವರದಿ ನೋಡಿ ಆಶ್ಚರ್ಯ ವಾಯಿತು. ಏಕೆಂದರೆ ರಾಜ್ಯ ಚುನಾವಣಾ ಆಯೋಗ, ನಗರ ಪಾಲಿಕೆ ಅಧಿಕಾರಿಗಳು ಮ್ಯಾಪಿಂಗ್ ಮಾಡುವ ಕಾರ್ಯದ ಬಗ್ಗೆ ಪತ್ರಿಕೆ, ದೃಶ್ಯ ಮಾಧ್ಯಮ, ಆಕಾಶವಾಣಿ ಯಲ್ಲಾಗಲಿ ಇದುವರೆಗೂ ಒಂದು ಜಾಹೀರಾತನ್ನಾಗಲಿ, ಪ್ರಕಟಣೆಯನ್ನಾಗಲಿ ನೀಡಿರುವುದಿಲ್ಲ. ಹೀಗಿರುವಾಗ ಜನರು ಹೇಗೆ ಮತಗಟ್ಟೆಗೆ ಭೇಟಿ ನೀಡಲು ಸಾಧ್ಯ? ಇಂದು ಬೆಳಿಗ್ಗೆ ಪತ್ರಿಕೆಯಲ್ಲಿ ಇದನ್ನು ನೋಡಿದಾಗಲೇ ಅದು ಗಮನಕ್ಕೆ ಬಂದದ್ದು. ಇಂದು ಕೂಡ ಬೂತ್‌ನಲ್ಲಿ ಇಂತಹ ಕೆಲಸ ನಿರ್ವಹಿಸುತ್ತಾರೆ ಎಂದು ಇದ್ದ ಕಾರಣ ನಾನು ನನ್ನ ಕುಟುಂಬದ ಸದಸ್ಯರ ಪಟ್ಟಿಯನ್ನು ಖಾತರಿ ಪಡಿಸಿಕೊಳ್ಳುವ ಸಲುವಾಗಿ ನಮ್ಮ ಚಾಮುಂಡೇಶ್ವರಿ ಕ್ಷೇತ್ರ, ವಾರ್ಡ್ ನಂ 46ರ ಕನಕದಾಸನಗರ ಜೆ ಬ್ಲಾಕ್‌ನ ಮತಗಟ್ಟೆ ಸಂಖ್ಯೆ 216 ಮತ್ತು 217 ಹೊಂದಿ ರುವ ರೋಟರಿ ಶಾಲೆಗೆ ಹೋದರೆ ಅಲ್ಲಿ ಗೇಟ್‌ಗೆ ಬೀಗ ಹಾಕಿತ್ತು. ಅಲ್ಲಿಯ ಸ್ವಚ್ಛತಾ ಕೆಲಸ ನಿರ್ವಹಿಸಿಕೊಂಡು ಅಲ್ಲಿಯೇ ನೆಲೆಸಿರುವ ಮಹಿಳೆ ಯೊಬ್ಬರನ್ನು ಕೇಳಲಾಗಿ ಇಂದು ಶಾಲೆಗೆ ರಜೆ, ಯಾರೂ ಕೆಲಸ ನಿರ್ವಹಿಸುತ್ತಿಲ್ಲ ನಾಳೆ ಬನ್ನಿ ಎಂದರು. ಇದು ಚುನಾವಣಾ ಆಯೋಗ, ಮೈಸೂರು ನಗರ ಪಾಲಿಕೆ ಚುನಾವಣಾ ವಿಭಾಗದ ಅಧಿಕಾರಿಗಳ ಬೇಜವಾಬ್ದಾರಿಗೆ ಕನ್ನಡಿ ಹಿಡಿದಂತಿತ್ತು.

ಇನ್ನಾದರೂ ಸಂಬಂಧಪಟ್ಟವರು ಜನರಿಗೆ ಸರಿಯಾಗಿ ಮಾಹಿತಿ ನೀಡಿ, ಸರಿಯಾಗಿ ಕೆಲಸ ನಿರ್ವಹಿಸಲಿ. ಈ ಸಂಬಂಧ ಪಾಲಿಕೆ ಕಚೇರಿಯಲ್ಲಿ ವಿಚಾರಿಸೋಣ ಎಂದು ಪಾಲಿಕೆ ಸಹಾಯ ವಾಣಿ ಸಂಖ್ಯೆ2418800 ಗೆ 12.16 ಗಂಟೆಯಲ್ಲಿ (14.12.25) 2 ಬಾರಿ ಕರೆ ಮಾಡಿದರೂ ಕರೆಯನ್ನು ಸ್ವೀಕರಿಸಲಿಲ್ಲ. ಇದು ನಮ್ಮ ವ್ಯವಸ್ಥೆ.

–ಬಿ ಎಂ ಸುವರ್ಣ, ಕನಕದಾಸನಗರ, ಮೈಸೂರು.

100 ವಿದೇಶಿ ಹೂಡಿಕೆ ಸ್ವಾಗತಾರ್ಹ

ಮಾನ್ಯರೆ,

ದೇಶದ ವಿಮಾ ವಲಯದಲ್ಲಿ ವಿದೇಶಿ ನೇರ ಹೂಡಿಕೆಯನ್ನು (ಎಫ್‌ಡಿಐ) ಶೇಕಡಾ 100ಕ್ಕೆ ಏರಿಸುವ ಮಸೂದೆಗೆ ಕೇಂದ್ರ ಸಚಿವ ಸಂಪುಟ ಇತ್ತೀಚೆಗೆ ತನ್ನ ಅನುಮೋದನೆ ನೀಡಿದೆ. ಇದುವರೆಗೆ ಈ ಮಿತಿ ಶೇ 74 ರಷ್ಟಿತ್ತು. ಹಣಕಾಸು ಸುಧಾರಣೆಯ ಒಂದು ಭಾಗವಾಗಿ ಎಫ್‌ಡಿಐ ಮಿತಿಯನ್ನು ಶೇಕಡಾ 100ಕ್ಕೆ ಏರಿಸುವ ಸುಳಿವನ್ನು ವಿತ್ತ ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಈ ಬಾರಿಯ (2025–26) ಬಜೆಟ್ ಮಂಡಿಸುವ ಸಂದರ್ಭದಲ್ಲೇ ನೀಡಿದ್ದರು. ವಿಮಾ ಕ್ಷೇತ್ರದಲ್ಲಿ ಈಗಾಗಲೇ ಖಾಸಗಿಯವರ ಪ್ರಾಬಲ್ಯ ಹೆಚ್ಚಿದೆ. ಖಾಸಗಿ ವಿಮಾ ಕಂಪನಿಗಳು ತಮ್ಮ ವಿಮಾ ಉತ್ಪನ್ನಗಳ ಮಾರಾಟದಲ್ಲಿ ಹಿಂದೆಂದಿಗಿಂತ ಹೆಚ್ಚಾಗಿ ಸಕ್ರಿಯವಾಗಿವೆ. ಒಂದು ಕಾಲದಲ್ಲಿ ಸರ್ಕಾರಿ ಸ್ವಾಮ್ಯದ ಭಾರತೀಯ ಜೀವ ವಿಮಾ ನಿಗಮ ವಿಮಾ ಕ್ಷೇತ್ರದಲ್ಲಿ ಏಕಸ್ವಾಮ್ಯತೆ ಹೊಂದಿತ್ತಾದರೂ ಇತ್ತೀಚಿನ ಕೆಲವು ದಶಕಗಳಲ್ಲಿ ಖಾಸಗಿ ಹಾಗೂ ವಿದೇಶಿ ಕಂಪನಿಗಳು ವಿಮಾ ಕ್ಷೇತ್ರದಲ್ಲಿ ಹಿಡಿತ ಸಾಧಿಸಿವೆ. ವಿಮಾ ಕ್ಷೇತ್ರದಲ್ಲಿ ಲಕ್ಷಾಂತರ ಕೋಟಿ ಹೂಡಿಕೆಯಾಗುತ್ತಿದ್ದು, ಭಾರತದ ವಿಮಾ ಕ್ಷೇತ್ರ ವರ್ಷದಿಂದ ವರ್ಷಕ್ಕೆ ಹೆಚ್ಚು ಹೆಚ್ಚು ಹೂಡಿಕೆದಾರರನ್ನು ಆಕರ್ಷಿಸು ತ್ತಿದೆ. ಸರ್ಕಾರಿ ಮೂಲಗಳ ಪ್ರಕಾರ ವಿಮಾ ಕ್ಷೇತ್ರವು ಎಫ್‌ಡಿಐ ಮೂಲಕ ಇದುವರೆಗೆ 82,000 ಸಾವಿರ ಕೋಟಿ ಪಡೆದಿದೆ. ಒಟ್ಟಿನಲ್ಲಿ ಕೇಂದ್ರ ಸರ್ಕಾರದ ನಿರ್ಧಾರದಿಂದ ವಿದೇಶ ನೇರ ಬಂಡವಾಳದ ಹರಿವು ಮತ್ತಷ್ಟು ಹೆಚ್ಚುವ ಎಲ್ಲಾ ಸೂಚನೆಗಳಿವೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಸಭಾ ಕಾರ್ಯಕ್ರಮ ಚುಟುಕಾಗಿರಲಿ !

ಮಾನ್ಯರೆ,

ಮೊನ್ನೆ ಸ್ವರಾಂಜಲಿ ಸಂಸ್ಥೆಯವರು ಮೈಸೂರಿನ ಜೆ.ಕೆ.ಮೈದಾನದ ಅಮೃತ ಮಹೋತ್ಸವ ಸಭಾಂಗಣದಲ್ಲಿ ಆಯೋಜಿಸಿದ್ದ 'ಮಧುರ ಮಿಲನ್' ರಸಮಂಜರಿ ಕಾರ್ಯಕ್ರಮದಲ್ಲಿ ವೇದಿಕೆ ಕಾರ್ಯಕ್ರಮ ಸುಮಾರು ಒಂದೂವರೆ ಗಂಟೆಯಷ್ಟು ನಡೆದು ಹಾಡುಗಳಿಗೆ ಕಡಿವಾಣ ಹಾಕಲಾಯಿತು. ಇದು ಲೈವ್ ಕಾರ್ಯಕ್ರಮ ವಾಗಿದ್ದು ಪ್ರಣಯರಾಜ ಶ್ರೀನಾಥ್ ಅವರು ಅಭಿನಯಿಸಿದ್ದ ಚಲನಚಿತ್ರಗೀತೆಗಳನ್ನು ಪ್ರಸ್ತುತಪಡಿಸಲಾಯಿತು. ಕಲಾವಿದರು ಸುಮಾರು 25ರಿಂದ 30 ಹಾಡುಗಳನ್ನು 3 ಗಂಟೆಯೊಳಗೆ ಹಾಡಬೇಕೆಂದು ಮೊದಲೇ ಯೋಜನೆ ಹಾಕಿಕೊಂಡಿರುತ್ತಾರೆ. ಆದರೆ ಉದ್ಘಾಟಕರು ಹಾಗೂ ಮುಖ್ಯ ಅತಿಥಿಗಳು ಹೀಗೆ ಒಂದೂವರೆ ಗಂಟೆ ಭಾಷಣ ಬಿಗಿದರೆ ಕಲಾವಿದರಿಗೆ ಸಮಯದ ಅಭಾವದಿಂದ 50 ಭಾಗ ಮಾತ್ರ ಹಾಡುಗಳನ್ನು ಹಾಡಬೇಕಾಗುತ್ತದೆ. ಅದೂ ಉಪನ್ಯಾಸಕರಿಗೆ ಭಾಷಣ ಮಾಡಲು ಮೈಕ್ ಕೊಟ್ಟರೆ ಸಮಯಪ್ರಜ್ಞೆ ಇಲ್ಲದೇ ಗಂಟೆ ಗಟ್ಟಲೆ ಮಾತನಾಡುತ್ತಾರೆ. ಇನ್ನು ನಿರೂಪಕರೂ ಕೂಡ ಒಂದೊಂದು ಹಾಡಿಗೂ ಉದ್ದುದ್ದ ಹಾಡುಗಳ ವಿವರಣೆಯಲ್ಲಿಯೇ ಸಮಯ ಕಳೆದರೆ ರಸಮಂಜರಿ ಕಾರ್ಯಕ್ರಮ ಮತ್ತಷ್ಟು ಮೊಟಕಾಗುತ್ತದೆ. ಇನ್ನು ಮುಂದಾದರೂ ಆಯೋಜಕರು ಸಭಾ ಕಾರ್ಯಕ್ರಮಕ್ಕೆ ಹೆಚ್ಚು ಸಮಯ ತೆಗೆದುಕೊಳ್ಳದೇ ಕಾರ್ಯಕ್ರಮದತ್ತ ಹೆಚ್ಚು ಒಲವು ತೋರಬೇಕಿದೆ.

– ಜಿ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು

ಲಷ್ಕರ್ ಮೊಹಲ್ಲಾದ ವೀರನಗೆರೆ ಮಾರಿಗುಡಿ ಬಳಿ ಪೈಪ್ ಒಡೆದು ನೀರು ಪೋಲು



ಮಾನ್ಯರೆ,

ಮೈಸೂರಿನ ಲಷ್ಕರ್ ಮೊಹಲ್ಲಾದ ವೀರನಗೆರೆ ಮಾರಿಗುಡಿ ಸ್ಥಳದಲ್ಲಿ ಕುಡಿಯುವ ನೀರಿನ ಪೈಪು ಒಡೆದು ಒಂದು ತಿಂಗಳಿಂದ ನೀರು ಪೋಲಾಗುತ್ತಿತ್ತು. ಮೊನ್ನೆ ಅದರ ದುರಸ್ಥಿ ಮಾಡಿದರು. ಆದರೆ ಕಳಪೆ ದುರಸ್ಥಿ ಕೆಲಸದಿಂದ ಮತ್ತೆ ನೀರು ಪೋಲಾಗುತ್ತಿದೆ.

ನಗರ ಪಾಲಿಕೆಯ ವಲಯ (07) ಕಚೇರಿ ಹಿಂಭಾಗ ಕೂಗಳತೆ ದೂರದಲ್ಲಿರುವ ಸ್ಥಳಕ್ಕೆ ನಿತ್ಯ ನಗರಪಾಲಿಕೆ ಸಿಬ್ಬಂದಿ ಓಡಾಡುವ ದಾರಿಯಲ್ಲಿ ಕುಡಿಯುವ ನೀರು ಪೋಲಾಗುತ್ತಿದ್ದರೂ ಕಣ್ಣಿದ್ದು ಕುರುಡರಂತೆ ಸಂಬಂಧಪಟ್ಟವರ ಗಮನಕ್ಕೆ ತರದಿರುವುದು ವಿಪರ್ಯಾಸವೇ ಸರಿ. ವಾಣಿವಿಲಾಸ ಅಭಿಯಂತರರು ಇತ್ತ ಗಮನಹರಿಸಿ ಸೂಕ್ತ ಕ್ರಮ ಕೈಗೊಳ್ಳುವರೇ?

–ಶ್ರೀಕಂಠಮೂರ್ತಿ. ಎನ್, ಲಷ್ಕರ್ ಮೊಹಲ್ಲಾ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಭಗವದ್ಗೀತೆಯಲ್ಲಿ ಜೀವನ ಮೌಲ್ಯಗಳು

ಭಗವದ್ಗೀತೆ ಕೇವಲ ಏಳುನೂರು ಶ್ಲೋಕಗಳನ್ನೊಳಗೊಂಡಿರುವ ಪುಟ್ಟ ಗ್ರಂಥ. ಆದರೆ ಅದರ ಅರ್ಥವಿಸ್ತಾರವನ್ನು ತಿಳಿಸಲು ನೂರಾರು ಭಾಷೆಗಳಲ್ಲಿ ಸಾವಿರಾರು ಗ್ರಂಥಗಳು ಹುಟ್ಟಿವೆ. ಮುಂದೆಯೂ ಹುಟ್ಟಬಹುದು. ಯಾವ ವಿಷಯದಲ್ಲಿ ಮಾತನಾಡಬೇಕಾದರೂ ಗೀತೆಯ ಉಕ್ತಿಗಳನ್ನು ವಾಗ್ಮಿಗಳು ಉದಾಹರಿಸುತ್ತಾರೆ. ಜೀವನ ಮೌಲ್ಯಗಳಂತಹ ಮುಖ್ಯ ವಿಷಯದ ಬಗೆಗೆ ಅದರಲ್ಲಿ ಏನು ಸಾಮಗ್ರಿ ದೊರಕುವುದೆಂದು ನೋಡೋಣ.

1) ಆತ್ಮ ವಿಶ್ವಾಸ

ಭಗವದ್ಗೀತೆ ಮುಖ್ಯವಾಗಿ ತಿಳಿಸುವುದೇನೆಂದರೆ ಮನುಷ್ಯ ಆತ್ಮಾವಲಂಬಿಯಾಗಬೇಕು, ಪರಾವಲಂಬಿಯಾಗಬಾರದು ಎಂಬುದನ್ನು

ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್ ।
ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ॥

(ಮಾನವನು ತನ್ನನ್ನು ತಾನೇ ಉದ್ಧರಿಸಿಕೊಳ್ಳಬೇಕು. ತನ್ನನ್ನು ತಾನೇ ಹಾಳು ಮಾಡಿಕೊಳ್ಳಬಾರದು. ಆತ್ಮನೇ ತನ್ನ ಬಂಧು, ಆತ್ಮನೇ ತನ್ನ ಶತ್ರು).

ಯಾರೋ ಬಂದು ತನ್ನನ್ನು ಉದ್ಧರಿಸುವರೆಂಬ ಭ್ರಮೆ ಬೇಡ. ತಾನೇ ಪ್ರಯತ್ನ ಮಾಡದಿದ್ದರೆ ಯಾವ ದೇವರೂ ಬಂದು ಮನುಷ್ಯರನ್ನು ಮೇಲೆತ್ತುವುದಿಲ್ಲ. ನಮ್ಮನ್ನು ನಾವೇ ರಕ್ಷಿಸಿಕೊಳ್ಳಬೇಕು. ನಾವೇ ಎದ್ದು ನಿಲ್ಲಬೇಕು. ಉತ್ತಿಷ್ಠತ, ಜಾಗ್ರತ, ಪ್ರಾಪ್ಯವರಾನ್ ನಿಬೋಧಿತ (ಎದ್ದು ನಿಲ್ಲಿ, ಎಚ್ಚರಗೊಳ್ಳಿ, ಶ್ರೇಷ್ಠರ ಬಳಿ ತೆರಳಿ ಅರಿತುಕೊಳ್ಳಿರಿ) ಎಂದು ಉಪನಿಷತ್ತು ಹೇಳುತ್ತಿದೆ. ಇದನ್ನೇ ಸ್ವಾಮಿ ವಿವೇಕಾನಂದರು Arise, awake, stop not till the goal is reached ಎಂದು ಹೇಳಿದರು. ನಮ್ಮನ್ನು ನಾವೇ ಹಾಳು ಮಾಡಿಕೊಂಡರೆ ಯಾರು ಹೊಣೆ. ಹಾಗಾಗುವುದು ಬೇಡವೆನ್ನುತ್ತದೆ ಭಗವದ್ಗೀತೆ. ಎಷ್ಟು ಜನ ಯುವಕರು ಮಾದಕ ವಸ್ತುಗಳಿಗೆ, ಮದ್ಯಪಾನ ಧೂಮಪಾನಗಳಿಗೆ, ಕೆಟ್ಟ ಚಟಗಳಿಗೆ ದಾಸರಾಗಿ ತಮ್ಮನ್ನು ತಾವೇ ಹಾಳು ಮಾಡಿಕೊಳ್ಳುತ್ತಿಲ್ಲ? ಜೂಜಿನ ಗೀಳಿಗೆ ಗುಲಾಮರಾಗಿ ಎಷ್ಟು ಜನ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿಲ್ಲ? ತನ್ನನ್ನು ತಾನು ಉದ್ಧರಿಸಿಕೊಂಡರೆ ತಾನೇ ತನ್ನ ಬಂಧು, ತನ್ನನ್ನು ತಾನೇ ಕೆಳಕ್ಕೆ ತುಳಿದರೆ ನೀನು ನಂಬು, ಆತ್ಮವಿಶ್ವಾಸವನ್ನಿಟ್ಟುಕೋ ಎಂದು ಭಗವದ್ಗೀತೆ ಬೋಧಿಸುತ್ತಿದೆ.

2) ಧರ್ಮ

ಧಾರಣಾದ್ ಧರ್ಮ ಇತ್ಯಾಹುರ್ಧರ್ಮೋ ಧಾರಯತೇ ಪ್ರಜಾಃ ಎಂದು ಧರ್ಮದ ಲಕ್ಷಣವನ್ನು ಹೇಳಿದ್ದಾರೆ. ಎಲ್ಲ ಪ್ರಜೆಗಳನ್ನು ಸರಿಯಾಗಿ ನ್ಯಾಯಾನುಗುಣವಾಗಿ ನಡೆಸಿಕೊಂಡು ಹೋಗುವ ನಿಯಮವೇ ಧರ್ಮ. ಅದರ ಸ್ಥಾಪನೆಗಾಗಿಯೇ ತಾನು ಲೋಕದಲ್ಲಿ ಕಾಣಿಸಿಕೊಂಡಿರುವುದೆಂದು ಕೃಷ್ಣನು ಗೀತೆಯಲ್ಲಿ ಹೇಳಿದ್ದಾನೆ –

ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ॥

ಸಾಧುಗಳೆಂದರೆ ಧರ್ಮ ಮಾರ್ಗದಲ್ಲಿ ನಡೆಯುವವರು, ದುಷ್ಕೃತರೆಂದರೆ ಧರ್ಮದ ವಿರೋಧಿಗಳು. ಸಾಧುಗಳ ರಕ್ಷಣೆಗಾಗಿ, ಅವರ ವಿರೋಧಿಗಳ ನಾಶಕ್ಕಾಗಿ, ಧರ್ಮದ ಸಂಸ್ಥಾಪನೆಗಾಗಿ ಪ್ರತಿಯುಗದಲ್ಲೂ ನಾನು ಆವಿರ್ಭವಿಸುತ್ತೇನೆ ಎಂಬುದು ಈ ಶ್ಲೋಕದ ತಾತ್ಪರ್ಯ.

ಧರ್ಮ ಎಂಬುದು ಸಾರ್ವತ್ರಿಕ, ಸಾರ್ವಕಾಲಿಕ. ಹಿಂದೂ ಧರ್ಮ, ಬೌದ್ಧ ಧರ್ಮ ಇತ್ಯಾದಿ ಹೇಳುವುದು ಸರಿಯಲ್ಲ. ಅವೆಲ್ಲ ಮತಗಳು ಅಭಿಪ್ರಾಯಗಳು. ವಿಷ್ಣುವೇ ಪರಮ ದೇವತೆ ಎನ್ನುವುದು ವೈಷ್ಣವಮತ, ಶಿವನೇ ಪರದೈವವೆನ್ನುವುದು ಶೈವಮತ. ಹೀಗೆ ಪ್ರಪಂಚದಲ್ಲಿ ನೂರಾರು ಮತಗಳಿರಬಹುದು. ಆದರೆ ಸತ್ಯವನ್ನೇ ನುಡಿಯಬೇಕು. ಯಾವ ಜೀವಿಗೂ ಹಿಂಸೆಯನ್ನು ಕೊಡಬಾರದು, ಪರೋಪಕಾರ ಮಾಡಬೇಕು, ಕಷ್ಟ ಪಡುವವರ ಬಗೆಗೆ ಕರುಣೆ ಇರಬೇಕು ಎಂಬುದು ಧರ್ಮ. ಯಾವ ಮತದವರೂ ಸುಳ್ಳನ್ನು ಹೇಳಬೇಕೆಂದು ಉಪದೇಶಿಸಿಲ್ಲ, ಮೋಸವನ್ನು ಮಾಡು ಎಂದು ವೇದಗಳಲ್ಲಾಗಲಿ, ಖುರಾನಿನಲ್ಲಾಗಲಿ, ಬೈಬಲ್‌ನಲ್ಲಾಗಲಿ ಹೇಳಿಲ್ಲ. ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ. ಇವೆಲ್ಲವೂ ಧರ್ಮ. ಇದು ಮಾನವ ಸಮಾಜದ ಉಳಿವಿಗೆ ಆವಶ್ಯಕ. ನೀವು ವಿಷ್ಣುವನ್ನಾದರೂ ಪೂಜಿಸಿ, ಏಸುವನ್ನಾದರೂ ಪ್ರಾರ್ಥಿಸಿ, ಅಲ್ಲಾಹನನ್ನಾದರೂ ಆರಾಧಿಸಿರಿ. ಅದು ನಿಮ್ಮ ನಿಮ್ಮ ಮತ. ನೀವು ಸತ್ಯವನ್ನು ಹೇಳುತ್ತಿದ್ದರೆ, ಹಿಂಸೆ ಮಾಡದಿದ್ದರೆ, ನೀವು ಧರ್ಮಾತ್ಮರು. ನಾಸ್ತಿಕರಾದರೂ ಸರಿ, ಧರ್ಮಾತ್ಮರಾಗಿರಬಹುದು. ಪರರ ಮತವನ್ನು ಗೌರವಿಸುವುದೂ ಧರ್ಮ. ಏಕೆಂದರೆ ನಮ್ಮ ಮತವೇ ಸರಿ, ಬೇರೆಯವರ ಮತ ತಪ್ಪು ಎಂದು ಹೇಳಲು ನಾವು ಸರ್ವಜ್ಞರಲ್ಲ.

ಧರ್ಮಕ್ಕೆ ವಿರುದ್ಧವಾದುದು, ಸಮಾಜಕ್ಕೆ ಅಹಿತವಾದುದು ಅಧರ್ಮ.

ಯದಾಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥

ಯಾವಾಗ ಧರ್ಮವು ಕಾಂತಿಹೀನವಾಗುವುದೋ, ಅಧರ್ಮವು ಪ್ರಬಲವಾಗುವುದೋ, ಆಗ ನಾನು ನನ್ನನ್ನೇ ಸೃಷ್ಟಿಸಿಕೊಳ್ಳುತ್ತೇನೆ ಎಂದು ದೈವಶಕ್ತಿಯ ಪ್ರಧಾನ ಪ್ರತಿನಿಧಿಯಾಗಿದ್ದ ಕೃಷ್ಣನು ಹೇಳಿದ್ದಾನೆ. ಧರ್ಮ ಎಂದರೆ ಏನು? ಎಂಬ ಪ್ರಶ್ನೆಗೆ ಉತ್ತರ ಸುಲಭವಲ್ಲ. ಆದರೂ ಧರ್ಮದ ಪ್ರಜ್ಞೆ ಎಲ್ಲ ಮಾನವರಲ್ಲಿರುತ್ತದೆ. ಅದಕ್ಕೆ ಚ್ಯುತಿ ಬರಬಾರದು. ಹಾಗೆ ಚ್ಯುತಿ ಬಂದಾಗ ಭಗವಚ್ಛಕ್ತಿಯು ಯಾವುದೋ ರೂಪದಲ್ಲಿ ಕಾಣಿಸಿಕೊಂಡು ಧರ್ಮಸಂಸ್ಥಾಪನೆಯನ್ನು ಮಾಡುತ್ತದೆ.

3) ಕರ್ಮ–ಜ್ಞಾನ–ಭಕ್ತಿ

ಭಗವದ್ಗೀತೆಯಲ್ಲಿ ಈ ಮೂರು ತತ್ತ್ವಗಳೂ ಪ್ರಮುಖವಾಗಿ ಪ್ರತಿಪಾದಿತವಾಗಿವೆ. ಕರ್ಮ ಎಂದರೆ ಕರ್ತವ್ಯ ನಿರ್ವಹಣೆ. ಪ್ರತಿಯೊಬ್ಬನೂ ತಾನು ಜೀವಿಸುವವರೆಗೂ ತನ್ನ ಕರ್ತವ್ಯಗಳನ್ನು ಮಾಡುತ್ತಿರಬೇಕು.

'ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್ ಶತಂ ಸಮಾಃ'

ಎಂದು ಈಶಾವಾಸ್ಯೋಪನಿಷತ್ತು ಹೇಳಿದೆ. ಕರ್ತವ್ಯಗಳನ್ನು ಮಾಡುತ್ತಲೇ ಈ ಪ್ರಪಂಚದಲ್ಲಿ ನೂರು ವರ್ಷ ಬದುಕಿರಲು ಇಷ್ಟಪಡಬೇಕು ಎಂದು ಅದರ ಅರ್ಥ. ಇದನ್ನೇ ಭಗವದ್ಗೀತೆಯೂ –

ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ।
ಮಾ ಕರ್ಮಫಲಹೇತುರ್ಭೂಃ ಮಾತೇ ಸಂಗೋಽಸ್ತ್ವಕರ್ಮಣಿ॥

ಎಂದು ವಿಸ್ತರಿಸಿದೆ. ಕರ್ತವ್ಯದಲ್ಲಿ ನಿನ್ನ ಅಧಿಕಾರ, ಫಲ ನಿನ್ನ ಅಧಿಕಾರದಲ್ಲಿಲ್ಲ. ಅದು ಬರಬಹುದು, ಬರದಿರಬಹುದು. ಆದರೆ ಫಲ ನಿಶ್ಚಿತವಲ್ಲ ಎಂಬ ಕಾರಣದಿಂದ ನೀನು ಕರ್ತವ್ಯದಿಂದ ಹಿಂಜರಿಯಬಾರದು ಎಂದು ಕೃಷ್ಣನು ಇಲ್ಲಿ ಉಪದೇಶಿಸಿದ್ದಾನೆ. ಫಲಾಭಿಸಂಧಿರಹಿತವಾದ ಕರ್ಮವು ಮನಸ್ಸಿನ ಮತ್ತು ಬುದ್ಧಿಯ ಮಾಲಿನ್ಯವನ್ನು ತೊಡೆದು ಹಾಕಲು ಕಾರಣವಾಗುತ್ತದೆ. ಬುದ್ಧಿಶುದ್ಧಿ ನಿಷ್ಕಾಮಕರ್ಮದ ಮುಖ್ಯ ಫಲ. ಅಂತಹ ಕರ್ಮದಿಂದ ಜ್ಞಾನಯೋಗದ ಆರಂಭಕ್ಕೆ ಯೋಗ್ಯತೆ ಅಥವಾ ಅರ್ಹತೆ ಉಂಟಾಗುತ್ತದೆ. ಕರ್ಮವು ಕರ್ಮವಾಗವಾಗುವುದು. ಈ ದೃಷ್ಟಿಯಿಂದಲೇ ಕರ್ತವ್ಯಗಳನ್ನು ಬಿಟ್ಟು ಸಂನ್ಯಾಸಿಯೆಂದು ಸುಮ್ಮನಿರುವುದಕ್ಕಿಂತ ಕರ್ಮನಿರತನಾಗಿರುವುದೇ ಲೇಸು ಎಂದು ಭಗವದ್ಗೀತೆ ಖಚಿತವಾಗಿ ಹೇಳಿದೆ–

ಸಂನ್ಯಾಸಃ ಕರ್ಮಯೋಗಶ್ಚ ನಿಃಶ್ರೇಯಸಕರಾವುಭೌ।
ತಯೋಸ್ತು ಕರ್ಮಸಂನ್ಯಾಸಾತ್ ಕರ್ಮಯೋಗೋ ವಿಶಿಷ್ಯತೇ॥

ಎಂಬ ಶ್ಲೋಕದಲ್ಲಿದು ಸ್ಪಷ್ಟವಾಗಿದೆ. ಸನ್ಯಾಸ ಮತ್ತು ಕರ್ಮಯೋಗ ಎರಡೂ ಶ್ರೇಯಸ್ಸಿಗೆ ಕಾರಣ. ಆದರೆ ಅವೆರಡರಲ್ಲಿ ಕರ್ಮಸನ್ಯಾಸಕ್ಕಿಂತ ಕರ್ಮಯೋಗವೇ ಉತ್ತಮ ಎಂಬುದು ಶ್ರೀಕೃಷ್ಣನ ಸಿದ್ಧಾಂತ. ಕರ್ಮವೆಂಬುದು ಪರಮಾತ್ಮನ ಸೇವೆ. ಜನಸೇವೆಯೇ ಜನಾರ್ಧನನ ಸೇವೆ. ಸ್ವಾಮಿ ವಿವೇಕಾನಂದರು ಸನ್ಯಾಸಿಗಳಾಗಿದ್ದರೂ, ಪರಮಜ್ಞಾನಿಗಳಾಗಿದ್ದರು. ಆದರೆ ಸದಾ ಕರ್ತವ್ಯನಿರತರಾಗಿ ಜನಸೇವೆಯಲ್ಲಿ ಮುಳುಗಿದ್ದರು.

ನಿಷ್ಕಾಮ ಕರ್ಮವು ಜ್ಞಾನ ಯೋಗಾರಂಭಕ್ಕೆ ಅರ್ಹತೆಯನ್ನು ತಂದುಕೊಡುವ ಸಾಧನ. ಆ ಅರ್ಹತೆ ಬಂದ ಮೇಲೆ ಜ್ಞಾನಯೋಗದಲ್ಲಿ ಮುಳುಗಬೇಕು. ಜ್ಞಾನ ಎಂದರೆ ಲೌಕಿಕ ಜ್ಞಾನವಲ್ಲ. ಆತ್ಮ–ಪರಮಾತ್ಮ ಸ್ವರೂಪ ಜ್ಞಾನವೇ ಇಲ್ಲಿ ಜ್ಞಾನ ಎಂಬ ಶಬ್ದದಿಂದ ವಿವಕ್ಷಿತವಾಗಿದೆ. ಜ್ಞಾನವು ಅತ್ಯುನ್ನತ ಗುರಿಯೆಂದು ಭಗವದ್ಗೀತೆಯ ಅಭಿಪ್ರಾಯ.

'ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೆ'

ಎಂಬ ಮಾತು ಅತ್ಯಂತ ಅರ್ಥವತ್ತಾಗಿದೆ. ಜ್ಞಾನಕ್ಕೆ ಸಮನಾದುದು ಇನ್ನೊಂದಿಲ್ಲ. ಎಲ್ಲ ಕರ್ಮಗಳೂ ಮುಗಿಯಬೇಕಾದುದು ಜ್ಞಾನದಲ್ಲೇ ಎಂಬ ಮಾತು (ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ) ಜ್ಞಾನವೇ ಶ್ರೇಷ್ಠ ಮೌಲ್ಯ ಎಂದು ದೃಢಪಡಿಸುತ್ತದೆ. ಅದನ್ನು ಪಡೆದುಕೊಳ್ಳುವ ಮಾರ್ಗವನ್ನು ಗೀತೆ ತಿಳಿಸಿದೆ.

ತದ್ ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ।
ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ॥

ಆ ಜ್ಞಾನವನ್ನು ಗುರುಗಳಿಗೆ ನಮಸ್ಕರಿಸಿ, ಸಮಾಧಾನಗಳಿಗಾಗಿ ಪ್ರಶ್ನೆ ಕೇಳಿ, ಸೇವೆ ಮಾಡಿ ಪಡೆದುಕೋ. ತತ್ತ್ವವನ್ನು ಸಾಕ್ಷಾತ್ಕರಿಸಿಕೊಂಡ ಜ್ಞಾನಿಗಳು ನಿನಗೆ ಆ ಜ್ಞಾನವನ್ನುಪದೇಶಿಸುವರು ಎಂದು ಕೃಷ್ಣನು ಅರ್ಜುನನಿಗೆ ತಿಳಿಸಿಕೊಟ್ಟಿದ್ದಾನೆ.

ಭಕ್ತಿ ಭಗವಂತನಲ್ಲಿ ಭಕ್ತನು ಬೆಳೆಸಿಕೊಂಡ ಗಾಢತಮವಾದ ಸ್ನೇಹವೇ ಭಕ್ತಿ. ಅದಕ್ಕೆ ಕಾರಣವಾಗುವುದು ಮಹಾತ್ಮ್ಯಜ್ಞಾನ. ಭಗವಂತನೇ ಸರ್ವಶಕ್ತ, ಸರ್ವಜ್ಞ, ಸರ್ವಾಂತರ್ಯಾಮಿ ಎಂಬ ಜ್ಞಾನವು ಉಂಟಾದಾಗ ಅವನಲ್ಲಿ ಭಕ್ತಿಯು ಮೂಡುತ್ತದೆ. ಅದರಿಂದ ಸಾಕ್ಷಾತ್ಕಾರವು ಸಾಧ್ಯವಾಗಿ ಭಗವಂತನನ್ನು ಸೇರುವವನು ಭಕ್ತ.

ಭಕ್ತ್ಯಾ ಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿ ತತ್ತ್ವತಃ।
ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನಂತರಮ್ ॥

ಎಂಬ ಶ್ಲೋಕವು ಇದನ್ನು ಸ್ಪಷ್ಟಪಡಿಸುತ್ತದೆ. ಭಗವದ್ಗೀತೆಯಲ್ಲಿ ಹನ್ನೆರಡನೆಯ ಅಧ್ಯಾಯ ಭಕ್ತಿಯೋಗವೆಂದು ಪ್ರಸಿದ್ಧವಾಗಿದೆ. ಕೃತಯುಗದಲ್ಲಿ ಸತ್ಯ, ತ್ರೇತಾಯುಗದಲ್ಲಿ ಯಜ್ಞ, ದ್ವಾಪರಯುಗದಲ್ಲಿ ಜ್ಞಾನ, ಕಲಿಯುಗದಲ್ಲಿ ಭಕ್ತಿ. ಆದ್ದರಿಂದ ನಮಗೆ ಭಕ್ತಿಯೋಗವೇ ಮಾರ್ಗ. ಭಗವದ್‌ಭಕ್ತಿ ಬದುಕಿನ ಮುಖ್ಯ ಮೌಲ್ಯ. ಅದನ್ನೇ ಪತಂಜಲಿಯು ಯೋಗ ಸೂತ್ರಗಳಲ್ಲಿ ಈಶ್ವರಪ್ರಣಿಧಾನವೆಂದಿದ್ದಾನೆ. ಭಕ್ತಿಯು ಮಾನವನಲ್ಲಿ ವಿನಯವನ್ನು ಹೆಚ್ಚಿಸುತ್ತದೆ. ಒಳಗಿನ ಶಕ್ತಿಯನ್ನು ಉಕ್ಕಿಸುತ್ತದೆ. ಶ್ರದ್ಧೆಯನ್ನು ಬೆಳೆಸುತ್ತದೆ. ಭಕ್ತರು ಎಲ್ಲರಲ್ಲೂ ಭಗವಂತನನ್ನು ಕಾಣುವುದರಿಂದ ಯಾರನ್ನೂ ದ್ವೇಷಿಸುವುದಿಲ್ಲ. ಎಲ್ಲರೂ ಅವರ ಮಿತ್ರರೇ. ದುಃಖಿತರಲ್ಲಿ ಅವನಿಗೆ ಕರುಣೆ ಇರುತ್ತದೆ. ಅವನು ಅಹಂಕಾರ ಮಮಕಾರಗಳನ್ನು ದೂರದಲ್ಲಿರಿಸುತ್ತಾನೆ. ಅವನಲ್ಲಿ ಕ್ಷಮಾಗುಣ ಅಧಿಕವಾಗಿರುತ್ತದೆ. ಸಂತೋಷ (ತೃಪ್ತಿ) ಎಂಬುದು ಅವನ ಹೆಗ್ಗುರುತು. ಆತ್ಮ ಸಂಯಮವನ್ನು ಹೊಂದಿ ಅವನು ಮಾಡಿದ ನಿಶ್ಚಯಗಳು ದೃಢವಾಗಿರುತ್ತವೆ. ಮನಸ್ಸನ್ನೂ ಬುದ್ಧಿಯನ್ನೂ ಭಕ್ತನು ಭಗವಂತನಲ್ಲಿ ನೆಟ್ಟಿರುತ್ತಾನೆ ಎಂದು ಭಗವದ್ಗೀತೆ (12. 13–14) ಹೇಳಿದೆ. ಹೀಗೆ ಭಕ್ತಿಯು ಅನೇಕ ಮೌಲ್ಯಗಳ ಸಂಗಮವೆಂದು ತಿಳಿಯುವುದು ಯೋಗ್ಯವಿಚಾರ.

ಭಗವದ್ಗೀತೆ ಅನೇಕ ಶುಭ ಚಿಂತನೆಗಳ ಕಣಜ. ಗಣಿಯನ್ನು ಅಗೆದು ಚಿನ್ನದ ಅದಿರನ್ನು ತೆಗೆದಂತೆ, ಗೀತೆಯ ಅಧ್ಯಯನ ಮಾಡಿ ಮೌಲ್ಯರತ್ನಗಳನ್ನು ಪಡೆಯಲು ಯತ್ನಿಸೋಣ.

ಶ್ರೀ ನಟರಾಜ ಶಿಕ್ಷಣ ಸಂಸ್ಥೆಯಲ್ಲಿ ಶಾಮನೂರು ಶಿವಶಂಕರಪ್ಪಗೆ ನುಡಿನಮನ



ಮೈಸೂರಿನ ಶ್ರೀ ನಟರಾಜ ಶಿಕ್ಷಣ ಸಂಸ್ಥೆಯಲ್ಲಿ ಮಂಗಳವಾರ ಆಯೋಜಿಸಿದ್ದ ನುಡಿನಮನ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಶಾಮನೂರು ಶಿವಶಂಕರಪ್ಪ ಅವರ ಭಾವಚಿತ್ರಕ್ಕೆ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ ಪುಷ್ಪಾರ್ಚನೆ ಮಾಡಿದರು.

ಮೈಸೂರು,ಡಿ.16(ಎಂಟಿವೈ)– ಮಾಜಿ ಸಚಿವ ಶಾಮನೂರು ಶಿವಶಂಕರಪ್ಪ ಅವರು ನಮ್ಮನ್ನು ಅಗಲಿದ್ದರೂ ಅವರು ಮಾಡಿದ ಅತ್ಯುತ್ತಮ ಸೇವೆಯಿಂದಾಗಿ ಅವರ ಹೆಸರು ಚಿರಸ್ಥಾಯಿಯಾಗಿ ಉಳಿಯಲಿದೆ ಎಂದು ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ.ಎಸ್. ಶಿವರಾಜಪ್ಪ ಬಣ್ಣಿಸಿದ್ದಾರೆ.

ಮೈಸೂರಿನ ಶಂಕರಮಠದ ರಸ್ತೆಯಲ್ಲಿರುವ ಶ್ರೀ ನಟರಾಜ ಶಿಕ್ಷಣ ಸಂಸ್ಥೆಯ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಮಾಜಿ ಸಚಿವ ಶಾಮನೂರು ಶಿವಶಂಕಪ್ಪ ಅವರ ನುಡಿನಮನ ಕಾರ್ಯಕ್ರಮದಲ್ಲಿ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಶಾಮನೂರು ಶಿವಶಂಕರಪ್ಪ ಅವರು ಸಮಾಜಕ್ಕೆ ನೀಡಿದ ಕೊಡುಗೆ ಅಪಾರ. ರಾಜಕೀಯ ಕ್ಷೇತ್ರದಲ್ಲಿದ್ದರೂ ಶಿಕ್ಷಣ, ಆರೋಗ್ಯ ಕ್ಷೇತ್ರದೊಂದಿಗೆ ಸಮಾಜ ಸೇವೆ ಮಾಡುವ ಮೂಲಕ ತಮ್ಮ ಹೆಸರು ಚಿರಸ್ಥಾಯಿಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಅವರು ನಮ್ಮಿಂದ ಅಗಲಿದ್ದರೂ, ಅವರ ಹೆಸರು ಸದಾ ನೆನಪಿನಲ್ಲಿ ಉಳಿಯುತ್ತದೆ ಎಂದರು.

ಶಾಮನೂರು ಅವರು ಕೊಡುಗೈ ದಾನಿಯಾಗಿದ್ದರು. ಜಾತ್ಯತೀತವಾಗಿ ಎಲ್ಲಾ ವರ್ಗದ ಜನರಿಗೆ ಸಹಾಯ ಮಾಡಿದ್ದಾರೆ. ಶಾಮನೂರು ಅವರ ಅಂತಿಮ ದರ್ಶನ ಪಡೆಯಲು ಜಾತ್ಯತೀತ, ಪಕ್ಷಾತೀತವಾಗಿ ಬಂದ ಜನಸಾಗರವನ್ನು ನೋಡಿದಾಗ 'ಶರಣರ ಮರಣವೇ ಮಹಾನವಮಿ' ಎನಿಸಿತು. ದಾವಣಗೆರೆಯಲ್ಲಿ ಬಾಪೂಜಿ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿ, ಸುತ್ತಮುತ್ತಲಿನ ಜನರಿಗೆ ಶಿಕ್ಷಣ ನೀಡುವುದರೊಂದಿಗೆ ಆಸ್ಪತ್ರೆಗಳನ್ನು ಆರಂಭಿಸುವ ಮೂಲಕ ಆರೋಗ್ಯ ಸೇವೆಯನ್ನು ಒದಗಿಸಿದರು. ದಾವಣಗೆರೆ ವಿಶ್ವವಿದ್ಯಾಲಯ ಆರಂಭಿಸಲು 35 ಎಕರೆ ಜಮೀನನ್ನು ದಾನವಾಗಿ ನೀಡಿದರು. ಶಾಮನೂರು ಅವರು ಕೇವಲ ದಾವಣಗೆರೆಗೆ ಸೀಮಿತವಾಗಿರಲಿಲ್ಲ. ಚಿತ್ರದುರ್ಗ ಸೇರಿದಂತೆ ಬೇರೆ ಬೇರೆ ಭಾಗಗಳಲ್ಲೂ ಜನರಿಗೆ ನೆರವಾದರು. ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಸಮೀಪದ ಸಂಗಮದಲ್ಲಿ ಮಹದೇವ ತಾತರ ಗದ್ದುಗೆ ನವೀಕರಣ, ಕ್ಷೇತ್ರದಲ್ಲಿ ಭವನ ನಿರ್ಮಾಣಕ್ಕೆ ಕಾರಣರಾದರು ಎಂದು ತಿಳಿಸಿದರು.

ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ ಅವರು ಶಾಮನೂರು ಶಿವಶಂಕರಪ್ಪ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ. ಶಾರದಾ, ಬಿ.ಇಡಿ ಕಾಲೇಜಿನ ಡಾ.ಮಹೇಶ್ ದಳಪತಿ, ಪಿಯು ಕಾಲೇಜಿನ ವಿ.ಡಿ. ಸುನೀತಾ ರಾಣಿ, ನರ್ಸಿಂಗ್ ಕಾಲೇಜಿನ ಡಾ.ಎಂ. ರಾಜೇಶ್, ವಿವಿಧ ವಿಭಾಗಗಳ ಮುಖ್ಯಸ್ಥರಾದ ಪವಿತ್ರಾ, ದಿಲೀಪ್, ಪದ್ಮಾ, ಮಮತಾ, ವಿ. ಪ್ರದೀಪ್ ಇದ್ದರು. ಚೂಡಾಮಣಿ ವಚನ ಗಾಯನ ನಡೆಸಿಕೊಟ್ಟರು. ಬಿ. ರಾಧಾ ಕಾರ್ಯಕ್ರಮ ನಿರೂಪಿಸಿದರು.

ಉಚಿತ ಕಂಪ್ಯೂಟರ್ ಕೌಶಲ್ಯ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು, ಡಿ. 16– ಕೆ.ಆರ್. ನಗರದ ಇಬ್ಬನಿ ಅಕಾಡೆಮಿಯು ಪಿಯುಸಿ, ಪದವಿ ವಿದ್ಯಾರ್ಥಿಗಳು, ನಿರುದ್ಯೋಗಿಗಳಿಗೆ ಉಚಿತ ಕಂಪ್ಯೂಟರ್ ಕೋರ್ಸ್ ಆರಂಭಿಸಿದೆ. ವಿದ್ಯಾರ್ಥಿಗಳು, ಪದವಿ ಪಡೆದ ನಿರುದ್ಯೋಗಿಗಳು ಈ ಕೋರ್ಸ್‌ಗಳಿಗೆ ದಾಖಲಾಗಬಹುದು.

ಶನಿವಾರ ಮತ್ತು ಭಾನುವಾರ ಆಸಕ್ತ ವಿದ್ಯಾರ್ಥಿಗಳಿಗೆ ವಿಶೇಷ ಕೌಶಲ್ಯ ತರಬೇತಿಗಳು ನಡೆಯಲಿವೆ. ಶಿಕ್ಷಣದಿಂದ ವಂಚಿತರಾದ ನಗರ ಮತ್ತು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಉಚಿತ ತರಬೇತಿ ನೀಡಲಾಗುವುದು. ತರಬೇತಿಯಲ್ಲಿ ಸಂಬಂಧ ಪಟ್ಟ ವಿಷಯದ ಜೊತೆಗೆ ವೃತ್ತಿ ಕೌಶಲ್ಯ ಮತ್ತು ಜೀವನ ಕೌಶಲ್ಯ ತರಬೇತಿ ನೀಡಲಾಗುವುದು. ಆಸಕ್ತ 18 ವರ್ಷ ಮೇಲ್ಪಟ್ಟ 35 ವರ್ಷದೊಳಗಿನ ನಿರುದ್ಯೋಗ ಯುವಕ–ಯುವತಿಯರು ಸಂಸ್ಥೆಯ ಕಚೇರಿಯಲ್ಲಿ ಅಥವಾ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆಸಕ್ತ ಅಭ್ಯರ್ಥಿಗಳು ವಿವರಗಳಿಗೆ ಸಂಸ್ಥೆಯ ದೂರವಾಣಿ ಸಂಖ್ಯೆ :9945942109 ಅನ್ನು ಸಂಪರ್ಕಿಸಬಹುದು.

ಜ. 23 ರಿಂದ ಹಾಲು ಕರೆಯುವ ಸ್ಪರ್ಧೆ

ಮೈಸೂರು, ಡಿ. 16– ಮೈಸೂರು ನಗರ ಗೋಪಾಲಕರ ಸಂಘದ ವತಿಯಿಂದ ಜ. 23 ರಿಂದ 25 ರವರೆಗೆ ಜೆಕೆ. ಮೈದಾನದಲ್ಲಿ ಹಾಲು ಕರೆಯುವ ಸ್ಪರ್ಧೆ ಏರ್ಪಡಿಸಲಾಗಿದೆ.

ಸ್ಪರ್ಧೆಯಲ್ಲಿ 1ನೇ ಬಹುಮಾನವಾಗಿ ರೂ. 1,50,000 ಮತ್ತು ಟ್ರೋಫಿ, 2ನೇ ಬಹುಮಾನವಾಗಿ ರೂ. 1,00,000 ಮತ್ತು ಟ್ರೋಫಿ, 3ನೇ ಬಹುಮಾನವಾಗಿ ರೂ. 75,000 ಮತ್ತು ಟ್ರೋಫಿ, 4ನೇ ಬಹುಮಾನವಾಗಿ ರೂ. 50,000 ಮತ್ತು ಟ್ರೋಫಿ ಮತ್ತು 5ನೇ ಬಹುಮಾನವಾಗಿ ರೂ. 25,000–00 ಮತ್ತು ಟ್ರೋಫಿ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ

ಚಿತ್ರಕಲಾ ಸ್ಪರ್ಧೆ, ಜೇಡಿ ಮಣ್ಣಿನ ಕಲಾಕೃತಿ ರಚನೆ ಸ್ಪರ್ಧೆ

ಮೈಸೂರು, ಡಿ. 16– ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಲಲಿತ ಕಲೆ ಮತ್ತು ಕರಕುಶಲ ಉಪ ಸಮಿತಿ ವತಿಯಿಂದ ಡಿ.20 ರಂದು ಮಧ್ಯಾಹ್ನ 12 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಚಿತ್ರಕಲಾ ಸ್ಪರ್ಧೆ, ಜೇಡಿ ಮಣ್ಣಿನ ಕಲಾಕೃತಿ ರಚನೆ ಸ್ಪರ್ಧೆ (14 ವರ್ಷ ವಯೋಮಿತಿ, 17 ವರ್ಷ ವಯೋಮಿತಿ) ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9986846047, 7899481039 ಸಂಪರ್ಕಿಸಬಹುದು.

ಹೊಳೆಯ ನೆರಳು, ಹೊಂಗೆಯ ನೆರಳು, ಯಾಲಕ್ಕಿ ಗೊನೆ ಮತ್ತು ಅವರೆಯ ಸೊನೆ ಕೃತಿ ಬಿಡುಗಡೆ ಸಮಾರಂಭ

ಮೈಸೂರು, ಡಿ. 16– ಮೈಸೂರಿನ ವಿಸ್ಮಯ ಬುಕ್ ಹೌಸ್‌ನಿಂದ ವಾಗ್ಮಿ ಪ್ರೊ. ಎಂ. ಕೃಷ್ಣೇಗೌಡ ಅವರ ನಾಲ್ಕು ಕೃತಿಗಳಾದ ಹೊಳೆಯ ನೆರಳು, ಹೊಂಗೆಯ ನೆರಳು, ಯಾಲಕ್ಕಿ ಗೊನೆ ಮತ್ತು ಅವರೆಯ ಸೊನೆ ಕೃತಿ ಬಿಡುಗಡೆ ಸಮಾರಂಭವನ್ನು ಡಿ. 18 ರಂದು ಸಂಜೆ 5.30ಕ್ಕೆ ಬೋಗಾದಿ ರಸ್ತೆಯ ರೆಜೆಂಟಾ ಸೆಂಟ್ರಲ್ ಜವಾಜಿ ಹೋಟೆಲ್‌ನಲ್ಲಿ ಏರ್ಪಡಿಸಲಾಗಿದೆ.

ಕರ್ನಾಟಕ ವಿಧಾನಸಭೆ ಮಾಜಿ ಅಧ್ಯಕ್ಷ ಕೆ.ಆರ್. ರಮೇಶ್ ಕುಮಾರ್ ಕಾರ್ಯಕ್ರಮ ಉದ್ಘಾಟಿಸುವರು. ಸಾಹಿತಿ ಮತ್ತು ಚಲನಚಿತ್ರ ನಿರ್ದೇಶಕ ಡಾ. ನಾಗತಿಹಳ್ಳಿ ಚಂದ್ರಶೇಖರ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹಿರಿಯ ಕವಿ ಕೆ.ಸಿ. ಶಿವಪ್ಪ ಭಾಗವಹಿಸಲಿದ್ದಾರೆ. ಕೃತಿಗಳ ಕುರಿತು ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕರಾದ ಪ್ರೊ ನೀಲಗಿರಿ ತಳವಾರ ಮಾತನಾಡಲಿದ್ದಾರೆ. ಪ್ರೊ. ಎಂ. ಕೃಷ್ಣೇಗೌಡ ಉಪಸ್ಥಿತರಿರುವರು.

ಇದೇ ಸಂದರ್ಭದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಅಂಶಿ ಪ್ರಸನ್ನಕುಮಾರ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಆಯೂಬ್‌ಖಾನ್, ಚಿತ್ರ ಕಲಾವಿದ ಪ್ರಕಾಶ್ ಚಿಕ್ಕಪಾಳ್ಯ, ರಾಜ್ಯ ಒಕ್ಕಲಿಗರ ಸಂಘದ ಖಜಾಂಚಿ ಕೆ.ವಿ. ಶ್ರೀಧರ್, ಮೈಸೂರು ಜಿಲ್ಲಾ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಬಿ.ಆರ್. ಶಿವಕುಮಾರ್, ಶ್ರೀ ಕಾಲಭೈರವೇಶ್ವರ ಕನ್‌ಸ್ಟ್ರಕ್ಷನ್ ಮಾಲೀಕ ಕಡಕೊಳ ಕುಮಾರ್ ಅವರನ್ನು ಸನ್ಮಾನಿಸಲಾಗುವುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮಳವಳ್ಳಿಯಲ್ಲಿ ಸುತ್ತೂರಿನ ಆದಿ ಜಗದ್ಗುರು ಶ್ರೀ ಶಿವರಾತ್ರಿ ಶಿವಯೋಗಿಗಳ 1066ನೇ ಜಯಂತಿ ಮಹೋತ್ಸವ ಕಾರ್ಯಕ್ರಮ

ಸುತ್ತೂರು ಮಠ ಧರ್ಮನಿಷ್ಠೆ ಮತ್ತು ಸಕಾರಾತ್ಮಕ ಶಕ್ತಿಯ ಕೇಂದ್ರ

ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಶ್ಲಾಘನೆ



ಮಳವಳ್ಳಿಯ ಶಾಂತಿ ಕಾಲೇಜು ಎದುರಿನ ಮೈದಾನದಲ್ಲಿ ನಡೆದ ಸುತ್ತೂರಿನ ಆದಿ ಜಗದ್ಗುರು ಶ್ರೀ ಶಿವರಾತ್ರಿ ಶಿವಯೋಗಿಗಳ 1066ನೇ ಜಯಂತಿ ಮಹೋತ್ಸವದ ಕಾರ್ಯಕ್ರಮವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರೊಂದಿಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಉದ್ಘಾಟಿಸಿದರು. ಈ ವೇಳೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಸಚಿವ ಎನ್.ಚಲುವರಾಯಸ್ವಾಮಿ, ಶಾಸಕ ನರೇಂದ್ರಸ್ವಾಮಿ ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ ನೆರೆದಿದ್ದ ಜನಸ್ತೋಮವನ್ನು ಕಾಣಬಹುದು

ಮಳವಳ್ಳಿ, ಡಿ.16(ಮೋಹನ್‌ರಾಜ್)– ಸುತ್ತೂರು ಮಠ ಧರ್ಮನಿಷ್ಠೆ ಮತ್ತು ಸಕಾರಾತ್ಮಕ ಶಕ್ತಿಯ ತಾಣ ಮತ್ತು ದೇಶದ ಅತ್ಯಂತ ಪ್ರಸಿದ್ಧ ಮಠಗಳಲ್ಲಿ ಒಂದಾಗಿದೆ. ಸಾವಿರ ವರ್ಷಗಳಿಗೂ ಹೆಚ್ಚಿನ ಇತಿಹಾಸ ಹೊಂದಿರುವ ಈ ಮಠವು ಸಾಮಾಜಿಕ ಮತ್ತು ಧಾರ್ಮಿಕ ಪ್ರಗತಿಯಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹೇಳಿದರು.

ಮಂಗಳವಾರ ಮಳವಳ್ಳಿಯ ಶಾಂತಿ ಕಾಲೇಜು ಎದುರಿನ ಮೈದಾನದಲ್ಲಿ ಮಂಗಳವಾರದಿಂದ 6 ದಿನಗಳ ಕಾಲ ನಡೆಯಲಿರುವ ಸುತ್ತೂರಿನ ಆದಿ ಜಗದ್ಗುರು ಶ್ರೀಶಿವರಾತ್ರಿ ಶಿವಯೋಗಿಗಳ 1066ನೇ ಜಯಂತಿ ಮಹೋತ್ಸವದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಆದಿ ಜಗದ್ಗುರು ಶ್ರೀಶಿವರಾತ್ರೀಶ್ವರ ಶಿವಯೋಗಿ ಸ್ವಾಮೀಜಿಯವರು ಭಾರತೀಯ ಸಂತ ಪರಂಪರೆಯ ಪ್ರಕಾಶಮಾನವಾದ ಸ್ತಂಭವಾಗಿದ್ದರು. ಅವರ ಇಡೀ ಜೀವನವು ಕಠಿಣತೆ, ತ್ಯಾಗ, ಕರುಣೆ ಮತ್ತು ಸಾರ್ವಜನಿಕ ಕಲ್ಯಾಣಕ್ಕಾಗಿ ಮೀಸಲಾಗಿತ್ತು. ಅವರ ಆಧ್ಯಾತ್ಮಿಕ ಅಭ್ಯಾಸದ ಮೂಲ ಉದ್ದೇಶ ಮಾನವರಲ್ಲಿ ಮಾನವೀಯತೆಯನ್ನು ಜಾಗೃತಗೊಳಿಸುವುದಾಗಿತ್ತು ಎಂದರು.

ಶಿವಯೋಗ ಸಂಪ್ರದಾಯದ ಮೂಲಕ, ಅವರು ಆತ್ಮ ಸಾಕ್ಷಾತ್ಕಾರ, ಶಿಸ್ತು ಮತ್ತು ಸೇವೆಯನ್ನು ಸಾಮಾಜಿಕ ಜೀವನದ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಂಡರು. ಅವರ ಜೀವನ, ತತ್ವಶಾಸ್ತ್ರ ಮತ್ತು ಆಧ್ಯಾತ್ಮಿಕ ಅಭ್ಯಾಸವು ಸಾಮಾಜಿಕ ಸಾಮರಸ್ಯ ಮತ್ತು ಮಾನವ ಕಲ್ಯಾಣದ ವಿಶಾಲ ದೃಷ್ಟಿಕೋನದಿಂದ ಪ್ರೇರಿತವಾಗಿತ್ತು. ಅವರು ಜಾತಿ, ವರ್ಗ ಮತ್ತು ಪಂಥದ ಆಧಾರದ ಮೇಲೆ ಸಂಕುಚಿತ ವ್ಯತ್ಯಾಸಗಳನ್ನು ಮೀರಿ ಸಮಾಜಕ್ಕೆ ಏಕತೆ, ಸಮಾನತೆ ಮತ್ತು ಸಾಮರಸ್ಯದ ಸಂದೇಶವನ್ನು ಬೋಧಿಸಿದರು. ಇಂದಿನ ಕಾಲದಲ್ಲಿ, ಪೂಜ್ಯ ಶಿವಯೋಗಿ ಮಹಾಸ್ವಾಮೀಜಿಯವರ ಆಲೋಚನೆಗಳು ಮತ್ತು ಸಂದೇಶಗಳು ಆಂತರಿಕ ಶುದ್ಧತೆ, ಸಂಯಮ ಮತ್ತು ಕರುಣೆಯಿಂದ ಪ್ರೇರಿತವಾದಾಗ ಮಾತ್ರ ಬಾಹ್ಯ ಪ್ರಗತಿ ಅರ್ಥಪೂರ್ಣವಾಗಿರುತ್ತದೆ ಎಂಬುದನ್ನು ನಮಗೆ ನೆನಪಿಸುತ್ತದೆ ಎಂದರು.

ಮಠದ ಪ್ರಸ್ತುತ 24ನೇ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಯವರು ತಮ್ಮ ಗುರು ಪರಂಪರೆಯ ದೃಷ್ಟಿಕೋನ ಮತ್ತು ಸದ್ಭಾವನೆಯಿಂದ ಮಠದ ಶ್ರೇಷ್ಠ ಪರಂಪರೆ ಮತ್ತು ಪ್ರಯತ್ನಗಳನ್ನು ಮುಂದಕ್ಕೆ ಕೊಂಡೊಯ್ಯುತ್ತಿದ್ದಾರೆ ಮತ್ತು ಮಠದ ಸೇವಾ ಮನೋಭಾವ ಮತ್ತು ಖ್ಯಾತಿಯನ್ನು ಜಾಗತಿಕ ಆಯಾಮಗಳಿಗೆ ಕೊಂಡೊಯ್ಯುತ್ತಿದ್ದಾರೆ. ಪ್ರಾಚೀನ ಗ್ರಂಥಗಳ ಶ್ರೀಮಂತ ಜ್ಞಾನವನ್ನು ಹರಡುವ ಕಾರ್ಯವಾಗಿರಲಿ ಅಥವಾ ಆಧುನಿಕ ತಂತ್ರಜ್ಞಾನದಿಂದ ಸುಸಜ್ಜಿತವಾದ ಆಧುನಿಕ ಶಿಕ್ಷಣವನ್ನು ನೀಡುವ ಕಾರ್ಯವಾಗಿರಲಿ, ಸುತ್ತೂರು ಮಠವು ದೇಶ ಮತ್ತು ವಿದೇಶಗಳಲ್ಲಿ 350ಕ್ಕೂ ಹೆಚ್ಚು ಶಿಕ್ಷಣ ಮತ್ತು ಇತರ ಸಂಸ್ಥೆಗಳ ಮೂಲಕ ಅತ್ಯುತ್ತಮ ಕೆಲಸ ಮಾಡುತ್ತಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಭಾರತೀಯ ಸಂಸ್ಕೃತಿ ಶಾಶ್ವತವಾಗಿದ್ದು, ಅನಾದಿ ಕಾಲದಿಂದಲೂ ನಮ್ಮ ಸಂತರು ಮತ್ತು ಋಷಿಮುನಿಗಳು ನಿರಂತರವಾಗಿ ರಕ್ಷಿಸುತ್ತಾ ಬಂದಿದ್ದಾರೆ. ಋಷಿಗಳು, ಸಂತರು, ಆಚಾರ್ಯರು ಮತ್ತು ಋಷಿಗಳು ವಿಶ್ವ ವೇದಿಕೆಯಲ್ಲಿ ಧರ್ಮ, ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆಯ ಧ್ವಜವನ್ನು ಹಾರಿಸಿದ್ದಾರೆ. ನಮ್ಮ ಸಂಸ್ಕೃತಿಯು ಯಾವಾಗಲೂ ಸಾರ್ವತ್ರಿಕ ಸಹೋದರತ್ವ, ಸಾರ್ವತ್ರಿಕ ಕಲ್ಯಾಣ, ಸಾರ್ವತ್ರಿಕ ಶಾಂತಿ, ಸಮಾನತೆ ಮತ್ತು ಸಾಮರಸ್ಯವನ್ನು ಪ್ರೇರೇಪಿಸಿದೆ. ಇತ್ತೀಚಿನ ದಿನಗಳಲ್ಲಿ ಅನೇಕ ದೇಶಗಳು ಆಧ್ಯಾತ್ಮಿಕ ಮತ್ತು ಮಾನಸಿಕ ಯೋಗಕ್ಷೇಮಕ್ಕಾಗಿ ಭಾರತದತ್ತ ನೋಡುತ್ತಿವೆ. ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿ ಮಹಾಸ್ವಾಮೀಜಿಯವರಿಗೆ ಶ್ರದ್ಧಾಂಜಲಿ ಅರ್ಪಿಸಿ, 'ಸರ್ವೇ ಭವಂತು ಸುಖಿನೋ, ಸರ್ವೇ ಸಂತು ನಿರಾಮಯ' ಕೃಪೆಗೆ ಪಾತ್ರರಾಗಲಿ ಎಂದು ಹಾರೈಸಿದರು.

ದೇವೇಗೌಡರ ರಾಜಕೀಯ ಬೆಳವಣಿಗೆಗೆ ಸುತ್ತೂರು ಮಠದ ಆಶೀರ್ವಾದವಿದೆ

ಕೇಂದ್ರ ಉಕ್ಕು ಹಾಗೂ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ



ಮಳವಳ್ಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿಗಳೊಂದಿಗೆ ಗಣ್ಯರು ಫೋಟೋಶೂಟ್‌ನಲ್ಲಿ ಪಾಲ್ಗೊಂಡಿದ್ದರು.

ಮಳವಳ್ಳಿ, ಡಿ.16(ಮೋಹನ್‌ರಾಜ್)– ಸುತ್ತೂರು ಮಠಕ್ಕೂ ನಮ್ಮ ಕುಟುಂಬಕ್ಕೂ 1962ರಿಂದ ಅವಿನಾಭಾವ ಸಂಬಂಧವಿದೆ ಎಂಬುದು ಬಹಳ ಜನಕ್ಕೆ ಗೊತ್ತಿಲ್ಲ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ರಾಜಕೀಯಕ್ಕೆ ಬಂದ ದಿನದಿಂದ ಸುತ್ತೂರು ಮಠ ಅದರಲ್ಲೂ ಹಿರಿಯ ಶ್ರೀಗಳ ಬಗ್ಗೆ ಹೆಚ್ಚಿನ ಗೌರವ ಇಟ್ಟುಕೊಂಡಿದ್ದರು. ದೇವೇಗೌಡರ ರಾಜಕೀಯ ಬೆಳವಣಿಗೆಗೆ ಹಿರಿಯ ಶ್ರೀಗಳ ಆಶೀರ್ವಾದ ಇತ್ತು ಎಂದು ಕೇಂದ್ರ ಉಕ್ಕು ಹಾಗೂ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸ್ಮರಿಸಿದರು.

ಮಂಗಳವಾರ ಪಟ್ಟಣದ ಶಾಂತಿ ಕಾಲೇಜು ಎದುರಿನ ಮೈದಾನದಲ್ಲಿ ನಡೆದ ಸುತ್ತೂರಿನ ಆದಿ ಜಗದ್ಗುರು ಶ್ರೀ ಶಿವರಾತ್ರಿ ಶಿವಯೋಗಿಗಳ 1066ನೇ ಜಯಂತಿ ಮಹೋತ್ಸವ ಕಾರ್ಯಕ್ರಮದಲ್ಲಿ ಸ್ಮರಣ ಸಂಚಿಕೆ ಬಿಡುಗಡೆ ಮಾಡಿ ಮಾತನಾಡಿದ ಅವರು, ತಮ್ಮ ರಾಜಕೀಯ ಬೆಳವಣಿಗೆಗೆ ಸುತ್ತೂರು ಮಠದ ಆಶೀರ್ವಾದ ಇತ್ತು ಎಂಬುದನ್ನು ನಮ್ಮ ತಂದೆ ನೂರಾರು ಬಾರಿ ಹೇಳಿದ್ದಾರೆ. ಯಾವುದೇ ಕಾರಣಕ್ಕೂ ಸುತ್ತೂರು ಮಠ ಮರೆಯಬಾರದೆಂಬುದನ್ನು ಹೇಳಿದ್ದು, ಮಠದ ಬಗ್ಗೆ ನನಗೂ ಅಪಾರ ಭಕ್ತಿ ಇದೆ ಎಂದು ಹೇಳಿದರು.

ಸುತ್ತೂರು ಶ್ರೀಕ್ಷೇತ್ರ ಕೇವಲ ಮೈಸೂರಿಗೆ ಸೀಮಿತವಾಗಿಲ್ಲ. ಇಡೀ ದೇಶಕ್ಕೆ ಸೀಮಿತವಾಗಿದೆ. ಸುತ್ತೂರು ಮಠ ಸಮಾಜದ ಬಡ ವರ್ಗಗಳ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದೆ. ಈ ಮಠ ಅನೇಕ ಕೊಡುಗೆಗಳನ್ನು ದೇಶಕ್ಕೆ ನೀಡಿದೆ. ವಿಶ್ವದ 7ಕ್ಕೂ ಹೆಚ್ಚು ದೇಶಗಳಲ್ಲಿ ಮಠದ ಭಕ್ತರಿದ್ದಾರೆ. ಅಮೆರಿಕಾದಂತಹ ದೇಶದಲ್ಲಿ ಮಠಕ್ಕೆ ಹಾಗೂ ಸ್ವಾಮೀಜಿಗೆ ವಿಶೇಷ ಗೌರವವಿದೆ. ಶಿಕ್ಷಣ, ಆರೋಗ್ಯ ಕ್ಷೇತ್ರಕ್ಕೆ ಶ್ರೀಮಠದ ಹಾಗೂ ಸ್ವಾಮೀಜಿ ಕೊಡುಗೆ ಇದೆ. ಬಡವರ ಬಗ್ಗೆ ಕಾಳಜಿಯನ್ನು ಈ ಮಠ ಹೊಂದಿದ್ದು, ಸಮಾಜದ ಏಳ್ಗೆಗೆ ಈ ಮಠದ ಕಾರ್ಯ ಶ್ಲಾಘನೀಯ ಎಂದು ಬಣ್ಣಿಸಿದರು.

ತಮ್ಮ ಕಾರ್ಯದೊತ್ತಡದ ನಡುವೆ ನಮ್ಮ ಮನವಿಗೆ ಸ್ಪಂದಿಸಿ, ನಮ್ಮ ಕಾರ್ಯಕ್ರಮಕ್ಕೆ ಸಮಯಾವಕಾಶ ನೀಡಿ ಇಲ್ಲಿಗೆ ಆಗಮಿಸಿದ್ದಕ್ಕೆ ದೇಶದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಧನ್ಯವಾದ ಅರ್ಪಿಸುತ್ತೇನೆ. ರಾಷ್ಟ್ರಪತಿಗಳು ಪ್ರಥಮ ಬಾರಿಗೆ ನಮ್ಮ ಮಂಡ್ಯ ಜಿಲ್ಲೆಗೆ ಬಂದಿರುವುದು ಜಿಲ್ಲೆಯ ಹೊಸ ದಿಕ್ಸೂಚಿ ತೆರೆಯಲು ಅವರ ಉಪಸ್ಥಿತಿ ನಮಗೆ ಮುಂದಿನ ದಿನಗಳಲ್ಲಿ ದಾರಿದೀಪವಾಗಲಿದೆ. ಈ ಕಾರ್ಯಕ್ರಮ ಮುಂದಿನ 3 ದಿನಗಳಲ್ಲಿ ಅನೇಕ ನಾಯಕರು ಪಾಲ್ಗೊಳ್ಳಲಿದ್ದಾರೆ ಎಂದರು.

ಏಷ್ಯಾ ಖಂಡದಲ್ಲೇ ಮೊದಲ ಬಾರಿಗೆ ವಿದ್ಯುತ್ ಸ್ಥಾವರ ಉತ್ಪಾದಿಸಿದ್ದು ನಮ್ಮ ಮಳವಳ್ಳಿ. ಮೈಸೂರು ಒಡೆಯರು ಹಾಗೂ ಸರ್ ಎಂ.ವಿಶ್ವೇಶ್ವರಯ್ಯ ಅವರ ಕಾಳಜಿಯಿಂದ ವಿದ್ಯುತ್ ಉತ್ಪಾದನೆ ಮಾಡಿದ್ದಲ್ಲದೇ ಅನೇಕ ಪ್ರಾಕೃತಿಕ ಸಂಪತ್ತಿದೆ. ಕಾವೇರಿ ಮಡಿಲಿನಲ್ಲಿ ಈ ತಾಲೂಕಿನ ಜನರಿದ್ದಾರೆ. ಶ್ರೀಗಳು ಕಾರ್ಯಕ್ರಮವನ್ನು ಇಲ್ಲೇ ನಡೆಸಲು ಒಪ್ಪಿಗೆ ಸೂಚಿಸಿದ್ದು, ಪಕ್ಷಾತೀತವಾಗಿ ಅನೇಕ ಮುಖಂಡರು ಕಾರ್ಯಕ್ರಮದ ಯಶಸ್ವಿಗೆ ಸಹಕಾರ ನೀಡಿದ್ದಾರೆ ಎಂದರು.

ಸುತ್ತೂರಿನ ಶ್ರೀವೀರಸಿಂಹಾಸನ ಮಠದ ಪೀಠಾಧಿಪತಿ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಶಿವರಾತ್ರೀಶ್ವರರ ಜಯಂತಿ ಮಳವಳ್ಳಿಗೆ ಸಿಕ್ಕಿದ ಅಹೋಭಾಗ್ಯ. ಶಿವರಾತ್ರೀಶ್ವರರು 2 ರಾಜಮನೆತನಗಳ ನಡುವೆ ಇದ್ದ ವೈಷಮ್ಯ ಹೋಗಲಾಡಿಸಿ, ಸಾಮರಸ್ಯದ ಪ್ರೀತಿಯನ್ನು ಭಿತ್ತಿ, ಸಮಾಜವನ್ನು ಒಳ್ಳೆಯ ರೀತಿಯಲ್ಲಿ ಕಟ್ಟಲು ಮುಂದಾದರು. ತದನಂತರ ಬಂದ ಅನೇಕ ಶ್ರೀಮಠದ ಸ್ವಾಮೀಜಿಗಳು ಮಠವನ್ನು ಕಟ್ಟಿ ಬೆಳೆಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಶ್ಲಾಘಿಸಿದರು.

ಲೋಕ ಕಲ್ಯಾಣದ ಕೆಲಸ ನಿರಂತರವಾಗಿ ನಡೆಯಬೇಕೆಂಬ ನಿಟ್ಟಿನಲ್ಲಿ ಮೊದಲು ಸುತ್ತೂರಿನಲ್ಲಿ ನಂತರ ಮೈಸೂರಿನಲ್ಲಿ, ಜೊತೆಗೆ ರಾಜ್ಯದ ಹಲವು ಕಡೆ ಜಯಂತೋತ್ಸವ ನಡೆದಿದ್ದು, ಕನಕಪುರದಲ್ಲಿ ನಡೆದ ಮಹೋತ್ಸವದಲ್ಲಿ ಮಳವಳ್ಳಿಯಲ್ಲಿ ನಡೆಯಬೇಕೆಂದು ತೀರ್ಮಾನಿಸಲಾಗಿತ್ತು. ಆದರೆ ಅನ್ಯ ಕಾರಣಗಳಿಂದ 6 ವರ್ಷಗಳ ನಂತರ ಈ ಕಾರ್ಯಕ್ರಮ ಇಲ್ಲಿ ನಡೆಯುತ್ತಿದೆ. ಈ ಜಯಂತೋತ್ಸವ 6 ವರ್ಷಗಳಿಂದ ಏಕೆ ಆಗಿಲ್ಲ ಎಂಬ ಪ್ರಶ್ನೆಗಿಂತ ನಡೆಯದಿದ್ದದ್ದೇ ಒಳಿತಾಯಿತು ಎಂದು ಭಾವಿಸಬೇಕು. ಏಕೆಂದರೆ ಇಂದು ನಡೆಯುತ್ತಿರುವ ಅಭೂತಪೂರ್ವ ಕಾರ್ಯಕ್ರಮದಲ್ಲಿ ಸ್ವತಹ ರಾಷ್ಟ್ರಪತಿಗಳು ಆಗಮಿಸಿದ್ದಾರೆ. ಈ ಹಿಂದೆಯೇ ನಡೆದಿದ್ದರೆ ಬಹುಶಃ ರಾಷ್ಟ್ರಪತಿಗಳು ಬರಲಿಕ್ಕೆ ಸಾಧ್ಯವಾಗುತ್ತಿರಲಿಲ್ಲವೇನೋ ಎಂದು ಹೇಳಿದರು.

ಶಿವರಾತ್ರೀಶ್ವರರ ಕೃಪೆಯಿಂದ ಈ ಕಾರ್ಯಕ್ರಮ ಉದ್ಘಾಟನೆಯಾಗಿದೆ. ಇಂದಿನಿಂದ ಐದಾರು ದಿನಗಳ ಕಾಲ ಈ ಕಾರ್ಯಕ್ರಮ ನಡೆಯಲಿದ್ದು, ಎಲ್ಲಾ ಭಕ್ತಾದಿಗಳು ಈ ಕಾರ್ಯಕ್ರಮದಲ್ಲಿ ಭಾಗಿಯಾಗಬೇಕು. ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆಸಬೇಕೆಂಬುದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಆಶಯವಾಗಿತ್ತು. ಅದರಂತೆ ಈ ಕಾರ್ಯಕ್ರಮಕ್ಕೆ ರಾಷ್ಟ್ರಪತಿ ಅವರು ಆಗಮಿಸಲು ಸಹ ಕುಮಾರಸ್ವಾಮಿ ಅವರೇ ಕಾರಣ. ರಾಷ್ಟ್ರಪತಿ ಅವರ ನೇತೃತ್ವದಲ್ಲಿ ಕುಮಾರಸ್ವಾಮಿ ಅವರ ಸ್ವಕ್ಷೇತ್ರದಲ್ಲಿ ಅವರ ಹುಟ್ಟುಹಬ್ಬ ದಿನದಂದೇ ಈ ಕಾರ್ಯಕ್ರಮ ನಡೆಯುತ್ತಿರುವುದು ವಿಶೇಷ ಎಂದರು.

ಹೆಚ್ಡಿಕೆಗೆ ಹುಟ್ಟುಹಬ್ಬಕ್ಕೆ ಶುಭ ಕೋರಿದ ಮುರ್ಮು

ಅಕ್ಕಪಕ್ಕದಲ್ಲೇ ಕುಳಿತರೂ ಪರಸ್ಪರ ಮುಖ ನೋಡದ ಹೆಚ್ಡಿಕೆ-ಚಲುವರಾಯಸ್ವಾಮಿ



ಮಂಡ್ಯ: ಮಳವಳ್ಳಿಯಲ್ಲಿ ನಡೆದ ರಾಷ್ಟ್ರಪತಿ ಕಾರ್ಯಕ್ರಮದಲ್ಲಿ ಹಲವು ವೈಶಿಷ್ಟ್ಯ ಘಟನೆಗಳು ಗಮನ ಸೆಳೆದವು. ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಭಾಷಣಕ್ಕೂ ಮುನ್ನ ಹುಟ್ಟುಹಬ್ಬದ ಶುಭಾಶಯ ಕೋರಿದ ದ್ರೌಪದಿ ಮುರ್ಮು, ದೇವರು ನಿಮಗೆ ಆರೋಗ್ಯ, ಆಯಸ್ಸು ನೀಡಲಿ ಎಂದ ಅವರು, ಕನ್ನಡದಲ್ಲಿ ಎಲ್ಲರಿಗೂ ನಮಸ್ಕಾರ ಎಂದರು.

ಜೊತೆಗೆ ರಾಷ್ಟ್ರಪತಿಗಳ ಜೊತೆಗಿನ ಫೋಟೋ ಶೂಟ್ ಸಂದರ್ಭದಲ್ಲಿ ಈ ಹಿಂದಿನ ಹಳೆಯ ಸ್ನೇಹಿತರು ಪ್ರಸ್ತುತ ರಾಜಕೀಯ ಕಡುವೈರಿಗಳಾದ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಎನ್.ಚಲುವರಾಯಸ್ವಾಮಿ ಅಕ್ಕಪಕ್ಕದಲ್ಲೇ ಕುಳಿತುಕೊಂಡಿದ್ದು ವಿಶೇಷವಾಗಿತ್ತು. ಇದಕ್ಕೂ ಮುನ್ನ ವೇದಿಕೆಯಲ್ಲಿದ್ದರೂ ಒಬ್ಬರನ್ನೊಬ್ಬರು ಮುಖ ನೋಡಲಿಲ್ಲ. ಆದರೆ ಭಾಷಣದ ಸಂದರ್ಭದಲ್ಲಿ ಕುಮಾರಸ್ವಾಮಿ ವೇದಿಕೆ ಮೇಲಿರುವ ಚಲುವರಾಯಸ್ವಾಮಿಯವರೇ ಎಂದು ಸಂಬೋಧಿಸಿದ್ದು ಬಿಟ್ಟರೆ, ಫೋಟೋ ಶೂಟ್ ಸಂದರ್ಭದಲ್ಲಿ ಅಕ್ಕಪಕ್ಕ ಕುಳಿತರೂ ಇಬ್ಬರು ಪರಸ್ಪರ ಮಾತನಾಡಲೂ ಇಲ್ಲ, ಮುಖವನ್ನು ನೋಡಲಿಲ್ಲ.

ಇನ್ನು ತಮ್ಮ ಸ್ವಾಗತ ಭಾಷಣದ ಸಂದರ್ಭ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಮಳವಳ್ಳಿ ತಾಲೂಕು ಇಡೀ ಏಷ್ಯಾ ಖಂಡದಲ್ಲೇ ಮೊದಲ ಬಾರಿಗೆ ವಿದ್ಯುತ್ ಉತ್ಪಾದಿಸಿದ ಸ್ಥಳ ಎಂಬುದನ್ನು ರಾಷ್ಟ್ರಪತಿಯವರಿಗೆ ತಿಳಿಸಿಕೊಟ್ಟರು. ಇಡೀ ಏಷ್ಯಾ ಖಂಡದಲ್ಲೇ ಮೊದಲ ಬಾರಿಗೆ ಗಗನಚುಕ್ಕಿಯ ಶಿಂಷಾ ವಿದ್ಯುತ್ ಸ್ಥಾವರದಲ್ಲಿ 1902ರಲ್ಲಿ ವಿದ್ಯುತ್ ಉತ್ಪಾದಿಸಿ ಬೆಂಗಳೂರು ನಗರಕ್ಕೆ ಮೊದಲ ಬಾರಿಗೆ ವಿದ್ಯುತ್ ನೀಡಿ, ಬಳಿಕ ಕೋಲಾರದ ಕೆಜಿಎಫ್‌ನಲ್ಲಿ ಚಿನ್ನದ ಗಣಿ ಉತ್ಪಾದನೆಗೆ ವಿದ್ಯುತ್ ಬಳಕೆ ಮಾಡಿಕೊಳ್ಳಲಾಗಿತ್ತು.

ಕೈಗಾರಿಕೆ ಸ್ಥಾಪನೆಗೆ ಎಷ್ಟು ಭೂಮಿ ಬೇಕೆಂದು ಕುಮಾರಸ್ವಾಮಿ ಕೆಐಎಡಿಬಿಗೆ ಅರ್ಜಿ ಸಲ್ಲಿಸಲಿ

ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಸಲಹೆ



ಮಳವಳ್ಳಿ, ಡಿ.16– ಜಿಲ್ಲೆ ಮತ್ತು ರಾಜ್ಯದಲ್ಲಿ ಕೈಗಾರಿಕೆ ಸ್ಥಾಪನೆಗೆ ಎಷ್ಟು ವಿಸ್ತೀರ್ಣದ ಭೂಮಿ ಬೇಕು ಎಂಬುದರ ಬಗ್ಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಸಂಬಂಧಿಸಿದ ಪ್ರಾಧಿಕಾರ (ಕೆಐಎಡಿಬಿ)ಕ್ಕೆ ಅರ್ಜಿ ಸಲ್ಲಿಸಲಿ. ಅದು ಬಿಟ್ಟು ಇಲ್ಲದ ಸುಳ್ಳು ಹೇಳಿಕೊಂಡು ಜನರಲ್ಲಿ ಗೊಂದಲ ಮೂಡಿಸುವುದು ಸರಿಯಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಟಾಂಗ್ ನೀಡಿದರು.

ಮಂಗಳವಾರ ಸಂಜೆ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೈಗಾರಿಕೆ ಸ್ಥಾಪನೆ ಮಾಡಬೇಕೆಂದಲ್ಲಿ ಯಾವ ಕೈಗಾರಿಕೆ, ಅದಕ್ಕೆ ಯಾವ ಪ್ರಮಾಣದ ಭೂಮಿ ಬೇಕು ಇತ್ಯಾದಿ ವಿವರಗಳನ್ನೊಳಗೊಂಡ ಮಾಹಿತಿಯನ್ನು ಸಂಬಂಧಿಸಿದ ಪ್ರಾಧಿಕಾರ ಇಲ್ಲವೇ ಜಿಲ್ಲಾಧಿಕಾರಿಗೆ ಸಲ್ಲಿಸಬೇಕು. ಜಿಲ್ಲಾಧಿಕಾರಿಗಳು ಪರಿಶೀಲನೆ ನಡೆಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವರು. ನಂತರ ರಾಜ್ಯ ಸರ್ಕಾರ ಆ ಬಗ್ಗೆ ಕ್ರಮ ವಹಿಸುತ್ತದೆ. ಇಷ್ಟು ಸಣ್ಣ ಪ್ರಮಾಣದ ಜ್ಞಾನವೂ ಮಾಜಿ ಮುಖ್ಯಮಂತ್ರಿಯಾದವರಿಗೆ ಇಲ್ಲವೇ? ಅಥವಾ ಗೊತ್ತಿದ್ದೂ ಜನರಲ್ಲಿ ಗೊಂದಲ ಮೂಡಿಸಲು ಈ ರೀತಿ ಮಾತನಾಡುತ್ತಿದ್ದಾರೆಯೇ ಎಂದು ಹರಿಹಾಯ್ದರು.

ರಾಜ್ಯ–ಜಿಲ್ಲೆಗೆ ಅವರ ಕೊಡುಗೆ ಏನು: ಕೇಂದ್ರ ಸಚಿವರಾಗಿ ಒಂದೂವರೆ ವರ್ಷವಾಗಿದೆ. ಆದರೂ ರಾಜ್ಯಕ್ಕೆ ಅವರ ಕೊಡುಗೆ ಏನು ಎಂದು ಪ್ರಶ್ನಿಸಿದ ಅವರು, ನಾವು ಯಾರೂ ಅವರ ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿಯಾಗಿಲ್ಲ. ಜಮೀನು ಕೊಡುತ್ತಿಲ್ಲ ಎಂಬ ಕುಂಟು ನೆಪ ಹೇಳಿಕೊಂಡು ಕಾಲಹರಣ ಮಾಡುತ್ತಿದ್ದಾರೆ. ಭದ್ರಾವತಿ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆ ಪುನಶ್ಚೇತನ ಮಾಡುತ್ತೇನೆ ಎಂದರು. ಕಾಗದ ಕಾರ್ಖಾನೆಗೆ ಕಾಯಕಲ್ಪ ನೀಡುವುದಾಗಿ ತಿಳಿಸಿದರು. ಏನು ಮಾಡಿದ್ದಾರೆ ಎಂದು ಪ್ರಶ್ನಿಸಿದರು.

ಕೇವಲ ಹಿಟ್ ಅಂಡ್ ರನ್: ಸಾಲ ಮನ್ನಾ ಮಾಡಿದ್ದೇ ಸಾಧನೆ ಎಂದು ಹೇಳುತ್ತಾರೆ. ಸಾಲ ಮನ್ನಾ ಯೋಜನೆಯಲ್ಲಿ ಡಿಸಿಸಿ ಬ್ಯಾಂಕ್‌ಗಳಿಗೆ ಹಣ ಕೊಡಲಿಲ್ಲ. ಕುಮಾರಸ್ವಾಮಿ ಅವರು ಕೇವಲ ಹಿಟ್ ಅಂಡ್ ರನ್ ಮಾಡುತ್ತಿದ್ದಾರೆಯೇ ಹೊರತು ಯಾವುದೇ ಕೆಲಸ ಮಾಡಲಿಲ್ಲ. ಜನರ ಬಳಿ ಬಂದು ಎಲ್ಲವನ್ನೂ ಮಾಡಿದ್ದೇನೆ ಎಂದು ಪೋಸ್ ಕೊಡುತ್ತಾರೆ ಎಂದು ಕಿಡಿಕಾರಿದರು. ರಾಜ್ಯದಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳು ನಡೆದಿವೆ. ಎಲ್ಲದ್ದಕ್ಕೂ ಒಂದೇ ಕಾರಣ ಇರುವುದಿಲ್ಲ. ಈಗ ಅದು ನಿಯಂತ್ರಣಕ್ಕೆ ಬಂದಿದೆ. ಸಂಪೂರ್ಣ ನಿಲ್ಲಿಸಿದ್ದೇವೆ ಎಂದೇನೂ ಹೇಳುವುದಿಲ್ಲ. ನಾವೂ ಕೆಲಸ ಮಾಡುತ್ತಿದ್ದೇವೆ. ಹತೋಟಿಗೆ ತಂದಿದ್ದೇವೆ. ಮೆಕ್ಕೆಜೋಳದ ಬೆಂಬಲ ಬೆಲೆ ವಿಚಾರದಲ್ಲಿ ಅವರು ಮಾತನಾಡುವುದಿಲ್ಲ. ಬೆಂಬಲ ಬೆಲೆ ನಿಗದಿ ಮಾಡಿ ಅನುದಾನ ಕೊಡಲು ಕೇಂದ್ರ ಸರ್ಕಾರಕ್ಕೆ ಅಧಿಕಾರವಿಲ್ಲವೇ, ಅದನ್ನು ಇವರು ಏಕೆ ಮಾಡುವುದಿಲ್ಲ ಎಂದು ಪ್ರಶ್ನಿಸಿದರು.

88.67 ಲಕ್ಷ ರೂ. ಮೌಲ್ಯದ ರಸಗೊಬ್ಬರ ವಶ: ಕೇರಳದ ತಾಜೀರ್ ಎಂಬಾತ ನೆಲಮಂಗಲದ ಬಳಿಯ ಗೋದಾಮಿನಲ್ಲಿ ಅಕ್ರಮವಾಗಿ ರಸಗೊಬ್ಬರ ದಾಸ್ತಾನು ಮಾಡಿ ತಮಿಳುನಾಡಿಗೆ ಸರಬರಾಜು ಮಾಡುತ್ತಿದ್ದನ್ನು ಪತ್ತೆ ಮಾಡಿದ ಕೇಂದ್ರ ಮತ್ತು ರಾಜ್ಯದ ಜಾಗೃತ ದಳದ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಿ 88.67 ಲಕ್ಷ ರೂ. ಮೌಲ್ಯದ 139 ಮೆಟ್ರಿಕ್ ಟನ್ ರಸಗೊಬ್ಬರವನ್ನು ವಶಪಡಿಸಿಕೊಂಡಿದ್ದಾರೆ ಎಂದು ಹೇಳಿದರು.


ಇಂತಹ ಪ್ರಕರಣಗಳು ಇದೇ ಮೊದಲಲ್ಲ, ಹಿಂದೆಯೂ ಸಹ ನಡೆದಿವೆ. ಕಳೆದ 3 ವರ್ಷದಲ್ಲಿ 22 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. ಇದರಲ್ಲಿ 7 ಪ್ರಕರಣಗಳಿಂದ 40 ಲಕ್ಷ ಮೌಲ್ಯದ 638 ಮೆಟ್ರಿಕ್ ಟನ್ ಗೊಬ್ಬರವನ್ನು ವಶಪಡಿಸಿಕೊಳ್ಳಲಾಗಿದೆ. ವಾಣಿಜ್ಯ ತೆರಿಗೆ ಇಲಾಖೆ, ಕೃಷಿ, ಕಂದಾಯ, ಪೊಲೀಸ್ ಸೇರಿದಂತೆ ಹಲವು ಇಲಾಖೆಗಳನ್ನೊಳಗೊಂಡ ಜಾಗೃತ ದಳವನ್ನು ರಚಿಸಲಾಗಿದ್ದು, ಅವರು ಪತ್ತೆ ಕಾರ್ಯ ಕೈಗೊಳ್ಳುತ್ತಾರೆ. ಇದು ನಿರಂತರವಾಗಿರುತ್ತದೆ. ನಾವೂ ಸಹ ಸಂಪೂರ್ಣವಾಗಿ ನಿಲ್ಲಿಸುತ್ತೇವೆ ಎಂದು ಹೇಳಲಾಗದು. ನಿಯಂತ್ರಣ ಮಾಡಲು ಯಾವ್ಯಾವ ಕ್ರಮಗಳನ್ನ ಕೈಗೊಳ್ಳಬೇಕೋ ಎಲ್ಲವನ್ನೂ ತೆಗೆದುಕೊಂಡಿದ್ದೇವೆ ಎಂದು ವಿವರಿಸಿದರು.

ಸ್ವಾಗತ



ಮಳವಳ್ಳಿಗೆ ಆಗಮಿಸಿದ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರನ್ನು ಸುತ್ತೂರು ಶ್ರೀಗಳು ಸ್ವಾಗತಿಸಿದರು.

ರಾಷ್ಟ್ರಪತಿಗೆ ಸ್ವಾಗತ



ಮಳವಳ್ಳಿಗೆ ಆಗಮಿಸಿದ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರನ್ನು ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರೊಂದಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಸಚಿವ ಎನ್.ಚಲುವರಾಯಸ್ವಾಮಿ ಹೂಗುಚ್ಛ ನೀಡಿ ಸ್ವಾಗತಿಸಿದರು.

ಸಾಲೂರು ಮಠದ ಶ್ರೀಗಳನ್ನು ಮಲೈ ಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದ ಖಾಯಂ ಸದಸ್ಯರನ್ನಾಗಿ ನೇಮಿಸಬೇಕು

ವಿಧಾನ ಸಭೆಯಲ್ಲಿ ಶಾಸಕ ಶ್ರೀವತ್ಸ ಆಗ್ರಹ



ಶ್ರೀವತ್ಸ

ಬೆಳಗಾವಿ, ಡಿ.16– ಸಾಲೂರು ಮಠದ ಶ್ರೀಗಳನ್ನು ಮಲೈ ಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದ ರಾಜ್ಯ ಜಿಲ್ಲಾ ಸಮಿತಿಯ ಖಾಯಂ ಸದಸ್ಯರನ್ನಾಗಿ ನೇಮಿಸಬೇಕೆಂದು ಮೈಸೂರಿನ ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಆಗ್ರಹಿಸಿದ್ದಾರೆ.

ಬೆಳಗಾವಿ ಅಧಿವೇಶನದಲ್ಲಿ ಮುಜರಾಯಿ ಇಲಾಖೆ ಸಚಿವ ರಾಮಲಿಂಗರೆಡ್ಡಿ ಅವರು ಶ್ರೀ ಮಲೈ ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ರಾಜ್ಯ ಹಾಗೂ ಜಿಲ್ಲಾ ಮಟ್ಟದ ಸಮಿತಿ 2025ರ ವಿಧೇಯಕ ರಚನೆ ವಿಷಯ ಪ್ರಸ್ತಾಪಿಸಿದ ಸಂದರ್ಭದಲ್ಲಿ ಶಾಸಕ ಶ್ರೀವತ್ಸ ಈ ಒತ್ತಾಯ ಮಂಡಿಸಿದ್ದಾರೆ.

ಮಲೈ ಮಹದೇಶ್ವರ ಬೆಟ್ಟದಲ್ಲಿರುವ ಪುರಾತನ ಸಾಲೂರು ಮಠದ ನೇತೃತ್ವದಲ್ಲಿಯೇ ಹಲವಾರು ವರ್ಷಗಳಿಂದ ಪೂಜಾವಿಧಾನ, ಧಾರ್ಮಿಕ ಕಾರ್ಯಕ್ರಮಗಳು ಜರುಗುತ್ತಾ ಬಂದಿವೆ ಹಾಗಾಗಿ ಸಾಲೂರು ಮಠದ ಸ್ವಾಮೀಜಿಯನ್ನು ಶ್ರೀ ಮಲೈ ಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದ ಹಾಗೂ ರಾಜ್ಯ ಜಿಲ್ಲಾ ಮಟ್ಟದ ಖಾಯಂ ಸಮಿತಿ ಸದಸ್ಯರನ್ನಾಗಿ ನೇಮಿಸಬೇಕೆಂಬ ಶಾಸಕರ ಒತ್ತಾಯಕ್ಕೆ ಮುಜರಾಯಿ ಸಚಿವರು ಒಪ್ಪಿಗೆ ಸೂಚಿಸಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ



ಮೈಸೂರು,ಡಿ.16(ಪಿಎಂ)– ಸೆಸ್ಕ್ ವತಿಯಿಂದ ಎಫ್‌ಟಿಎಸ್ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕಾರ್ಯ ಹಮ್ಮಿಕೊಂಡಿದ್ದು, ಈ ಹಿನ್ನೆಲೆಯಲ್ಲಿ ಡಿ.17ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಕೆಳಕಂಡ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಸಿವಿ ರಸ್ತೆಯ ಬಿಬಿಕೇರಿ ಭಾವನ ಮಾರ್ಬಲ್, ಎಲ್‌ಐಸಿ ಕಚೇರಿ, ಸಿ ಲೇಔಟ್ ಮೊದಲನೇ ಕ್ರಾಸ್, ನೆಲ್ಸನ್ ಮಂಡೇಲಾ ರಸ್ತೆ, ಪುಲಿಕೇಶಿ ರಸ್ತೆ, ತಿಲಕ್‌ನಗರ ಹಾಗೂ ಇಲ್ಲಿನ ಶ್ರವಣದೋಷವುಳ್ಳ ಮಕ್ಕಳ ಸರ್ಕಾರಿ ಶಾಲೆ, ಮೇದರ್ ಬ್ಲಾಕ್, ಬಂಬೂ ಬಜಾರ್, ಮೈಸೂರು ಕೇಂದ್ರ ಕಾರಾಗೃಹ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಗ್ರಾಹಕರು ಸಹಕರಿಸಬೇಕೆಂದು ಪ್ರಕಟಣೆಯಲ್ಲಿ ಕೋರಲಾಗಿದೆ.

ಮಂಡ್ಯದ ವಿವಿಧೆಡೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹುಟ್ಟುಹಬ್ಬ

●ಕಾರ್ಯಕರ್ತನಿಂದ ಚಿನ್ನದ ಸರ ಉಡುಗೊರೆ ●ಮುಖಂಡರು, ಕಾರ್ಯಕರ್ತರಿಂದ ಕೇಕ್ ಕತ್ತರಿಸಿ ಸಂಭ್ರಮಾಚರಣೆ ●ರೋಗಿಗಳಿಗೆ ಹಣ್ಣು-ಹಂಪಲು ವಿತರಣೆ





ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹುಟ್ಟುಹಬ್ಬದ ಅಂಗವಾಗಿ ವಿ.ಸಿ.ಫಾರಂ ಗೇಟ್‌ನಲ್ಲಿ ಜೆಡಿಎಸ್ ಕಾರ್ಯಕರ್ತ ಶಂಕರೇಗೌಡ ಚಿನ್ನದ ಸರ ತೊಡಿಸಿದರು. ಮತ್ತೊಂದು ಚಿತ್ರದಲ್ಲಿ ಮದ್ದೂರಿನಲ್ಲಿ ಮಾಜಿ ಸಚಿವ ಡಿ.ಸಿ.ತಮ್ಮಣ್ಣ, ಕುಮಾರಸ್ವಾಮಿ ಅವರಿಗೆ ಕೇಕ್ ತಿನ್ನಿಸಿದರು. ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಇತರರಿದ್ದರು.

ಮಂಡ್ಯ, ಡಿ.16– ಮಂಡ್ಯ ಸಂಸದರೂ ಆಗಿರುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಹುಟ್ಟುಹಬ್ಬವನ್ನು ಜಿಲ್ಲೆಯ ಹಾಲಿ ಮತ್ತು ಮಾಜಿ ಜನಪ್ರತಿನಿಧಿಗಳು, ಮುಖಂಡರು, ಕಾರ್ಯಕರ್ತರು ಜಿಲ್ಲೆಯಾದ್ಯಂತ ಅದ್ದೂರಿಯಾಗಿ ಆಚರಿಸಿದರು.

ಮದ್ದೂರಿನ ಟಿ.ಬಿ.ವೃತ್ತದಲ್ಲಿ ಮಾಜಿ ಸಚಿವ ಡಿ.ಸಿ.ತಮ್ಮಣ್ಣ, ಮಂಡ್ಯ ನಗರದ ಜೆಸಿ ವೃತ್ತದಲ್ಲಿ ಮನ್‌ಮುಲ್ ನಿರ್ದೇಶಕ ಬಿ.ಆರ್.ರಾಮಚಂದ್ರ ಹಾಗೂ ಮಳವಳ್ಳಿಯಲ್ಲಿ ಮಾಜಿ ಶಾಸಕ ಡಾ.ಕೆ.ಅನ್ನದಾನಿ ನೇತೃತ್ವದಲ್ಲಿ ಹೆಚ್ಡಿಕೆ ಹುಟ್ಟುಹಬ್ಬವನ್ನು ಕೇಕ್ ಕತ್ತರಿಸಿ ಆಚರಿಸಲಾಯಿತು.

ಮಂಡ್ಯ: ನಗರದ ವಿ.ಸಿ.ಫಾರಂ ಗೇಟ್‌ನಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ನೇತೃತ್ವದಲ್ಲಿ ಮೇಲುಕೋಟೆ ಕ್ಷೇತ್ರದ ನೂರಾರು ಮುಖಂಡರು, ಕಾರ್ಯಕರ್ತರು ಕುಮಾರಸ್ವಾಮಿ ಅವರನ್ನು ಅಭಿನಂದಿಸಿ, ಕೇಕ್ ಕತ್ತರಿಸಿ ಹುಟ್ಟುಹಬ್ಬ ನೆರವೇರಿಸಿದರು.

ಕೇಂದ್ರ ಹೆಚ್.ಡಿ.ಕುಮಾರಸ್ವಾಮಿ ವಿ.ಸಿ.ಫಾರಂಗೆ ಆಗಮಿಸುತ್ತಿದ್ದಂತೆಯೇ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಬೃಹತ್ ಹಾರ ಹಾಕಿ, ಮಂಗಳವಾದ್ಯ, ಜಾನಪದ ಕಲಾ ತಂಡಗಳೊಂದಿಗೆ ಸ್ವಾಗತಿಸಿದರು. ಬಳಿಕ ಹುಟ್ಟುಹಬ್ಬದ ಅಂಗವಾಗಿ ಮುಖಂಡರು, ಬೆಂಬಲಿಗರು, ಕಾರ್ಯಕರ್ತರೊಂದಿಗೆ ಹೆಚ್‌ಡಿಕೆ ಕೇಕ್ ಕತ್ತರಿಸಿ ಸಂಭ್ರಮಿಸಿದರು.

ಜೆಡಿಎಸ್ ನಾಯಕ, ಗುತ್ತಿಗೆದಾರ ಪುರದಕೊಪ್ಪಲು ಶಂಕರೇಗೌಡ 30 ಗ್ರಾಂ ತೂಕದ ಚಿನ್ನದ ಸರವನ್ನು ಕುಮಾರಸ್ವಾಮಿ ಅವರ ಕೊರಳಿಗೆ ತೊಡಿಸಿದರು.

ಮಾಜಿ ಶಾಸಕ ಕೆ.ಸುರೇಶ್‌ಗೌಡ, ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಪಿಇಟಿ ಅಧ್ಯಕ್ಷ ಕೆ.ಎಸ್.ವಿಜಯಾನಂದ, ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್, ಜಿಪಂ ಮಾಜಿ ಸದಸ್ಯ ಅಶೋಕ್ ಸೇರಿದಂತೆ ಮೇಲುಕೋಟೆ ವಿಧಾನಸಭಾ ಕ್ಷೇತ್ರದ ನೂರಾರು ಮುಖಂಡರು ಇದ್ದರು.

ಮದ್ದೂರು: ನಗರಕ್ಕೆ ಆಗಮಿಸಿದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಮಾಜಿ ಸಚಿವ ಡಿ.ಸಿ.ತಮ್ಮಣ್ಣ ನೇತೃತ್ವದಲ್ಲಿ ಅದ್ದೂರಿಯಾಗಿ ಸ್ವಾಗತಿಸಲಾಯಿತು.

ಪಟ್ಟಣದ ಪ್ರವಾಸಿ ಮಂದಿರಕ್ಕೆ ಆಗಮಿಸುತ್ತಿದ್ದಂತೆ ಹೆಚ್.ಡಿ.ಕುಮಾರಸ್ವಾಮಿ ಅವರ ಹುಟ್ಟುಹಬ್ಬದ ಅಂಗವಾಗಿ ಅಭಿಮಾನಿಗಳು, ಜೆಡಿಎಸ್, ಬಿಜೆಪಿ ಕಾರ್ಯಕರ್ತರು ಹಾಗೂ ಮುಖಂಡರು ಜೈಕಾರ ಹಾಕಿ ನೂಕು ನುಗ್ಗಲಿನೊಂದಿಗೆ ಹಾರ-ತುರಾಯಿಗಳನ್ನು ಹಿಡಿದು ಅಭಿನಂದಿಸಿದ್ದು ಕಂಡುಬಂತು.

ಪಟ್ಟಣದ ಶ್ರೀಉಗ್ರನರಸಿಂಹಸ್ವಾಮಿ ದೇಗುಲದ ಪ್ರಶಾಂತ್, ಶ್ರೀಹೊಳೆ ಆಂಜನೇಯಸ್ವಾಮಿ ದೇಗುಲದ ಪ್ರದೀಪ್ ಆಚಾರ್ಯ ಹಾಗೂ ಕಾಶಿ ವಿಶ್ವೇಶ್ವರ ಸ್ವಾಮಿ ದೇಗುಲದ ವೇದಬ್ರಹ್ಮ ಡಾ.ರಾಘವೇಂದ್ರ ಪುರೋಹಿತರು ಕುಮಾರಸ್ವಾಮಿ ಅವರಿಗೆ ಶಾಲು ಹೊದಿಸಿ ಹಣ್ಣುಗಳನ್ನು ನೀಡಿ ಶುಭವಾಗಲಿ ಎಂದು ಹಾರೈಸಿದರು.

ಮನ್‌ಮುಲ್ ಮಾಜಿ ನಿರ್ದೇಶಕಿ ರೂಪ ಬೆಲ್ಲದ ಆರತಿ ಮಾಡುವ ಮೂಲಕ ಕುಮಾರಸ್ವಾಮಿ ಅವರಿಗೆ ಶುಭ ಕೋರಿದರು.

ಮಾಜಿ ಸಚಿವರಾದ ಡಿ.ಸಿ.ತಮ್ಮಣ್ಣ, ಸಿ.ಎಸ್.ಪುಟ್ಟರಾಜು, ಮಾಜಿ ಶಾಸಕ ಸುರೇಶ್‌ಗೌಡ, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ತಾಲೂಕು ಅಧ್ಯಕ್ಷ ಚಿಕ್ಕತಿಮ್ಮೇಗೌಡ, ಕಾರ್ಯಾಧ್ಯಕ್ಷ ರಾಜಣ್ಣ, ಜೆಡಿಎಸ್ ಮಹಿಳಾ ಘಟಕದ ತಾಲೂಕು ಅಧ್ಯಕ್ಷೆ ದಿವ್ಯ, ಸಮಾಜ ಸೇವಕ ಅಪ್ಪು ಪಿ.ಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ರವೀಶ್ವಚಂದ್ರ ನಗರಸಭಾ ಮಾಜಿ ಸದಸ್ಯರಾದ ಪ್ರವೀಣ್, ಮನೋಜ್ ಇತರರಿದ್ದರು.

ಕೆ.ಆರ್.ಪೇಟೆ: ಪಟ್ಟಣದ ಸಾರ್ವಜನಿಕ ಆಸ್ಪತ್ರೆ ರೋಗಿಗಳಿಗೆ ತಾಲೂಕು ಜೆಡಿಎಸ್ ಕಾರ್ಯಕರ್ತರು ಹಣ್ಣು ಹಂಪಲು ವಿತರಿಸುವ ಮೂಲಕ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರ ಹುಟ್ಟುಹಬ್ಬ ಆಚರಿಸಿದರು.

ಈ ವೇಳೆ ಟಿಎಪಿಸಿಎಂಎಸ್ ಅಧ್ಯಕ್ಷ ಬಲದೇವ್, ನಿರ್ದೇಶಕರಾದ ಹೆಚ್.ಟಿ.ಲೋಕೇಶ್, ಮೋಹನ್, ದಿಲೀಪ್‌ಕುಮಾರ್, ಜೆಡಿಎಸ್ ಹಿರಿಯ ಮುಖಂಡ ವಿ.ಎನ್.ಮಹಾದೇವೇಗೌಡ, ವೀರಶೈವ ಲಿಂಗಾಯತ ಮಹಾಸಭಾ ಮಾಜಿ ಅಧ್ಯಕ್ಷ ವಿ.ಎಸ್.ಧನಂಜಯ್ ಕುಮಾರ್, ಎಪಿಎಂಸಿ ಮಾಜಿ ಅಧ್ಯಕ್ಷ ಮಲ್ಲೇಶ್, ತಾಲೂಕು ಯುವ ಜೆಡಿಎಸ್ ಅಧ್ಯಕ್ಷ ಮಹಾದೇವ್, ಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ತೋಟಪ್ಪಶೆಟ್ಟಿ, ವೈದ್ಯಾಧಿಕಾರಿ ಡಾ.ಮಂಜುಳಾ, ಡಾ.ಶ್ರೀಕಾಂತ್, ಮುಖಂಡರಾದ ನಂಜಪ್ಪ, ಕೆ.ಆರ್.ಹೇಮಂತ ಕುಮಾರ್, ಸಿ.ಕೆ.ನಾಗೇಶ್, ಉಮೇಶ್, ಶೇಷಾದ್ರಿ, ಅಗ್ರಹಾರಬಾಚಹಳ್ಳಿ ಸೊಸೈಟಿ ಅಧ್ಯಕ್ಷ ಅಶೋಕ್, ಹರೀಶ್, ಗ್ರಾಪಂ ಮಾಜಿ ಅಧ್ಯಕ್ಷ ಯೋಗೇಶ್, ಎ.ಸಿ.ಲೋಹಿತ್, ಕುಮಾರ್, ಶಾಸಕರ ಆಪ್ತ ಸಹಾಯಕ ಪ್ರತಾಪ್, ಧ್ರುವ, ಪ್ರದೀಪ್ ಇದ್ದರು.

ಪಾಂಡವಪುರ: ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಹುಟ್ಟುಹಬ್ಬದ ಅಂಗವಾಗಿ ಪಟ್ಟಣದಲ್ಲಿ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಅಭಿಮಾನಿಗಳು ಹಾಗೂ ಜೆಡಿಎಸ್ ಮುಖಂಡರು, ಕಾರ್ಯಕರ್ತರು ಆಸ್ಪತ್ರೆ ರೋಗಿಗಳಿಗೆ ಹಣ್ಣುಹಂಪಲು ವಿತರಿಸಿದರು. ಈ ವೇಳೆ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಮಾತನಾಡಿದರು. ಟಿಎಪಿಸಿಎಂಎಸ್ ಅಧ್ಯಕ್ಷ ಗಿರೀಶ್, ನಿರ್ದೇಶಕರಾದ ವಿ.ಎಸ್.ನಿಂಗೇಗೌಡ, ಆದರ್ಶ, ಪುರಸಭೆ ಮಾಜಿ ಅಧ್ಯಕ್ಷರಾದ ಆರ್.ಸೋಮಶೇಖರ್, ಎಂ.ಗಿರೀಶ್, ಮಾಜಿ ಸದಸ್ಯರಾದ ಚಂದ್ರು, ವೈದ್ಯಾಧಿಕಾರಿ ಡಾ.ಸಿ.ಎ.ಅರವಿಂದ್, ಮುಖಂಡರಾದ ನಾಗಣ್ಣ, ಅಶೋಕ್, ಚೇತನ್, ಮಂಜುನಾಥ್, ಬಲರಾಮೇಗೌಡ, ರಾಜೇಶ್, ಗೋವಿಂದಯ್ಯ, ಬೊಮ್ಮರಾಜು, ಯೋಗೇಶ್, ಬಿ.ಎಸ್.ಜಯರಾಮು, ಸಗಾಯಂ, ರಾಜೇಶ್, ಪ್ರಶಾಂತ್, ಶಶಿಕುಮಾರ್, ಗುರು, ನಟರಾಜು ಸೇರಿದಂತೆ ಹಲವರಿದ್ದರು.



ಪಾಂಡವಪುರದಲ್ಲಿ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು.

ಕೈಗಾರಿಕೆ ಸ್ಥಾಪನೆಗೆ ಸರ್ಕಾರದ ಸಹಕಾರ ಮುಖ್ಯ: ಹೆಚ್‌ಡಿಕೆ



ಶ್ರೀರಂಗಪಟ್ಟಣದಲ್ಲಿ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿದರು.

ಶ್ರೀರಂಗಪಟ್ಟಣ, ಡಿ.16– ಜಿಲ್ಲೆಯ ಜನರ ಋಣ ತೀರಿಸುವ ಜವಾಬ್ದಾರಿ ನನ್ನ ಮೇಲಿದ್ದು, ರಾಜ್ಯದಲ್ಲಿ ಬೃಹತ್ ಕೈಗಾರಿಕೆ ಸ್ಥಾಪನೆಗೆ ರಾಜ್ಯ ಸರ್ಕಾರದ ಸಹಕಾರ ಮುಖ್ಯ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಪಟ್ಟಣದ ಬೆಂಗಳೂರು-ಮೈಸೂರು ಹೆದ್ದಾರಿ ಬಳಿಯ ಕುವೆಂಪು ವೃತ್ತದಲ್ಲಿ ಮಾತನಾಡಿದ ಅವರು, ಜಿಲ್ಲೆಯ ಜನತೆ ಬಗ್ಗೆ ನನಗೆ ಅಪಾರ ಅಭಿಮಾನವಿದೆ. ಕೇಂದ್ರದ ಮೋದಿಯವರ ಸಚಿವ ಸಂಪುಟದಲ್ಲಿ 2 ದೊಡ್ಡ ಸಚಿವ ಸ್ಥಾನ ದೊರೆತಿದೆ. ರಾಜ್ಯದಲ್ಲಿ ನಿರುದ್ಯೋಗ ನಿವಾರಣೆಗೆ ಬೃಹತ್ ಕೈಗಾರಿಕೆ ಸ್ಥಾಪಿಸಲು ಉತ್ಸುಕನಾಗಿದ್ದು, ರಾಜ್ಯ ಸರ್ಕಾರದ ಸಹಕಾರ ಬೇಕಾಗಿದೆ. ಅಗತ್ಯ ಜಾಗ, ನೀರು, ವಿದ್ಯುತ್ ಸೇರಿದಂತೆ ಮೌಲ ಸೌಕರ್ಯಕ್ಕೆ ರಾಜ್ಯ ಸರ್ಕಾರ ಒಪ್ಪಿಗೆ ಬೇಕಿದೆ. ಬಂಡವಾಳ ಹೂಡುವವರನ್ನು ಕರೆ ತರುವುದು ಮುಖ್ಯವಲ್ಲ. ಸರ್ಕಾರವೂ ಸಹ ಕೈ ಜೋಡಿಸಿದ್ದೇ ಆದಲ್ಲಿ ಬೃಹತ್ ಕೈಗಾರಿಕೆ ಸ್ಥಾಪಿಸುವುದು ಖಚಿತ ಎಂದರು.

ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಮಾತನಾಡಿ, ಕೇಂದ್ರದಲ್ಲಿ ದೇಶದ ರಕ್ಷಣೆಗೆ ಮೋದಿ ಅವರು ಇರುವಂತೆ ರಾಜ್ಯದ ಅಭಿವೃದ್ಧಿಗೆ ಕುಮಾರಣ್ಣ ಅವರ ಸಾರಥ್ಯ ಅಗತ್ಯವಾಗಿದೆ. ಅವರ ಆರೋಗ್ಯ ವೃದ್ಧಿಗಾಗಿ ಶ್ರೀರಂಗನಾಥಸ್ವಾಮಿ, ಶ್ರೀನಿಮಿಷಾಂಬ ದೇವಾಲಯ ಸೇರಿದಂತೆ ಪ್ರಮುಖ ದೇವಾಲಯಗಳಲ್ಲಿ ವಿಶೇಷ ಪೂಜೆ ಸಲ್ಲಿಸಲಾಗಿದೆ ಎಂದರು.

ವೇದಬ್ರಹ್ಮ ಡಾ.ಭಾನುಪ್ರಕಾಶ್ ಶರ್ಮಾ ನೇತೃತ್ವದ ವೈದಿಕರ ತಂಡ ವೇದ ಘೋಷಗಳೊಂದಿಗೆ ಕುಮಾರಸ್ವಾಮಿ ಅವರ ಆರೋಗ್ಯ ವೃದ್ಧಿಗೆ ಪ್ರಾರ್ಥನೆ ಸಲ್ಲಿಸಿದರು. ಸಾವಿರಾರು ಅಭಿಮಾನಿಗಳು ಹಾಗೂ ಕಾರ್ಯಕರ್ತರು ಜಮಾವಣೆಗೊಂಡು ಬೃಹತ್ ಹೂವಿನ ಹಾರ ಹಾಕಿ, ಪಟಾಕಿ ಸಿಡಿಸಿ, ಸಿಹಿ ಹಂಚಿ ಕುಮಾರಸ್ವಾಮಿ ಅವರ ಹುಟ್ಟುಹಬ್ಬ ಆಚರಿಸಿದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಮಾಜಿ ಶಾಸಕ ಸುರೇಶ್‌ಗೌಡ, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಪಿಇಟಿ ಅಧ್ಯಕ್ಷ ವಿಜಯಾನಂದ್, ಜಿಪಂ ಮಾಜಿ ಸದಸ್ಯ ಮರೀಗೌಡ, ತಾಲೂಕು ಜೆಡಿಎಸ್ ಅಧ್ಯಕ್ಷ ದಶರಥ ಸೇರಿದಂತೆ ಇತರರಿದ್ದರು.

ನಾಡಿನ ಜನತೆ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡುತ್ತಿರುವೆ

ನನ್ನನ್ನ ನಂಬಿದವರೂ ಇದ್ದಾರೆ, ಟೀಕಿಸುವವರು ಇದ್ದಾರೆ: ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ



ಮಂಡ್ಯ, ಡಿ.16– ಪ್ರಧಾನಿ ಮೋದಿ ಅವರು ಕೇಂದ್ರದಲ್ಲಿ ಮಂತ್ರಿ ಸ್ಥಾನ ನೀಡಿ ನನಗೆ ಜವಾಬ್ದಾರಿ ಕೊಟ್ಟಿದ್ದಾರೆ. ನನ್ನ ಮೇಲೆ ನಂಬಿಕೆ ಇಟ್ಟ ವರ್ಗವೊಂದಾದರೆ ಟೀಕೆ ಮಾಡುವ ವರ್ಗವೂ ಇದೆ. ಆ ಟೀಕೆಗಳಿಗೆ ಸೊಪ್ಪು ಹಾಕದೇ ನಾಡಿನ ಜನತೆಯ ನೀರಿಕ್ಷೆಗೆ ತಕ್ಕಂತೆ ಕೆಲಸ ಮಾಡುತ್ತಿದ್ದೇನೆ. ರಾಜ್ಯಕ್ಕೆ ಆಗಬೇಕಾದ ಕೆಲಸಗಳಿಗೆ ನಾನು ತಕ್ಕ ನ್ಯಾಯ ಒದಗಿಸುತ್ತೇನೆ ಎಂದು ಕೇಂದ್ರದ ಉಕ್ಕು ಹಾಗೂ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಜನರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡುತ್ತಿದೆಯೋ ಇಲ್ಲವೋ ಎಂಬುದು ಜನರಿಗೆ ಗೊತ್ತಿದೆ. ಗೃಹಲಕ್ಷ್ಮಿ ಹಣ ಕೊಡುತ್ತಿದ್ದಾರೋ ಇಲ್ಲವೋ ಎಂಬುದು ಗೊತ್ತಿಲ್ಲ. ಸರ್ಕಾರ ಅಧಿಕಾರಕ್ಕೆ ಬಂದ ನಂತರ ರಾಜ್ಯದಲ್ಲಿ ರೈತರ ಆತ್ಮಹತ್ಯೆ ನಡೆದಿದೆ. ಅದರ ಬಗ್ಗೆ ಯಾರು ಗಮನ ಹರಿಸುತ್ತಿಲ್ಲ. ಈಗಾಗಲೇ 2800 ರೈತರ ಆತ್ಮಹತ್ಯೆಯಾಗಿದ್ದು, ರಾಜ್ಯ ಸರ್ಕಾರ ಗ್ಯಾರಂಟಿ ಕೊಟ್ಟು ರೈತರ ಪರಿಸ್ಥಿತಿ ಎಲ್ಲಿಗೆ ತಂದಿಟ್ಟಿದೆ ಎಂದು ಕಿಡಿಕಾರಿದರು.

ಸಹಕಾರಿ ಬ್ಯಾಂಕುಗಳಲ್ಲಿ 32 ಲಕ್ಷ ಕುಟುಂಬಗಳಿಗೆ 24 ಸಾವಿರ ಕೋಟಿ ಸಾಲ ಕೊಡುತ್ತೇವೆ ಎಂದಿದ್ದ ಸರ್ಕಾರ ಈವರೆಗೂ ಕೊಟ್ಟಿಲ್ಲ. ಅಲ್ಲದೇ ಹೊಸದಾಗಿ ಸಾಲ ಕೊಟ್ಟಿಲ್ಲ. ಹೀಗಾದರೇ ರೈತರ ಪರಿಸ್ಥಿತಿ ಏನಾಗಬೇಕು ಎಂಬುದು ನನ್ನ ಚಿಂತನೆಯಾಗಿದೆ. ಗೃಹಲಕ್ಷ್ಮಿ ಹಣ ಒಟ್ಟಿಗೆ ಚುನಾವಣೆ ಬಂದಾಗ ಕೊಡುತ್ತಾರೆ. ಒಟ್ಟಿಗೆ ಕೊಟ್ಟಾಗ ಮಾತ್ರ ಜನ ಈ ಸರ್ಕಾರವನ್ನು ನೆನಪು ಇಟ್ಟುಕೊಳ್ಳುತ್ತಾರೆ. ಲೂಟಿ ಮಾಡುವುದೇ ಅಭಿವೃದ್ಧಿ ಅಂದು ಸರ್ಕಾರ ತಿಳಿದುಕೊಂಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಭಿವೃದ್ಧಿ ಬಗ್ಗೆ ಗೃಹ ಸಚಿವ ಪರಮೇಶ್ವರ್ ಲಘುವಾಗಿ ಮಾತನಾಡಿರುವ ಬಗ್ಗೆ ಪ್ರತಿಕ್ರಿಯಿಸಿ, ಸರ್ಕಾರಕ್ಕೆ ಅಭಿವೃದ್ಧಿ ಅಂದರೆ ಏನು ಎಂದು ಗೊತ್ತಿಲ್ಲ. ಇವರಿಗೆ ನಾಡಿನ ಜನತೆಯ ತೆರಿಗೆ ಹಣ ಮಾತ್ರ ಗೊತ್ತು. ಲೂಟಿ ಮಾಡುವುದೇ ಅಭಿವೃದ್ಧಿ ಎಂದು ತಿಳಿದುಕೊಂಡಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದ ಅವರು, ದ್ವೇಷ ಭಾಷಣ ವಿಧೇಯಕ ಮಂಡನೆ ವಿಚಾರವನ್ನು, ರಾಜ್ಯ ಸರ್ಕಾರ ಕೈಬಿಟ್ಟು ವೋಟ್ ಚೋರಿ ಪ್ರತಿಭಟನೆ ವೇಳೆ ಪ್ರಧಾನ ಮಂತ್ರಿಗಳ ಸಾವಿನ ಬಗ್ಗೆ ಕಾಂಗ್ರೆಸ್ ಕಾರ್ಯಕರ್ತರು ಕೂಗಿರುವ ಘೋಷಣೆ ಬಗ್ಗೆ ಮೊದಲು ಕ್ರಮ ಕೈಗೊಳ್ಳಿ ಎಂದು ಆಗ್ರಹಿಸಿದರು.

ಇಂದು ಮಳವಳ್ಳಿಯಲ್ಲಿ ಸುತ್ತೂರು ಶ್ರೀಗಳ ಕಾರ್ಯಕ್ರಮ ಇದೆ. ರಾಷ್ಟ್ರಪತಿಗಳು ಬರುತ್ತಿರುವುದರಿಂದ ನಾನು ಭಾಗಿಯಾಗುವ ದಿನವೇ ನನ್ನ ಹುಟ್ಟುಹಬ್ಬ ಬಂದಿದೆ. ಮಂಡ್ಯದಲ್ಲಿ ನಮ್ಮ ಪಕ್ಷದ ಕಾರ್ಯಕರ್ತರು ಹುಟ್ಟಿದ ದಿನ ಶುಭ ಕೋರಿದ್ದಾರೆ. ರಸ್ತೆಯುದ್ದಕ್ಕೂ ಅದ್ದೂರಿಯಾಗಿ ಸ್ವಾಗತಿಸಿ ಶುಭ ಕೋರಿದ್ದು, ನಾನು ಅವರಿಗೆ ಚಿರಋಣಿಯಾಗಿರುತ್ತೇನೆ ಎಂದರು.

ಮೂರನೇ ಪುಟದಿಂದ

ವರ್ಣರಂಜಿತ ಮಾಗಿ ಉತ್ಸವ

ಹಡಗು, ಫೈಟರ್ ಜೆಟ್ ಮಾದರಿ, ಎರಡು ನವಿಲು ಮಾದರಿ, ಚೋಟಾ ಬೀಮ್, ಕಾಳಿಂಗ ಮರ್ಧನ, ಸೈಕಲ್ ತುಳಿಯುತ್ತಿರುವ ಅಳಿಲು, ಹಂಸ, ಕೊಕ್ಕರೆ, ಪಕ್ಷಿ, ದುಂಬಿ, ಕ್ಯಾರೆಟ್ ಹಿಡಿದಿರುವ ಮೊಲ, ಮಾವಿನ ಹಣ್ಣು ಕುಡಿ ಸೇರಿದಂತೆ ಇನ್ನಿತರ ಆಕೃತಿಗಳನ್ನು ಹೂವುಗಳಿಂದ ರಚಿಸಿ ಪ್ರದರ್ಶಿಸಲಾಗುತ್ತಿದೆ.

ಪ್ರತೀ ವರ್ಷದಂತೆ ಈ ಬಾರಿಯೂ ಫಲ-ಪುಷ್ಪ ಪ್ರದರ್ಶನ ವೀಕ್ಷಿಸಲು ಬರುವ ಮೊದಲ 50 ಮಂದಿ ಸಾರ್ವಜನಿಕರಿಗೆ ಅಲೋವೇರ, ತುಳಸಿ, ಮಲ್ಲಿಗೆ, ವೀಳ್ಯದೆಲೆ, ಚಕ್ರಮುನಿ ಗಿಡಗಳನ್ನು ಉಚಿತವಾಗಿ ವಿತರಿಸಲಾಗುತ್ತದೆ. ಪ್ರದರ್ಶನದಲ್ಲಿ ಜಯಚಾಮರಾಜ ಒಡೆಯರ್ ರಚಿಸಿರುವ ಕೀರ್ತನೆಗಳನ್ನು ಬಿತ್ತರಿಸುವ ವ್ಯವಸ್ಥೆ ಮಾಡಲಾಗುತ್ತದೆ. ಇದರೊಂದಿಗೆ ದಸರಾ ಮಹೋತ್ಸವ ಅಂದು-ಇಂದು ಛಾಯಾಚಿತ್ರ ಪ್ರದರ್ಶನ, ಒಡೆಯರ್ ಸಂಸ್ಥಾನದ ಆಡಳಿತದ ಚಿತ್ರಗಳು, ದಸರಾ ಮಹೋತ್ಸವದ ಚಿತ್ರಗಳು ಮತ್ತು ವೀಡಿಯೋ ಪ್ರದರ್ಶನವನ್ನು ಫಲ-ಪುಷ್ಪ ಪ್ರದರ್ಶನಕ್ಕೆ ಬಂದ ಪ್ರವಾಸಿಗರು ಮತ್ತು ಸಾರ್ವಜನಿಕರು ವೀಕ್ಷಿಸಬಹುದಾಗಿದೆ.

ಗೊಂಬೆ ಪ್ರದರ್ಶನ: ಇದೇ ವೇಳೆ 5 ಬ್ಲಾಕ್‌ಗಳಲ್ಲಿ ಗೊಂಬೆ ಪ್ರದರ್ಶನ ಏರ್ಪಡಿಸಲಾಗಿದೆ. ಗೀತಾ ಶ್ರೀಹರಿ ಅವರಿಂದ ಹರ ಹರ ಮಹದೇವ, ಮೀನಾಕ್ಷಿ ಶೈಲ ಕುಮಾರ್ ಅವರಿಂದ ಸಂಪೂರ್ಣ ರಾಮಾಯಣ, ಹೇಮಲತಾ ಕುಮಾರಸ್ವಾಮಿ ಅವರಿಂದ ಶಿವ ಕೇಶವಾಮೃತ ಸಾರ, ಅನ್ನಪೂರ್ಣ ಗೋಪಾಲಕೃಷ್ಣ ಅವರಿಂದ ದೇವನೊಬ್ಬ-ನಾಮ ಹಲವು, ಸರ್ವಮಂಗಳಾ ಕೃಷ್ಣಭಟ್ ಅವರಿಂದ ತಿರುಪತಿ ಶ್ರೀನಿವಾಸ ವೈಭವ ಗೊಂಬೆ ಪ್ರದರ್ಶನವನ್ನು ಏರ್ಪಡಿಸಲಾಗಿದೆ.

ಸಾಂಸ್ಕೃತಿಕ ಕಾರ್ಯಕ್ರಮ

ಡಿ.21ರಂದು ಸಂಜೆ 4.30ರಿಂದ 5.15ರವರೆಗೆ ಸಂಪತ್ ತಂಡದಿಂದ ವಾದ್ಯ ಸಂಗೀತ. 5.20ರಿಂದ 5.50ರವರೆಗೆ ಯೋಗಶ್ರೀ ತಂಡದಿಂದ ಭಕ್ತಿ ಗೀತೆಗಳು, 6 ರಿಂದ 7 ಗಂಟೆವರೆಗೆ ಲಾವಣ್ಯ ತಂಡದಿಂದ ಸುಗಮ ಸಂಗೀತ, 7.15ರಿಂದ 7.30ರವರೆಗೆ ಹೆಚ್.ಎಸ್.ಸ್ನೇಹ ಅವರ ತಂಡದಿಂದ ನಾಡಗೀತೆ, ಮೈಸೂರು ಸಂಸ್ಥಾನದ ನಾಡಗೀತೆ ಕಾಯೌ ಶ್ರೀ ಗೌರೀ ಗೀತ ಗಾಯನ. ಸಂಜೆ 7.30ರಿಂದ 9.30ರವರೆಗೆ ಪಂಚಭಾಷಾ ಸಂಗೀತ ನಿರ್ದೇಶಕ ಮಣಿಕಾಂತ್ ಕದ್ರಿ, ವಿದುಷಿ ಹಂಸಿಕಾ ಅಯ್ಯರ್ ಅವರಿಂದ ಸಂಗೀತ ಸಂಭ್ರಮ.

ಡಿ.22ರಂದು ಸಂಜೆ 5ರಿಂದ 5.30ರವರೆಗೆ ಮೈಸೂರಿನ ಭಾರತೀಯ ವಿದ್ಯಾಭವನದ ವಿದ್ಯಾರ್ಥಿಗಳಿಂದ ನೃತ್ಯ ನಾಟಕ, 5.45ರಿಂದ 6.30 ಋತ್ವಿಕ್ ಸಿ.ರಾಜ್ ತಂಡದಿಂದ ಸುಗಮ ಸಂಗೀತ, 6.45ರಿಂದ 8 ಗಂಟೆವರೆಗೆ ಮನೋ ಮ್ಯೂಸಿಕ್ ಲೈನ್ಸ್ ತಂಡದಿಂದ ಕವಿ, ಕಾವ್ಯ ಸಂಗೀತ ಸಂಗಮ, ರಾತ್ರಿ 8.15ರಿಂದ 9.30ರವರೆಗೆ ಹೆಚ್.ಎಲ್. ಶಿವಶಂಕರ್ ಸ್ವಾಮಿ ತಂಡದಿಂದ ರಾಗ ರಿದಂ ಫ್ಯೂಷನ್.

ಡಿ.23ರಂದು ಸಂಜೆ 5ರಿಂದ 5.30ರವರೆಗೆ ಆಕಾಶವಾಣಿ ಕಲಾವಿದೆ ಭಾಗ್ಯಶ್ರೀ ಗೌಡ ಅವರಿಂದ ಸುಗಮ ಸಂಗೀತ, ಸಂಜೆ 5.45ರಿಂದ 6.30ರವರೆಗೆ ಮಧುರ ಗಾನ ಕಲಾವೃಂದ ರಮೇಶ್ ಕುಮಾರ್ ತಂಡದಿಂದ ಸಂಗೀತ ರಸ ಸಂಜೆ, ಸಂಜೆ 6.45ರಿಂದ 7.45 ಕಲಾಸ್ಪರ್ಶ ಪ್ರದರ್ಶಕ ಕಲೆಗಳ ಕೇಂದ್ರ ಟ್ರಸ್ಟ್ ಡಾ. ಸ್ಪರ್ಷ ಶೆಣೈ ತಂಡದಿಂತ ಭರತನಾಟ್ಯ, ರಾತ್ರಿ 8ರಿಂದ 9.30ರವರೆಗೆ ಜಿ ಕನ್ನಡ ರಿಯಾಲಿಟಿ ಶೋ ಗಾಯಕರಿಂದ ಸಂಗೀತ ಯಾನ.

ಡಿ.24ರಂದು ಸಂಜೆ 5ರಿಂದ 5.30ರವರೆಗೆ ಸರಸ್ವತಿ ವಾದ್ಯ ವೃಂದ ಡಾ. ಹನುಮಂತ ರಾಜು ತಂಡದಿಂದ ಫ್ಯೂಷನ್ ಸಂಗೀತ, ಸಂಜೆ 5.45ರಿಂದ 6.30ರವರೆಗೆ ದಿವ್ಯಾ ಮತ್ತು ತಂಡದಿಂದ ಭಾವ ಸಂಗೀತ, ಸಂಜೆ 6.45ರಿಂದ 7.45ರವರೆಗೆ ಡಾ. ರಾ.ಸನಂದಕುಮಾರ್ ಡಾ. ಅಂಬಿಕಾ ಶಾಸ್ತ್ರಿ ಅವರಿಂದ ಸಂಗೀತ ಗೋಷ್ಠಿ, ರಾತ್ರಿ 8ರಿಂದ 9.30ರವರೆಗೆ ಹಿನ್ನೆಲೆ ಗಾಯಕ ಅಜಯ್ ವಾರಿಯರ್ ತಂಡದಿಂದ ಸ್ವರ ವೈಭವ.

ಡಿ.25ರಂದು ಸಂಜೆ 5ರಿಂದ 5.30ರವರೆಗೆ ಪೂರ್ಣಿಮಾ ಹರೀಶ್, ವಿದ್ಯಾ, ಹೆಚ್.ಶ್ರೀವತ್ಸ ಅವರಿಂದ ಲಘು ಸಂಗೀತ, ಸಂಜೆ 5.30ರಿಂದ 6.10ರವರೆಗೆ ಆರ್.ಪ್ರೇಕ್ಷಾ ತಂಡದಿಂದ ನೃತ್ಯ, 6.15ರಿಂದ 6.45ರವರೆಗೆ ಮೈಸೂರು ಇಸ್ಕಾನ್ ತಂಡದಿಂದ ಹರಿನಾಮ ಸಂಕೀರ್ತನ, ಸಂಜೆ 6.50ರಿಂದ 7.50ರವರೆಗೆ ಪಿ.ಆಕಾಶ್ ತಂಡದಿಂದ ಫಲ-ಪುಷ್ಪ ಗೀತ ಗಾನ, ರಾತ್ರಿ 8ರಿಂದ 9.30ರವರೆಗೆ ಹಿನ್ನೆಲೆ ಗಾಯಕ ವಾಸುಕಿ ವೈಭವ್ ಮತ್ತು ತಂಡದಿಂದ ಸಂಗೀತ ಗಾನಾಮೃತ ಜರುಗಲಿದೆ.

ಅಧಿಕಾರಿಗಳಿಂದ ಜಂಟಿ ಸ್ಥಳ ಪರಿಶೀಲನೆ

ಮೈಸೂರು-ಕೊಡಗು ಕ್ಷೇತ್ರದ ಹಾಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಸಹ ಮೈಸೂರು ವಿಮಾನ ನಿಲ್ದಾಣದ ರನ್‌ವೇ ವಿಸ್ತರಣೆ ಮಾಡುವ ಮೂಲಕ ಮೇಲ್ದರ್ಜೆಗೇರಿಸಲು ಪ್ರಕ್ರಿಯೆಯನ್ನು ತೀವ್ರಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಮೈಸೂರು ವಿಮಾನ ನಿಲ್ದಾಣದ ನಿದೇಶಕಿ ಪಿ.ವಿ. ಉಷಾಕುಮಾರಿ, ಕೆಎಸ್‌ಎಸ್‌ಐಡಿಸಿ ಸಹಾಯಕ ಪ್ರಧಾನ ವ್ಯವಸ್ಥಾಪಕ ಹಾರತಿಗೌಡ, ಕೆಐಎಡಿಬಿ ಅಸ್ಟಿಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಅರುಣ್‌ಕುಮಾರ್, ಕೆಪಿಟಿಸಿಎಲ್ ಅಸ್ಟಿಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಪ್ರದೀಪ್, ಸಿಎನ್‌ಎನ್‌ಎಲ್ ಅಸ್ಟಿಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಶ್ವೇತಾ, ವಿಮಾನ ನಿಲ್ದಾಣದ ಸೀನಿಯರ್ ಮ್ಯಾನೇಜರ್‌ಗಳಾದ ದಾಮುಡಿ (ಲ್ಯಾಂಡ್ ವಿಭಾಗ), ಅಭಿಷೇಕ್ ಜೋಷಿ (ಸಿಎನ್‌ಎಸ್ ವಿಭಾಗ) ಹಾಗೂ ಇತರರು ಜಂಟಿ ಸ್ಥಳ ಪರಿಶೀಲನೆಯಲ್ಲಿ ಭಾಗವಹಿಸಿದ್ದಾರೆ.

ದತ್ತು ಸ್ವೀಕಾರ ಅಭಿಯಾನಕ್ಕೆ ಚಾಲನೆ



ದತ್ತು ಸ್ವೀಕಾರ ಅಭಿಯಾನದಲ್ಲಿ ಪಾಲ್ಗೊಂಡಿರುವ ಪಿಎಫ್‌ಎ ಸ್ವಯಂ ಸೇವಕರಾದ ಜರ್ಮನಿಯ ಫೆನ್ಯಾ ಮತ್ತು ಎರಿನಾ.



ದತ್ತು ಪಡೆದ ಎರಡು ನಾಯಿಮರಿಗಳೊಂದಿಗೆ ಮೈಸೂರು ಮಹಾನಗರ ಪಾಲಿಕೆಯ ವಲಯ 6ರ ವಲಯ ಆಯುಕ್ತರಾದ ಎಂ.ಎಸ್.ಪ್ರತಿಭಾ.

ವಿದೇಶಿ ತಳಿ ಶ್ವಾನಗಳನ್ನು ಸಾವಿರಾರು ರೂ. ನೀಡಿ ಖರೀದಿಸಿ ಸಾಕುವವರು ಅವುಗಳ ನಿರ್ವಹಣೆಗೆ ಹೆಚ್ಚು ಹಣ ವ್ಯಯ ಮಾಡಬೇಕಾಗುತ್ತದೆ. ಆದರೆ, ಬೀದಿ ನಾಯಿಗಳನ್ನು ದತ್ತು ಪಡೆದು ಅವುಗಳನ್ನು ಸಾಕುವುದರಿಂದ ನಿರ್ವಹಣಾ ವೆಚ್ಚ ಕಡಿಮೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರು ಬೀದಿ ನಾಯಿಗಳನ್ನು ದತ್ತು ಪಡೆದು, ಸಾಕಬೇಕು. ಅದಕ್ಕಾಗಿ ಮೈಸೂರು ಮಹಾನಗರ ಪಾಲಿಕೆ ಅಭಿಯಾನ ಆರಂಭಿಸಿ, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ಜನ ದತ್ತು ಸ್ವೀಕಾರ ಅಭಿಯಾನದಲ್ಲಿ ಪಾಲ್ಗೊಳ್ಳಬೇಕು ಎಂದು ಮನವಿ ಮಾಡಿದರು.

ಶ್ವಾನಗಳ ದತ್ತು ಸ್ವೀಕಾರ ಪ್ರಕ್ರಿಯೆಯಲ್ಲಿ ಎರಡು ಬಗೆಯ ದತ್ತು ಸ್ವೀಕಾರ ಮಾಡುವುದಕ್ಕೆ ಅವಕಾಶ ಕಲ್ಪಿಸಲಾಗಿದೆ. ಸಕ್ರಿಯ ದತ್ತು ಸ್ವೀಕಾರ (Active Adoption) ಮತ್ತು ನಿಷ್ಕ್ರಿಯ ದತ್ತು ಸ್ವೀಕಾರ (Passive Adoption) ವಿಧಾನದಲ್ಲಿ ದತ್ತು ಸ್ವೀಕರಿಸಬಹುದಾಗಿದೆ. ಸಕ್ರಿಯ ದತ್ತು ಸ್ವೀಕಾರ ವಿಧಾನದಲ್ಲಿ ಸಾರ್ವಜನಿಕರು ಆರೋಗ್ಯವಂತ, ಲಸಿಕೆ ಹಾಕಿರುವ ನಾಯಿ ಮರಿಯನ್ನು ದತ್ತು ಪಡೆದು ಮನೆಗೆ ಕೊಂಡೊಯ್ದು ಸಾಕಬಹುದಾಗಿದೆ. ನಿಷ್ಕ್ರಿಯ ದತ್ತು ಸ್ವೀಕಾರ ಅಭಿಯಾನದಲ್ಲಿ ವಿವಿಧ ಬಡಾವಣೆಗಳಲ್ಲಿರುವ ದೊಡ್ಡ ಶ್ವಾನಗಳನ್ನು ಹಿಡಿದು ಅವುಗಳಿಗೆ ಸಂತಾನ ಹರಣ ಶಸ್ತ್ರಚಿಕಿತ್ಸೆ ಹಾಗೂ ಲಸಿಕೆ ಹಾಕುವುದಕ್ಕೆ ವೆಚ್ಚ ಭರಿಸುವ ಮೂಲಕವೂ ದತ್ತು ಪಡೆಯಬಹುದಾಗಿದೆ. ಶ್ವಾನಗಳಿಗೆ ಪ್ರೀತಿ ತೋರಿಸಿದರೆ, ಅವುಗಳನ್ನು ನಿಮ್ಮನ್ನು ರಕ್ಷಣೆ ಮಾಡುತ್ತವೆ. ಆ ನಿಟ್ಟಿನಲ್ಲಿ ಸಾರ್ವಜನಿಕರು, ಪ್ರಾಣಿ ಪ್ರಿಯರು ಹೆಚ್ಚಿನ ಸಂಖ್ಯೆಯಲ್ಲಿ ಶ್ವಾನ ದತ್ತು ಪಡೆದು ಸಾಕಬೇಕು ಎಂದು ಸಲಹೆ ನೀಡಿದರು.

ವಿಶ್ವಾಸಾರ್ಹ, ನಂಬಿಕಸ್ಥ ಶ್ವಾನ: ಪಶುಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಪಿ.ಪೂರ್ಣಾನಂದ ಮಾತನಾಡಿ, ದೇಸಿ ತಳಿ(ಬೀದಿ ನಾಯಿ) ಶ್ವಾನಗಳು ಅತ್ಯಂತ ವಿಶ್ವಾಸಾರ್ಹ ಹಾಗೂ ನಂಬಿಕಸ್ಥ ಶ್ವಾನ ಎಂದು ದೃಢಪಟ್ಟಿದೆ.

ರಾಯನಕೆರೆ ಪುನರ್ವಸತಿ ಕೇಂದ್ರ ಶೀಘ್ರ ಆರಂಭ

ರಾಯನಕೆರೆಯಲ್ಲಿ ನಿರ್ಮಿಸಿರುವ ಶ್ವಾನಗಳ ಪುನರ್ವಸತಿ ಕೇಂದ್ರದಲ್ಲಿ ಆಪರೇಷನ್ ಥಿಯೇಟರ್ ನಿರ್ಮಾಣ ಮಾಡಲಾಗಿದ್ದು, ಈ ತಿಂಗಳ ಅಂತ್ಯದ ವೇಳೆ ಆಪರೇಷನ್ ಮಾಡುವ ಯಂತ್ರ ತರಲಾಗುವುದು. ಮುಂದಿನ ತಿಂಗಳು ಆಪರೇಷನ್ ಥಿಯೇಟರ್ ಆರಂಭಗೊಂಡರೆ ದಿನಕ್ಕೆ 10 ಶ್ವಾನಗಳಿಗೆ ಆಪರೇಷನ್ ಮಾಡಬಹುದಾಗಿದೆ. ಅಲ್ಲದೆ, ಪುನರ್ವಸತಿ ಕೇಂದ್ರದಲ್ಲಿ ಮೊದಲ ಹಂತದಲ್ಲಿ 500ಕ್ಕೂ ಹೆಚ್ಚು ಶ್ವಾನಗಳಿಗೆ ಪುನರ್ವಸತಿ ಕಲ್ಪಿಸಬಹುದಾಗಿದೆ. ಆ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. - ಶೇಖ್ ತನ್ವೀರ್ ಆಸಿಫ್, ಮೈಸೂರು ಮಹಾನಗರ ಪಾಲಿಕೆಯ ಆಯುಕ್ತ

ಮನೆಯಲ್ಲಿ ನಾಯಿಯೊಂದು ಸಾಕಿದ್ದರೆ, ಆ ಮನೆಯಲ್ಲಿ ಆರೋಗ್ಯಕರ ವಾತಾವರಣ ಇರುತ್ತದೆ ಎಂದು ವೈಜ್ಞಾನಿಕವಾಗಿ ಸಾಬೀತಾಗಿದೆ. ಶ್ವಾನವಿದ್ದರೆ ಕುಟುಂಬದ ಸದಸ್ಯರೆಲ್ಲ ಆರೋಗ್ಯವಾಗಿ ಸಂತೋಷದಿಂದ ಇರಲು ಶ್ವಾನಗಳು ಕಾರಣವಾಗುತ್ತವೆ. ಆ ನಿಟ್ಟಿನಲ್ಲಿ ದೇಸಿ ತಳಿ ಶ್ವಾನ ದತ್ತು ಪಡೆದು ಸಾಕುವಂತೆ ಮನವಿ ಮಾಡಿದರು.

ಬೀದಿ ನಾಯಿಗಳಿಗೆ ಹುಟ್ಟುತ್ತಲೇ ಚಳಿ, ಮಳೆ, ಗಾಳಿ, ಬೇಸಿಗೆ ವಾತಾವರಣಕ್ಕೆ ಹೊಂದಿಕೊಳ್ಳುವ ಗುಣ ಇರುತ್ತವೆ. ಮನೆಯಲ್ಲಿ ಅವುಗಳಿಗೆ ವಿಶೇಷ ಸವಲತ್ತು ನೀಡದಿದ್ದರೂ, ಅವುಗಳು ಪ್ರೀತಿಯಿಂದ ಮನೆಯ ಸದಸ್ಯರಂತೆ ಜೀವಿಸುತ್ತವೆ. ಮೈಸೂರು ನಗರ ವ್ಯಾಪ್ತಿಯಲ್ಲಿ 10 ಲಕ್ಷ ಜನರಿದ್ದು, ಅಂದಾಜು 50 ಸಾವಿರ ಬೀದಿ ನಾಯಿಗಳಿವೆ. ಈ ಹಿನ್ನೆಲೆಯಲ್ಲಿ ಬೀದಿ ನಾಯಿಗಳನ್ನು ದತ್ತು ಪಡೆದು ಸಾಕಬೇಕು. ಆಗ ಮಾತ್ರ ಅವುಗಳಿಗೂ ಸೂಕ್ತ ಸೂರಿನ ವ್ಯವಸ್ಥೆ ದೊರೆತಂತಾಗುತ್ತದೆ. ಬೀದಿಯಲ್ಲಿ ನಾಯಿ ಹಾವಳಿ ತಪ್ಪುವಂತಾಗುತ್ತವೆ ಎಂದು ಅಭಿಪ್ರಾಯಪಟ್ಟರು.

ದತ್ತು ಸ್ವೀಕಾರ ಕಾರ್ಯಕ್ರಮದಲ್ಲಿ ಪಶುಸಂಗೋಪನಾ ಇಲಾಖೆಯ ನಿವೃತ್ತ ಉಪ ನಿರ್ದೇಶಕ ಡಾ. ತಿರುಮಲೇಶ್, ನಿವೃತ್ತ ಪಶುವೈದ್ಯರಾದ ಡಾ. ಸುರೇಶ್, ಪೀಪಲ್ ಫಾರ್ ಅನಿಮಲ್ಸ್ (ಪಿಎಫ್‌ಎ) ಸಂಸ್ಥೆಯ ಮುಖ್ಯಸ್ಥರಾದ ಸವಿತಾ ನಾಗಭೂಷಣ್, ಪಿಎಫ್‌ಎ ಸ್ವಯಂ ಸೇವಕರಾದ ಜರ್ಮನಿಯ ಫೆನ್ಯಾ ಮತ್ತು ಎರಿನಾ, ಪಾಲಿಕೆ ಆರೋಗ್ಯಾಧಿಕಾರಿ ಡಾ.ಎನ್.ಪಿ. ವೆಂಕಟೇಶ್, ಪಾಲಿಕೆಯ ಪರಿಸರ ವಿಭಾಗದ ಅಧಿಕಾರಿಗಳು ಉಪಸ್ಥಿತರಿದ್ದರು.

ಸುತ್ತೂರು ಮಠದಿಂದ ನಿರಂತರ ಶ್ರಮ

ವೇದಿಕೆಯಲ್ಲಿ ಸುತ್ತೂರು ಶ್ರೀಗಳಾದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕನಕಪುರದ ದೇಗುಲ ಮಠದ ಕಿರಿಯ ಸ್ವಾಮೀಜಿ ಚನ್ನಬಸವ ಸ್ವಾಮೀಜಿ, ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕ ಪಿ.ಎಂ.ನರೇಂದ್ರಸ್ವಾಮಿ ಉಪಸ್ಥಿತರಿದ್ದರು.

ಹೆಲಿಪ್ಯಾಡ್‌ನಲ್ಲಿ ಸ್ವಾಗತ: ಸುತ್ತೂರಿನ ಆದಿ ಜಗದ್ಗುರು ಶ್ರೀಶಿವರಾತ್ರಿ ಶಿವಯೋಗಿಗಳ 1066ನೇ ಜಯಂತಿ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲು ಮಂಡ್ಯ ಜಿಲ್ಲೆಯ ಮಳವಳ್ಳಿ ಪಟ್ಟಣಕ್ಕೆ ಆಗಮಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಹೆಲಿಪ್ಯಾಡ್‌ನಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಕೇಂದ್ರ ಸರ್ಕಾರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಹೂ ಗುಚ್ಛ ನೀಡುವ ಮೂಲಕ ಘನತೆವೆತ್ತ ರಾಷ್ಟ್ರಪತಿಗಳನ್ನು ಸ್ವಾಗತಿಸಿದರು. ಬಳಿಕ ಕಾರ್ಯಕ್ರಮ ಮುಗಿದ ನಂತರವೂ ಹೆಲಿಪ್ಯಾಡ್‌ಗೆ ಹೋಗಿ ಎಲ್ಲಾ ಗಣ್ಯರು ಬೀಳ್ಕೊಟ್ಟರು.

ಮಹಿಳೆ ಮೇಲೆ ಹಲ್ಲೆ ನಡೆಸಿ, ಕೊಠಡಿಗೆ ಬೆಂಕಿ

ನಾಗರತ್ನ ಪತಿ ಮಹೇಶ್ ಅವರು ಪಾನಿಪುರಿ ವ್ಯಾಪಾರಿಯಾಗಿದ್ದು, ಕೆಲಸದ ಸ್ಥಳದಲ್ಲಿದ್ದ ಮಹೇಶ್ ಸಹ ಅಷ್ಟರಲ್ಲಿ ವಿಷಯ ತಿಳಿದು ಸ್ಥಳಕ್ಕೆ ಧಾವಿಸಿದ್ದರು. ಕೂಡಲೇ ನಾಗರತ್ನ ಅವರನ್ನು ಆಸ್ಪತ್ರೆ ದಾಖಲಿಸಲಾಯಿತು. ರಾತ್ರಿ 7 ಗಂಟೆ ಸುಮಾರಿಯಲ್ಲಿ ಈ ಘಟನೆ ನಡೆದಿದ್ದು, ಬನ್ನಿಮಂಟಪ ಅಗ್ನಿಶಾಮಕ ಠಾಣಾ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ, ಬೆಂಕಿ ನಂದಿಸಿದರು. ಅಲ್ಲದೆ, ಮೇಟಗಳ್ಳಿ ಪೊಲೀಸರು ಸ್ಥಳಕ್ಕೆ ಧಾವಿಸಿ ಪ್ರಾಥಮಿಕ ಹಂತದ ವಿಚಾರಣೆ ನಡೆಸಿದರಲ್ಲದೆ, ಮುಂದಿನ ಕ್ರಮ ವಹಿಸಿದ್ದಾರೆ.

ಮಹಿಳೆ ಅಪಾಯದಿಂದ ಪಾರು: ಸದರಿ ಮಹಿಳೆಯು ಅಪಾಯದಿಂದ ಪಾರಾಗಿದ್ದಾರೆ. ಹಲ್ಲೆ ನಡೆಸಿ ಬೆಂಕಿ ಹಾಕಿದವರು ಯಾರೆಂಬುದು ಇನ್ನೂ ತಿಳಿದುಬಂದಿಲ್ಲ. ಆಕೆ ಒಬ್ಬಳೇ ಇದ್ದ ಸಂದರ್ಭದಲ್ಲಿ ಯಾರೋ ಇಬ್ಬರು ಯುವಕರು ಬಂದು ಹಲ್ಲೆ ನಡೆಸಿ ಮನೆಯ ಕೊಠಡಿಯೊಂದಕ್ಕೆ ಬೆಂಕಿ ಹಾಕಿ ಪರಾರಿಯಾಗಿದ್ದಾರೆ ಎಂಬುದು ವಿಚಾರಣೆ ವೇಳೆ ತಿಳಿದುಬಂದಿದೆ. ಮಹಿಳೆಯ ತಲೆಗೆ ಹೊಡೆದಿದ್ದು, ಯಾವ ಮಾರಾಕಾಸ್ತ್ರದಲ್ಲಿ ಹಲ್ಲೆ ಮಾಡಲಾಗಿದೆ ಎಂಬುದು ಇನ್ನು ತಿಳಿದುಬಂದಿಲ್ಲ. ಆ ಮಹಿಳೆ ಇನ್ನು ಗಾಬರಿಯಲ್ಲಿದ್ದು, ಅವರು ಚೇತರಿಸಿಕೊಂಡ ಬಳಿಕ ಅವರಿಂದ ಘಟನೆ ಬಗ್ಗೆ ಮಾಹಿತಿ ಪಡೆಯಬೇಕಿದೆ ಎಂದು ಮೇಟಗಳ್ಳಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಸ್ಟೇಡಿಯಂಗೆ ಸರ್ಕಾರದೊಂದಿಗೆ ಸಮನ್ವಯತೆ

ಕ್ರಿಕೆಟ್ ಮಾತ್ರವಲ್ಲದೆ ಎಲ್ಲಾ ಬಗೆಯ ಕ್ರೀಡೆಗೂ ಆದ್ಯತೆ ನೀಡುವ ನಿಟ್ಟಿನಲ್ಲಿ ಹೈದರಾಬಾದ್ ಮಾದರಿಯಲ್ಲಿ ಕ್ರೀಡಾ ಸಂಕೀರ್ಣ ನಿರ್ಮಾಣ ಮಾಡುವ ಇಚ್ಛೆಯನ್ನು ಸರ್ಕಾರ ಹೊಂದಿರುವ ಮಾಹಿತಿ ಇದೆ ಎಂದು ತಿಳಿಸಿದರು.

ವಿರಾಟ್ ಕೊಹ್ಲಿ ಕಣಕ್ಕೆ: ಡಿ.24 ರಿಂದ ವಿಜಯ್ ಹಜಾರೆ ಟ್ರೋಫಿ ಏಕದಿನ ಪಂದ್ಯಗಳು ಆರಂಭವಾಗಲಿದ್ದು, ಬೆಂಗಳೂರಿನಲ್ಲಿ ನಡೆಯುವ ಪಂದ್ಯಗಳಲ್ಲಿ ದೆಹಲಿ ತಂಡದ ಪರವಾಗಿ ವಿರಾಟ್ ಕೊಹ್ಲಿ ಆಡಲಿದ್ದಾರೆ ಎನ್ನಲಾಗುತ್ತಿದೆ. ಆದ್ದರಿಂದ ಚಿನ್ನಸ್ವಾಮಿ ಸ್ಟೇಡಿಯಂ ಅನ್ನು ಮತ್ತಷ್ಟು ಸಜ್ಜುಗೊಳಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿದ್ದೇವೆ ಎಂದರು.



ಮೈಸೂರಿನ ಮಾನಸಗಂಗೋತ್ರಿಯಲ್ಲಿರುವ ಎಸ್‌ಡಿಎನ್‌ಆರ್ ಒಡೆಯರ್ ಕ್ರೀಡಾಂಗಣಕ್ಕೆ ಭೇಟಿ ನೀಡಿದ ಕೆಎಸ್‌ಸಿಎ ಅಧ್ಯಕ್ಷ ಮತ್ತು ಮಾಜಿ ಅಂತರರಾಷ್ಟ್ರೀಯ ಕ್ರಿಕೆಟಿಗ ವೆಂಕಟೇಶ್ ಪ್ರಸಾದ್ ಮಹಾರಾಷ್ಟ್ರ ಅಂಡರ್-19 ತಂಡದೊಂದಿಗೆ ಸಂವಾದ ನಡೆಸಿದರು.

ಚಿನ್ನಸ್ವಾಮಿ ಸ್ಟೇಡಿಯಂನಲ್ಲೇ ಐಪಿಎಲ್-2026ರ ಉದ್ಘಾಟನಾ ಪಂದ್ಯ

ಬೆಂಗಳೂರು ಚಿನ್ನಸ್ವಾಮಿ ಸ್ಟೇಡಿಯಂನಲ್ಲಿಯೇ 2026ರ ಐಪಿಎಲ್ ಉದ್ಘಾಟನಾ ಪಂದ್ಯ ನಡೆಯುವ ಎಲ್ಲಾ ಸಾಧ್ಯತೆಗಳಿವೆ. ಸರ್ಕಾರ ಮೌಖಿಕವಾಗಿ ಸಮ್ಮತಿ ಸೂಚಿಸಿದ್ದು, ಅಧಿಕೃತ ಆದೇಶ ಬರಬೇಕಿದೆ ಎಂದು ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ತಿಳಿಸಿದರು.

ಐಪಿಎಲ್‌ನ ಹಾಲಿ ಚಾಂಪಿಯನ್ ಆರ್‌ಸಿಬಿ ಆಗಿರುವುದುರಿಂದ ಮುಂದಿನ ಆವೃತ್ತಿಯ ಉದ್ಘಾಟನಾ ಪಂದ್ಯ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿಯೇ ನಡೆಯಬೇಕು. ಈ ಕುರಿತು ಅನುಮತಿ ನೀಡುವುದಕ್ಕಾಗಿ ಸರ್ಕಾರದ ಮಟ್ಟದಲ್ಲಿ ಚರ್ಚೆಗಳು ನಡೆಯುತ್ತಿವೆ. ಸದ್ಯದಲ್ಲಿಯೇ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರನ್ನು ನೇರವಾಗಿ ಭೇಟಿ ಮಾಡಿ ಚರ್ಚಿಸಲಾಗುವುದು. ಈಗಾಗಲೇ ಬಿಸಿಸಿಐನೊಂದಿಗೂ ಮಾತನಾಡಿದ್ದೇವೆ ಎಂದರು. 2026ನೇ ಐಪಿಎಲ್ ಉದ್ಘಾಟನಾ ಪಂದ್ಯ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯಬೇಕು. ಮತ್ತೆ ಅಂತರಾಷ್ಟ್ರೀಯ ಮಟ್ಟದ ಪಂದ್ಯಗಳು ಆಯೋಜನೆಯಾಗಬೇಕು ಎಂಬುದು ನಮ್ಮ ನಿಲುವಾಗಿದ್ದು, ಸರ್ಕಾರದ ಮಟ್ಟದಲ್ಲಿ ಮೌಖಿಕ ಒಪ್ಪಿಗೆ ದೊರೆತಿದೆ. ಆದರೆ, ಅಧಿಕೃತ ಆದೇಶಕ್ಕಾಗಿ ಕಾಯುತ್ತಿದ್ದೇವೆ ಎಂದು ಮಾಹಿತಿ ನೀಡಿದರು.

ಮನರೇಗಾ ಯೋಜನೆಯ ಹೆಸರು ಮರುನಾಮಕರಣಕ್ಕೆ ಎಎಪಿ ಖಂಡನೆ

ಮೈಸೂರು,ಡಿ.16(ಎಸ್‌ಪಿಎನ್)– ಮಹಾತ್ಮ ಗಾಂಧಿ ಹೆಸರನ್ನೇ ನಾಮಾವಶೇಷ ಮಾಡಲು ಹೊರಟಿರುವ ಕೇಂದ್ರ ಸರ್ಕಾರದ ಧೋರಣೆ ವಿರುದ್ಧ ಆಮ್ ಆದ್ಮಿ ಪಾರ್ಟಿ(ಎಎಪಿ) ಮೈಸೂರು ಘಟಕ ತೀವ್ರವಾಗಿ ಖಂಡಿಸಿದೆ.

ಗ್ರಾಮೀಣ ಪ್ರದೇಶದ ಸರ್ವತೋಮುಖ ಅಭಿವೃದ್ಧಿ ಹೊಂದಿದಲ್ಲಿ ಮಾತ್ರದೇಶ ಸಂಪೂರ್ಣ ಅಭಿವೃದ್ಧಿ ಸಾಧ್ಯ ಎಂಬ ಗಾಂಧೀಜಿ ಕನಸನ್ನು ಸಾಕಾರಗೊಳಿಸುವಲ್ಲಿ ತನ್ನದೇ ಪಾತ್ರ ವಹಿಸುತ್ತಿದ್ದ ಮನರೇಗಾ ಉದ್ಯೋಗ ಖಾತ್ರಿ ಯೋಜನೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಗಾಂಧೀಜಿ ಅವರ ಹೆಸರನ್ನು ತೆಗೆದು ಪುನರ್ ನಾಮಕರಣ ಮಾಡಲು ಹೊರಟಿರುವ ಕೇಂದ್ರ ಸರ್ಕಾರದ ಧೋರಣೆಯನ್ನು ಜಿಲ್ಲಾಧ್ಯಕ್ಷ ಎಲ್.ರಂಗಯ್ಯ ಪತ್ರಿಕಾ ಹೇಳಿಕೆ ಮೂಲಕ ಖಂಡಿಸಿದ್ದಾರೆ.

ಏಕಾಏಕಿ ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ಮಸೂದೆಯನ್ನು ಮಂಡಿಸುವ ಮೂಲಕ ಗಾಂಧೀಜಿ ಹೆಸರನ್ನು ಹೊರಗಿಟ್ಟು ವಿಬಿ–ಜಿ–ರಾಮ್‌ಜಿ ಶೀರ್ಷಿಕೆಯನ್ನಿಟ್ಟು ಜನರಲ್ಲಿ ಗೊಂದಲ ಮೂಡಿಸಿ, ಗಾಂಧೀಜಿ ಹೆಸರಿಗೆ ಮಸಿ ಬಳಿಯಲು ಹೊರಟಿದೆ ಎಂದು ತಿಳಿಸಿದ್ದಾರೆ.

ಗಾಂಧೀಜಿಯವರ ಸ್ವರಾಜ್ಯ ಕಲ್ಪನೆಗೆ, ಅವರ ತ್ಯಾಗ ಬಲಿದಾನಕ್ಕೆ, ಅವರ ವರ್ಚಸ್ಸಿಗೆ ಧಕ್ಕೆ ಉಂಟು ಮಾಡುವಂತಹ ಕೋಮುವಾದಿ ಸಂಘಟನೆಗಳ ಮೂಲ ಅಜೆಂಡಾವನ್ನು ಜಾರಿಗೊಳಿಸಲು ಪ್ರಯತ್ನಿಸುತ್ತಿರುವ ಕೇಂದ್ರ ಸರ್ಕಾರದ ಧೋರಣೆ ಬಯಲಾಗುತ್ತಿದೆ ಆರೋಪಿಸಿದ್ದಾರೆ.

ರೇಣುಕಾಸ್ವಾಮಿ ಕೊಲೆ ಪ್ರಕರಣ; ಇಂದು ವಿಚಾರಣೆ ಆರಂಭ



ಬೆಂಗಳೂರು, ಡಿ.16–ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲು ಸೇರಿರುವ ನಟ ದರ್ಶನ್, ಪವಿತ್ರಾ ಗೌಡ ಮತ್ತು ಗ್ಯಾಂಗ್ ವಿರುದ್ಧ ಬುಧವಾರದಿಂದ (ಡಿ.17) ಟ್ರಯಲ್ ಆರಂಭ ಆಗಲಿದೆ. ಸಾಕ್ಷ್ಯ ವಿಚಾರಣೆಗೆ ಪೂರ್ವ ಸಿದ್ಧತೆ ಆರಂಭಿಸಿರುವ ಪ್ರಾಸಿಕ್ಯೂಷನ್ ಇಂದು (ಡಿ.16) ಘಟನೆಯ ಸ್ಥಳ ಪರಿಶೀಲನೆ ನಡೆಸಿದೆ. ಮೊದಲ ಸಾಕ್ಷಿಗಳಾಗಿ ರೇಣುಕಾಸ್ವಾಮಿ ತಂದೆ, ತಾಯಿಗೆ ಸಮನ್ಸ್ ಜಾರಿಯಾಗಿದೆ. ಬುಧವಾರ ವಿಚಾರಣೆ ನಡೆಯಲಿದೆ.

ಸಾಕ್ಷ್ಯ ವಿಚಾರಣೆಗೂ ಮುನ್ನ ಕೊಲೆಯ ಸ್ಥಳ ಪರಿಶೀಲನೆಗೆ ಮುಂದಾಗಿರುವ ಎಸ್‌ಪಿಪಿ ಪ್ರಸನ್ನ ಕುಮಾರ್, ಸಹಾಯಕ ಎಸ್‌ಪಿಪಿ ಸಚಿನ್, ತನಿಖಾಧಿಕಾರಿ ಎಸಿಪಿ ಚಂದನ್ ಜೊತೆಗೂಡಿ ಘಟನೆ ನಡೆದ ಸ್ಥಳಗಳಿಗೆ ಭೇಟಿ ನೀಡಿದ್ದಾರೆ. ರೇಣುಕಾಸ್ವಾಮಿ ಅಪಹರಿಸಿ ತಂದಿಟ್ಟಿದ್ದ ಶೆಡ್, ಹಲ್ಲೆ ನಡೆಸಿದ ಸ್ಥಳ, ಬಿಟ್ಟುಬಿಡುವಂತೆ ಕೈಮುಗಿದು ಬೇಡಿಕೊಂಡ ಸ್ಥಳ, ಕೊಲೆಯಾದ ನಂತರ ಶವ ಇಟ್ಟಿದ್ದ ಸ್ಥಳ, ನಂತರ ರಾತ್ರಿ ಶವ ಬಿಸಾಡಿದ ಸತ್ವ ಅಪಾರ್ಟ್‌ಮೆಂಟ್ ಬಳಿಯ ಸ್ಥಳ ಪರಿಶೀಲನೆ ನಡೆಸಲಾಗಿದೆ.

ಡಿ.17ಕ್ಕೆ ಸಾಕ್ಷ್ಯ ವಿಚಾರಣೆಗೆ ದಿನಾಂಕ ನಿಗದಿಪಡಿಸಿರುವ ಬೆಂಗಳೂರಿನ 57ನೇ ಸಿಸಿಹೆಚ್ ಕೋರ್ಟ್ ಜಡ್ಜ್ ಈರಪ್ಪಣ್ಣ ಪವಡಿ ನಾಯ್ಕ್ ಮೊದಲಿಗೆ ಚಾರ್ಜ್‌ಶೀಟ್‌ನಲ್ಲಿ 7 ಮತ್ತು 8ನೇ ಸಾಕ್ಷಿಗಳಾದ ರೇಣುಕಾಸ್ವಾಮಿ ತಂದೆ ಕಾಶಿನಾಥಯ್ಯ ಶಿವನಗೌಡ್ರು ಹಾಗೂ ತಾಯಿ ರತ್ನಪ್ರಭ ಅವರಿಗೆ ಸಮನ್ಸ್ ಜಾರಿಗೊಳಿದ್ದಾರೆ.

ಡಿ. 18 ರಂದು ಫ್ಯಾಶನ್ ಶೋ

ಮೈಸೂರು, ಡಿ. 16– ಮೈಸೂರಿನ ರಾಜ್ ಫೌಂಡೇಷನ್ ವತಿಯಿಂದ ಡಿ. 18 ರಂದು ಮಧ್ಯಾಹ್ನ 3 ರಿಂದ 8 ಗಂಟೆಯವರೆಗೆ ಮೈಸೂರು ದಸರಾ ವಸ್ತು ಪ್ರದರ್ಶನ ಕಲಾ ಮಂಟಪದಲ್ಲಿ ಫ್ಯಾಶನ್ ಶೋ ಏರ್ಪಡಿಸಲಾಗಿದೆ. ಆಸಕ್ತಿ ಉಳ್ಳವರು ಬರುವಾಗ ತಮ್ಮ ಆಧಾರ್ ಕಾರ್ಡ್, ಒಂದು ಫೋಟೋ ತರತಕ್ಕದ್ದು. 25 ವರ್ಷದಿಂದ 55 ವಯಸ್ಸಿನವರಿಗೆ ಅವಕಾಶವಿರುತ್ತದೆ. ಭಾಗವಹಿಸಲು ಇಚ್ಛಿಸುವವರು 3 ಗಂಟೆ ಒಳಗೆ ಬರತಕ್ಕದ್ದು. ಹೆಚ್ಚಿನ ಮಾಹಿತಿಗೆ ಮೊ. 8197508158, 9743313178 ಸಂಪರ್ಕಿಸಬಹುದು.


ಡಿ.29, ಅರ್ಥಪೂರ್ಣವಾಗಿ ವಿಶ್ವಮಾನವ ದಿನ ಆಚರಣೆ

ಮೈಸೂರು,ಡಿ.16(ಎಸ್‌ಪಿಎನ್)– ಜಿಲ್ಲಾಡಳಿತದ ವತಿಯಿಂದ ವಿಶ್ವಮಾನವ ದಿನಾಚರಣೆಯನ್ನು, ಡಿ.29 ರಂದು ಬೆಳಗ್ಗೆ 11 ಗಂಟೆಗೆ ಕರ್ನಾಟಕದ ಕಲಾಮಂದಿರದ ಆವರಣದಲ್ಲಿರುವ ಕಿರುರಂಗ ಮಂದಿರದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಅವರು ತಿಳಿಸಿದರು.

ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ವಿಶ್ವಮಾನವ ದಿನಾಚರಣೆಯ ಸಂಬಂಧ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಾಡು ಕಂಡಂತಹ ಮಹಾನ್ ವ್ಯಕ್ತಿಗಳಲ್ಲಿ ಕುವೆಂಪು ಅವರು ಒಬ್ಬರು. ಅಂತಹ ಕವಿ ಮಹಾಶಯರ ಜನ್ಮ ದಿನಾಚರಣೆಯನ್ನು ಆಚರಿಸುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯವಾಗಿದ್ದು, ವಿಶ್ವಮಾನವ ಎಂದರೆ ಎಲ್ಲರನ್ನೂ ಒಳಗೊಂಡ ಮನುಷ್ಯತ್ವದ ಭಾವನೆ.

ಆದ್ದರಿಂದ ಸಮಾಜಕ್ಕೆ ನಾವೆಲ್ಲರೂ ಒಂದು ವಿಶ್ವಮಾನವರು ಎಂಬ ಉತ್ತಮ ಸಂದೇಶವನ್ನು ನೀಡಲು ಈ ಆಚರಣೆಯು ಮಾದರಿಯಾಗಲಿದೆ. ಹಾಗಾಗಿ ನಾವು ಯಾವಾಗಲು ವಿಶ್ವ ಮಾನವರಾಗಿ ಬದುಕಬೇಕು ಎಂಬ ನಿಟ್ಟಿನಲ್ಲಿ ವಿಶ್ವಮಾನವ ದಿನಾಚರಣೆಯನ್ನು ಆಚರಿಸಲಾಗುತ್ತಿದೆ ಎಂದರು.

ಕೆಜಿ ಕೊಪ್ಪಲಿನ ನಾಗರಾಜು ಅವರಿಗೆ ಸನ್ಮಾನ...



ಮೈಸೂರಿನ ಅರವಿಂದನಗರದಲ್ಲಿರುವ ಶಿವ ದೇವಾಲಯಕ್ಕೆ ಶ್ರೀ ಬಸವೇಶ್ವರ ಮೂರ್ತಿ ಹಾಗೂ ನಂದೀಶ್ವರ ಮೂರ್ತಿಗೆ ಬೆಳ್ಳಿಯ ಕವಚ ಮಾಡಿಸಿಕೊಟ್ಟ ಕೆಜಿ ಕೊಪ್ಪಲು ಮುಖಂಡ ಹಾಗೂ ಮೈಸೂರು ವಿವಿ ನಿವೃತ್ತ ಉದ್ಯೋಗಿ ನಾಗರಾಜು ಅವರನ್ನು ಕೆಜಿ ಕೊಪ್ಪಲಿನ ಮುಖಂಡರು ಸನ್ಮಾನಿಸಿದರು. ಚಿತ್ರದಲ್ಲಿ ಬಿಸಿಲು ಮಾರಮ್ಮ ದೇವಸ್ಥಾನದ ಗುಡ್ಡಪ್ಪ ಡಿ.ನಿಂಗಪ್ಪ, ಶ್ರೀ ಆದಿಶಕ್ತಿ ಬಂದಂತಮ್ಮ ಕಾಳಮ್ಮ ಸಮುದಾಯ ಭವನದ ಖಜಾಂಚಿ ಎಲ್.ಚಂದ್ರು, ಮುಖಂಡರಾದ ಆರ್.ರಾಜಕುಮಾರ್, ಮಂಜು, ಬೋರಪ್ಪ, ದಾಸನಕೊಪ್ಪಲು ಶೇಖರ್ ಅವರನ್ನು ಕಾಣಬಹುದು.

ಏಕಾಗ್ರತೆಯಿಂದ ಕಠಿಣ ಪರಿಶ್ರಮಪಟ್ಟರೆ ಸಾಧನೆ ಸಾಧ್ಯ

ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಅಭಿಮತ



'ಮಾನಸ ಯುವ ಸಂವರ್ಧನೆ' ಕಾರ್ಯಾಗಾರವನ್ನು ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತರಾದ ನಿತೇಶ್ ಪಾಟೀಲ್ ಉದ್ಘಾಟಿಸಿದರು. ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕುಲಸಚಿವರಾದ ಎಂ.ಕೆ.ಸವಿತಾ, ಪ್ರೊ.ಎನ್.ನಾಗರಾಜ ಮತ್ತಿತರರಿದ್ದರು.

ಮೈಸೂರು, ಡಿ.16(ಎಂಕೆ)– ಉತ್ತಮ ಸ್ನೇಹಿತರು, ಸೂಕ್ತ ಪರಿಸರ, ಆಸಕ್ತಿಯುಳ್ಳ ಕ್ಷೇತ್ರ ಅಥವಾ ವಿಷಯದ ಆಯ್ಕೆ ಜೊತೆಗೆ ಏಕಾಗ್ರತೆಯಿಂದ ಕಠಿಣ ಪರಿಶ್ರಮಪಟ್ಟರೆ ಸಾಧನೆ ಸಾಧ್ಯವಾಗಲಿದೆ ಎಂಬ ಅತ್ಯುಪಯುಕ್ತ ಸಲಹೆ ನೀಡಿದ ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತರಾದ ನಿತೇಶ್ ಪಾಟೀಲ್, ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬಿದರು.

ಮೈಸೂರು ಮಾನಸಗಂಗೋತ್ರಿ ಆವರಣದಲ್ಲಿರುವ ಮೈಸೂರು ವಿವಿಯ ಸೆನೆಟ್ ಭವನದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿಶೇಷ ಘಟಕದ ಸಹಯೋಗದೊಂದಿಗೆ ಹಮ್ಮಿಕೊಂಡಿರುವ ಎರಡು ದಿನಗಳ 'ಮಾನಸ ಯುವ ಸಂವರ್ಧನೆ' (ಯುವ ಸಬಲೀಕರಣ ಮತ್ತು ಔದ್ಯೋಗಿಕ ಕಾರ್ಯಾಗಾರ) ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಒಳ್ಳೆಯ ಸ್ನೇಹಿತರೊಂದಿಗೆ ನೀವಿದ್ದರೆ, ಅವರು ಏನು ಮಾಡುತ್ತಾರೋ ಅದನ್ನೇ ನೀವು ಮಾಡುತ್ತೀರಿ. ಒಳ್ಳೆಯ ಪರಿಸರದಲ್ಲಿ ಇದ್ದವರು ಏನು ಮಾಡುತ್ತಾರೋ ಅದನ್ನೂ ಕೂಡ ನೀವು ಮಾಡುವುದು ಸಹಜ ಆದ್ದರಿಂದ ನಿಮ್ಮ ಸ್ನೇಹಿತರ ಆಯ್ಕೆಯಲ್ಲಿ ಎಚ್ಚರದಿಂದಿರಿ. ಸ್ಪರ್ಧಾತ್ಮಕ ಪರೀಕ್ಷೆಗಳ ಬರೆಯುವಾಗ ಸ್ನೇಹಿತರೊಂದಿಗೆ ಚರ್ಚಿಸಿದರೆ ವಿಷಯ ಇನ್ನೂ ಆಳವಾಗಿ ಅರ್ಥವಾಗುವುದಲ್ಲದೆ ದೀರ್ಘ ಕಾಲದವರೆಗೆ ನೆನಪಿನಲ್ಲಿ ಉಳಿಯಲಿದೆ. ಹಾಗೆಯೇ ನಿಮ್ಮ ಗುರಿ ಮತ್ತು ನಿಮ್ಮ ಸ್ನೇಹಿತರ ಗುರಿಯೂ ಒಂದೇ ಆಗಿದ್ದರೆ, ಅವರೊಂದಿಗೆ ನೀವೂ ಕೂಡ ಸಾಧಕರಾಗಬಹುದು ಎಂದು ಕಿವಿಮಾತು ಹೇಳಿದರು.

ಅಧ್ಯಯನ ನಿರಂತರ ಮತ್ತು ಏಕಾಗ್ರತೆಯಿಂದ ಕೂಡಿರಬೇಕು. ಕೀ ನೋಟ್ಸ್ ಮಾಡಿಕೊಳ್ಳಬೇಕು. ಎಲ್ಲರೂ ಕೂಡ ಐಎಎಸ್–ಕೆಎಎಸ್ ಮಾಡಬೇಕು ಎಂದಿಲ್ಲ. ನಿಮಗೆ ಆಸಕ್ತಿ ಇರುವ ಕ್ಷೇತ್ರ ಅಥವಾ ವಿಷಯವನ್ನು ಆಯ್ಕೆ ಮಾಡಿಕೊಳ್ಳುವುದರಿಂದ ಅಧ್ಯಯನಕ್ಕೆ ಮತ್ತು ಸಾಧನೆಗೆ ಪೂರಕವಾಗಲಿದೆ. ಕಷ್ಟ ಪಡಬೇಕು ಎಂದು ಸಿಕ್ಕಾಪಟ್ಟೆ ಓದಿ ಪರೀಕ್ಷೆ ಸಂದರ್ಭದಲ್ಲಿ ಆಸ್ಪತ್ರೆ ಸೇರುವುದಲ್ಲ. ಪ್ರತೀ ದಿನ 8 ಗಂಟೆ ಅಧ್ಯಯನ ಸಾಕು. ಆದರೆ, ನಿರಂತರವಾಗಿರಬೇಕು ಎಂದು ತಿಳಿ ಹೇಳಿದರು.

ಕಾರ್ಯಾಗಾರದ ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮಾತನಾಡಿ, ಜ್ಞಾನದಿಂದ ಶಿಕ್ಷಣ, ಕೌಶಲ್ಯದಿಂದ ಉದ್ಯೋಗ, ಮೌಲ್ಯಗಳಿಂದ ವ್ಯಕ್ತಿ ಗೌರವ ದೊರೆಯಲಿದೆ. ಆದ್ದರಿಂದ ಈ ಮೂರನ್ನೂ ವಿದ್ಯಾರ್ಥಿಗಳು ಪಾಲಿಸಿ, ತಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ದೇಶದ ಉತ್ತಮ ಪ್ರಜೆಗಳಾಗುವಲ್ಲಿ ಯಾವುದೇ ಸಂಶಯವಿಲ್ಲ. ನೀವೆಲ್ಲಾ(ವಿದ್ಯಾರ್ಥಿಗಳು) ಒಟ್ಟಾಗಿರುವುದು ಆರಂಭ... ಒಟ್ಟಿಗೆ ಕುಳಿತು ಯೋಚನೆ ಮಾಡಿದರೆ ಚಲನೆ... ಒಟ್ಟಾಗಿ ಕೆಲಸ ಮಾಡಿದರೆ ಸಾಧನೆಯಾಗಲಿದೆ. ಆದ್ದರಿಂದ ಸಾಧನೆಯತ್ತ ಕಾರ್ಯೋನ್ಮುಖರಾಗುವಂತೆ ಕರೆ ನೀಡಿದರು.

ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ, ಪರೀಕ್ಷಾಂಗ ಕುಲಸಚಿವ ಪ್ರೊ.ಎನ್.ನಾಗರಾಜ, ಹಣಕಾಸು ಅಧಿಕಾರಿ ಕೆ.ಎಸ್.ರೇಖಾ, ಕಾರ್ಯಾಗಾರದ ಕಾರ್ಯಕಾರಿ ಸಮಿತಿ ಕಾರ್ಯಾಧ್ಯಕ್ಷ ಪ್ರೊ.ಆನಂದ್, ಹುಣಸೂರಿನ ಡಿ.ದೇವರಾಜ ಅರಸು ಪ್ರಥಮ ದರ್ಜೆ ಕಾಲೇಜು ಪ್ರಾಧ್ಯಾಪಕ ಡಾ.ಪಿ.ಎನ್.ಹೇಮಚಂದ್ರ ಮತ್ತಿತರರಿದ್ದರು.

ನೋಟ್ ಬುಕ್ ಮೊದಲ ಪುಟದಲ್ಲಿ ಗುರಿ ಬರೆದಿಡಿ...!

ವಿದ್ಯಾರ್ಥಿಗಳು ತಮ್ಮ ನೋಟ್ ಬುಕ್‌ನ ಮೊದಲ ಪುಟದಲ್ಲಿ ತಮ್ಮ ಗುರಿಗಳನ್ನು ಬರೆದಿಟ್ಟುಕೊಂಡು ಪ್ರತೀ ದಿನ ನೋಡಬೇಕು ಮತ್ತು ಗುರಿ ತಲುಪುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇನೆಯೇ ಎಂದು ತಮ್ಮನ್ನು ತಾವೇ ಪ್ರಶ್ನಿಸಿಕೊಳ್ಳಬೇಕು. ಮೊದಲ ಗುರಿ ತರಗತಿಯಿಂದಲೇ ಆರಂಭವಾಗಿ ದೊಡ್ಡ ಮಟ್ಟದಲ್ಲಿ ಪ್ರತಿಬಿಂಬಿಸಬೇಕು.

- ನಿತೇಶ್ ಪಾಟೀಲ್, ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ

ಸಾಧನೆಯು ಸಾಧಕನ ಸ್ವತ್ತು, ಅದು ಯಾರೊಬ್ಬರ ಆಸ್ತಿಯೂ ಅಲ್ಲ

ಶರಣ ಸಾಹಿತ್ಯ ಪರಿಷತ್ತು ನಗರ ಘಟಕದ ಅಧ್ಯಕ್ಷ ಜಯಪ್ಪ ಹೊನ್ನಾಳಿ ಅಭಿಮತ



ಕಾರ್ಯಕ್ರಮವನ್ನು ಜಯಪ್ಪ ಹೊನ್ನಾಳಿ ಉದ್ಘಾಟಿಸಿದರು.

ಮೈಸೂರು, ಡಿ.16(ವಿವಿಹೆಚ್)– ಸಾಧನೆಯು ಸಾಧಕನ ಸ್ವತ್ತು. ಅದು ಯಾರೊಬ್ಬರ ಆಸ್ತಿಯೂ ಅಲ್ಲ ಎಂಬುದಕ್ಕೆ ಮೃದಂಗ ವಿದ್ವಾನ್ ಎಂ.ಬಿ. ಅನಂತಸ್ವಾಮಿ ಅವರೇ ನಿದರ್ಶನ ಎಂದು ಶರಣ ಸಾಹಿತ್ಯ ಪರಿಷತ್ತು ನಗರ ಘಟಕದ ಅಧ್ಯಕ್ಷ ಜಯಪ್ಪ ಹೊನ್ನಾಳಿ ತಿಳಿಸಿದರು.

ಮೈಸೂರಿನ ಜೆ.ಎಲ್.ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾದಲ್ಲಿ ಮಂಗಳವಾರ ಎಂ.ಬಿ. ಅನಂತಸ್ವಾಮಿ ಸಾಂಸ್ಕೃತಿಕ ಮತ್ತು ಸೇವಾ ಟ್ರಸ್ಟ್ ನ 4ನೇ ವಾರ್ಷಿಕೋತ್ಸವ ಸಮಾರಂಭ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಲಾವಿದನಿಗೆ ಜಾತಿ ಇಲ್ಲ. ಕಲೆಯಿಂದಲೇ ಆತನಿಗೆ ಬೆಲೆ. ಇದಕ್ಕೆ ಹೆಸರೆಂಬಂತೆ ಅನಂತಸ್ವಾಮಿ ಅವರು ತಮ್ಮ ಪ್ರತಿಭೆಯಿಂದಲೇ ಅರಮನೆ, ಗುರುಮನೆ, ನೆರಮನೆಯಿಂದ ಸನ್ಮಾನಿತರಾಗಿ ಅಪಾರ ಹೆಸರು ಸಂಪಾದಿಸಿದ್ದರು ಎಂದು ಅಭಿಪ್ರಾಯಪಟ್ಟರು.

ಎಂ.ಬಿ. ಅನಂತಸ್ವಾಮಿ ಅವರ ಪರಿಶ್ರಮ, ಪ್ರಾಮಾಣಿಕತೆ, ಕೌಶಲ್ಯದಿಂದ ಜೀವಕೋಶ, ಭಾವಕೋಶದಿಂದ ಕಲೆಯನ್ನು ಕರಗತ ಮಾಡಿಕೊಂಡಿದ್ದರು. ಇದಕ್ಕೆ ಸಾಕ್ಷಿ ಎಂಬಂತೆ ಮೈಸೂರು ಮಹಾರಾಜರಿಂದಲೇ ಮದಂಗ ಚಕ್ರವರ್ತಿ ಎಂದು ಬಿರುದಾಂಕಿತರಾಗಿದ್ದವರು. ಜೊತೆಗೆ ರಾಜ್ಯ ಸರ್ಕಾರದಿಂದ ಕರ್ನಾಟಕ ಕಲಾತಿಲಕ ಪ್ರಶಸ್ತಿ ಪಡೆದಿದ್ದಾರೆ ಎಂದರು.

ಕಲೆ ಇರುವುದು ವಿಕಾಸಕ್ಕೆ ಹೊರತು ವಿಲಾಸಕ್ಕಲ್ಲ. ಸುಕೃತಿಗೆ ಹೊರತು ವಿಕೃತಿಗಲ್ಲ ಎಂಬುದನ್ನು ಕಲೆಯಲ್ಲಿ ಕಂಡುಕೊಂಡಿದ್ದವರು ಅನಂತಸ್ವಾಮಿ ಅವರು. ಅದನ್ನೇ ಪಾಲಿಸಿರುವ ಅವರ ಇಡೀ ಕುಟುಂಬ ಕಲಾಸೇವೆಯಲ್ಲಿ ತೊಡಗಿಸಿಕೊಂಡು ಇತರರಿಗೆ ಮಾದರಿಯಾಗಿದೆ ಎಂದು ಶ್ಲಾಘಿಸಿದರು.

ಇದೇ ವೇಳೆ ಕರ್ನಾಟಕ ಪೊಲೀಸ್ ವಾದ್ಯ ವೃಂದದ ಆರ್. ದಾಸಪ್ಪ ಅವರನ್ನು ಸನ್ಮಾನಿಸಲಾಯಿತು.

ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಮ್ ಅಯ್ಯಂಗಾರ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಚನ್ನಕೇಶ್ವರ ಸ್ಕೂಲ್ ಮತ್ತು ಕಾಲೇಜಿನ ಅಧ್ಯಕ್ಷ ಯಶಸ್ವಿನಿ ಲೋಕೇಶ್, ಜಿಲ್ಲಾ ಚಿನ್ನ– ಬೆಳ್ಳಿ ಕೆಲಸಗಾರರ ಅಭಿವೃದ್ಧಿ ಸಂಘದ ಲಯನ್ ಗೋಲ್ಡನ್ ಟಿ. ಸುರೇಶ್, ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಟ್ರಸ್ಟ್ ಅಧ್ಯಕ್ಷ ಎ. ಕಾಂತರಾಜು, ಕಾರ್ಯದರ್ಶಿ ಚಂದ್ರು, ಖಜಾಂಚಿ ಬಿ.ಆರ್.ಜ್ಯೋತಿ ಉಪಸ್ಥಿತರಿದ್ದರು.

ಮೆಸ್ಸಿ ಕಾರ್ಯಕ್ರಮದಲ್ಲಿ ದಾಂಧಲೆ

ಪಶ್ಚಿಮ ಬಂಗಾಳ ಕ್ರೀಡಾ ಸಚಿವರ ತಲೆದಂಡ; ಅರೂಪ್ ಬಿಸ್ವಾಸ್ ರಾಜೀನಾಮೆ



ಕೋಲ್ಕತ್ತಾ, ಡಿ.16– ಕೋಲ್ಕತ್ತಾದ ಸಾಲ್ಟ್ ಲೇಕ್ ಕ್ರೀಡಾಂಗಣದಲ್ಲಿ ಫುಟ್ಬಾಲ್ ದಂತಕಥೆ ಲಿಯೋನೆಲ್ ಮೆಸ್ಸಿ ಭಾಗವಹಿಸಿದ್ದ ಕಾರ್ಯಕ್ರಮದಲ್ಲಿ ಫ್ಯಾನ್ಸ್ ದಾಂಧಲೆ ಮತ್ತು ಅವ್ಯವಸ್ಥೆಗೆ ಸಂಬಂಧಿಸಿದಂತೆ ಟಿಎಂಸಿ ನೇತೃತ್ವದ ರಾಜ್ಯ ಸರ್ಕಾರ ತೀವ್ರ ಟೀಕೆಗೆ ಗುರಿಯಾಗಿತ್ತು. ಇದೀಗ ಪಶ್ಚಿಮ ಬಂಗಾಳದ ಕ್ರೀಡಾ ಸಚಿವ ಅರೂಪ್ ಬಿಸ್ವಾಸ್ ಅವರ ತಲೆದಂಡವಾಗಿದೆ.

ಅರೂಪ್ ಬಿಸ್ವಾಸ್ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಅವರು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಗೆ ಬರೆದ ರಾಜೀನಾಮೆ ಪತ್ರವನ್ನು ಟಿಎಂಸಿ ವಕ್ತಾರ ಕುನಾಲ್ ಘೋಷ್ ಮಂಗಳವಾರ ಹಂಚಿಕೊಂಡಿದ್ದಾರೆ.

ಕ್ರೀಡಾ ಸಚಿವ ಅರೂಪ್ ಬಿಸ್ವಾಸ್ ಅವರು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಗೆ ಕ್ರೀಡಾ ಇಲಾಖೆಯ ಜವಾಬ್ದಾರಿಯಿಂದ ಬಿಡುಗಡೆ ಮಾಡುವಂತೆ ಪತ್ರದಲ್ಲಿ ಬರೆದಿದ್ದಾರೆ ಎಂದು ಘೋಷ್ ಅವರು ಫೇಸ್‌ಬುಕ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಡಿ.13ರಂದು, ಫುಟ್ಬಾಲ್ ದಿಗ್ಗಜ ಲಿಯೋನೆಲ್ ಮೆಸ್ಸಿ ವಿವೇಕಾನಂದ ಯುವ ಭಾರತಿ ಕ್ರೀಡಾಂಗಣಕ್ಕೆ (ಸಾಲ್ಟ್ ಲೇಕ್) ಆಗಮಿಸಿದಾಗ ಉಂಟಾದ ದಾಂಧಲೆ ಬಗ್ಗೆ ತನಿಖೆಗೆ ನೀವು ಈಗಾಗಲೇ ಸಮಿತಿಯನ್ನು ರಚಿಸಿದ್ದೀರಿ. ನಿಷ್ಪಕ್ಷಪಾತ ತನಿಖೆಗಾಗಿ ನಾನು ಪಶ್ಚಿಮ ಬಂಗಾಳ ಕ್ರೀಡಾ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ. ದಯವಿಟ್ಟು ನನ್ನ ವಿನಂತಿಯನ್ನು ಸ್ವೀಕರಿಸಬೇಕೆಂದು ಎಂದು ಬಿಸ್ವಾಸ್ ತಮ್ಮ ರಾಜೀನಾಮೆ ಪತ್ರದಲ್ಲಿ ಬರೆದಿದ್ದಾರೆ ಎಂದು ವರದಿಯಾಗಿದೆ.

ಬಿಸ್ವಾಸ್ ಅವರ ರಾಜೀನಾಮೆಯನ್ನು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಅಂಗೀಕರಿಸಿದ್ದಾರೆ ಎನ್ನಲಾಗಿದೆ. ಆದರೆ ಈ ಕುರಿತು ಮುಖ್ಯಮಂತ್ರಿ ಕಚೇರಿಯಿಂದ ಇನ್ನೂ ಯಾವುದೇ ದೃಢೀಕರಣ ಬಂದಿಲ್ಲ

ದೆಹಲಿ-ಆಗ್ರಾ ಎಕ್ಸ್‌ಪ್ರೆಸ್‌ವೇಯಲ್ಲಿ ದಟ್ಟ ಮಂಜಿನಿಂದ ಭೀಕರ ಅಪಘಾತ

ಹಲವು ವಾಹನಗಳಿಗೆ ಬೆಂಕಿ: 13 ಸಾವು, 66 ಮಂದಿಗೆ ಗಾಯ



ಉತ್ತರ ಪ್ರದೇಶ, ಡಿ.16– ಉತ್ತರ ಪ್ರದೇಶದ ಮಥುರಾ ಜಿಲ್ಲೆಯ ಯಮುನಾ ಎಕ್ಸ್‌ಪ್ರೆಸ್‌ವೇಯಲ್ಲಿ ಮಂಗಳವಾರ ನಸುಕಿನ ಜಾವ ದಟ್ಟ ಮಂಜು ಕವಿದಿದ್ದರಿಂದ ದಾರಿ ಗೋಚರಿಸದೆ ಹಲವು ವಾಹನಗಳು ಸರಣಿ ಡಿಕ್ಕಿಯಾಗಿ ನಂತರ ಬೆಂಕಿ ಹತ್ತಿಕೊಂಡು ಉರಿದ ಪರಿಣಾಮ 13 ಮಂದಿ ಸಾವನ್ನಪ್ಪಿ, 66 ಮಂದಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಆಗ್ರಾ–ನೋಯ್ಡಾ ಎಕ್ಸ್‌ಪ್ರೆಸ್‌ವೇಯಲ್ಲಿ ಇಂದು ನಸುಕಿನ ಜಾವ 4 ಗಂಟೆ ಸುಮಾರಿಗೆ ದಟ್ಟವಾದ ಮಂಜಿನಿಂದಾಗಿ ದಾರಿ ಸರಿಯಾಗಿ ವಾಹನ ಸವಾರರಿಗೆ ಗೋಚರಿಸದೆ ಈ ಭೀಕರ ಅಪಘಾತ ಸಂಭವಿಸಿದೆ.

ಕನಿಷ್ಠ ಏಳು ಬಸ್‌ಗಳು ಮತ್ತು ಮೂರು ಕಾರುಗಳ ಮಧ್ಯೆ ಡಿಕ್ಕಿ ಸಂಭವಿಸಿತು. ಡಿಕ್ಕಿಯ ರಭಸಕ್ಕೆ ಬೆಂಕಿ ಕಾಣಿಸಿಕೊಂಡು ವಾಹನಗಳು ಸಂಪೂರ್ಣ ಸುಟ್ಟುಹೋಗಿ ಪ್ರಯಾಣಿಕರು ಸಜೀವ ದಹನಗೊಂಡಿದ್ದಾರೆ. ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಸ್ಥಳಕ್ಕೆ ಧಾವಿಸಿ, ಬೆಂಕಿಯನ್ನು ನಿಯಂತ್ರಿಸಲು ಮತ್ತು ಸಿಕ್ಕಿಬಿದ್ದ ಪ್ರಯಾಣಿಕರನ್ನು ರಕ್ಷಿಸಲು 11 ಅಗ್ನಿಶಾಮಕ ದಳಗಳನ್ನು ನಿಯೋಜಿಸಿದವು.

ಜಿಲ್ಲಾಧಿಕಾರಿ ಮತ್ತು ಎಸ್‌ಎಸ್‌ಪಿ ಸೇರಿದಂತೆ ಹಿರಿಯ ಅಧಿಕಾರಿಗಳು, ಪೊಲೀಸರು, ಅಗ್ನಿಶಾಮಕ ಸೇವೆಗಳು, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆ ತಂಡಗಳು ನಡೆಸಿದ ರಕ್ಷಣಾ ಕಾರ್ಯಾಚರಣೆಗಳ ಮೇಲ್ವಿಚಾರಣೆ ಮಾಡಿದರು. ಅಪಘಾತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ತಲಾ 2 ಲಕ್ಷರೂಪಾಯಿ ಪರಿಹಾರ ಘೋಷಿಸಿದ್ದಾರೆ.

ಮೈಸೂರು ನಗರಪಾಲಿಕೆಯಿಂದ ಕಾಲೇಜು ವಿದ್ಯಾರ್ಥಿಗಳಿಗೆ 'ಪರಿಸರ ರೀಲ್ಸ್' ಸ್ಪರ್ಧೆ

ಮೈಸೂರು, ಡಿ.16(ಎಸ್‌ಪಿಎನ್)– ಮೈಸೂರು ನಗರದ ಸುಂದರ ಪರಿಸರವನ್ನು ಕಾಪಾಡುವ ನಿಟ್ಟಿನಲ್ಲಿ ಮತ್ತು ಸ್ವಚ್ಛತೆಯ ಬಗ್ಗೆ ಯುವಜನತೆಯಲ್ಲಿ ಜಾಗೃತಿ ಮೂಡಿಸಲು ಮೈಸೂರು ಮಹಾನಗರ ಪಾಲಿಕೆಯು ಕಾಲೇಜು ವಿದ್ಯಾರ್ಥಿಗಳಿಗಾಗಿ 'ಪರಿಸರ ರೀಲ್ಸ್' ಸ್ಪರ್ಧೆ ಆಯೋಜಿಸಿದೆ.

ಈ ಸ್ಪರ್ಧೆಯ ಮೂಲಕ ವಿದ್ಯಾರ್ಥಿಗಳು ತಮ್ಮ ಸೃಜನಶೀಲತೆಯನ್ನು ಪ್ರದರ್ಶಿಸಲು ವೇದಿಕೆ ಕಲ್ಪಿಸಲಾಗಿದ್ದು, ಮೈಸೂರನ್ನು ದೇಶದ ನಂಬರ್ ಒನ್ ಸ್ವಚ್ಛ ನಗರವನ್ನಾಗಿಸಲು ಎಲ್ಲರೂ ಕೈಜೋಡಿಸಬೇಕೆಂದು ಪಾಲಿಕೆ ಕರೆ ನೀಡಿದೆ. ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು 1)ಕಸವನ್ನು ಮೂಲದಲ್ಲೇ ವರ್ಗೀಕರಿಸುವುದು. 2)ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯುವವರಲ್ಲಿ ಜಾಗೃತಿ ಮೂಡಿಸುವುದು. 3)ಏಕ ಬಳಕೆಯ ಪ್ಲಾಸ್ಟಿಕ್ ನಿಷೇಧ ಅಥವಾ ನೀರಿನ ಮರುಬಳಕೆ ಕುರಿತು ಈ ನಾಲ್ಕು ಪ್ರಮುಖ ವಿಷಯಗಳಲ್ಲಿ ಯಾವುದಾದರೂ ಒಂದರ ಕುರಿತು ತಮ್ಮ ವಿಶಿಷ್ಟ ಆಲೋಚನೆಯನ್ನು ಬಳಸಿ ರೀಲ್ಸ್ ರೂಪದಲ್ಲಿ ಪ್ರಸ್ತುತಪಡಿಸಬೇಕಿದೆ.

ಈ ಸ್ಪರ್ಧೆಗೆ ಕೆಲವು ಪ್ರಮುಖ ನಿಯಮಗಳನ್ನು ಅನ್ವಯಿಸಲಾಗಿದ್ದು, ಸಿದ್ಧಪಡಿಸುವ ರೀಲ್ಸ್‌ನ ಅವಧಿಯು ಒಂದು ನಿಮಿಷ ಮೀರಿರಬಾರದು. ಸೃಜನಾತ್ಮಕವಾಗಿ ಸಿದ್ಧಪಡಿಸಿದ ವಿಡಿಯೋಗಳಲ್ಲಿ ಯಾವುದೇ ವ್ಯಕ್ತಿ, ಸಂಸ್ಥೆ, ರಾಜಕೀಯ ಪಕ್ಷ, ಜಾತಿ ಅಥವಾ ಧರ್ಮಕ್ಕೆ ಧಕ್ಕೆ ತರುವಂತಹ ಅಥವಾ ಅವುಗಳನ್ನು ಪ್ರಮೋಟ್ ಮಾಡುವಂತಹ ಅಂಶಗಳು ಇರಬಾರದು. ಈ ಸ್ಪರ್ಧೆಗೆ ಸಂಬಂಧಿಸಿದಂತೆ ಆಯೋಜಕರು ತೆಗೆದುಕೊಳ್ಳುವ ತೀರ್ಮಾನವೇ ಅಂತಿಮವಾಗಿದ್ದು, ಇದರ ಕುರಿತು ಯಾವುದೇ ಚರ್ಚೆ ಅಥವಾ ಮೇಲ್ಮನವಿಗೆ ಅವಕಾಶವಿರುವುದಿಲ್ಲ ಎಂದು ಪಾಲಿಕೆ ಸ್ಪಷ್ಟಪಡಿಸಿದೆ.

ಸ್ಪರ್ಧೆಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡುವ ವಿದ್ಯಾರ್ಥಿಗಳಿಗೆ ಪ್ರಥಮ ಬಹುಮಾನವಾಗಿ 5,000 ರೂ., ದ್ವಿತೀಯ ಬಹುಮಾನವಾಗಿ 3,000 ರೂ. ಹಾಗೂ ತೃತೀಯ ಬಹುಮಾನವಾಗಿ 2,000 ರೂ.ಗಳನ್ನು ನೀಡಲಾಗುವುದು. ಇದರೊಂದಿಗೆ ವಿಶೇಷ ಗೌರವವಾಗಿ ಅತ್ಯುತ್ತಮ 10 ರೀಲ್ಸ್‌ಗಳನ್ನು ಪಾಲಿಕೆ ಆಯೋಜನೆಯ ಎಕ್ಸ್‌ಪೋನಲ್ಲಿ ಪ್ರದರ್ಶಿಸಲಾಗುವುದು ಮತ್ತು ಭಾಗವಹಿಸಿದ ಪ್ರತಿಯೊಬ್ಬರಿಗೂ ಮೈಸೂರು ಮಹಾನಗರ ಪಾಲಿಕೆಯಿಂದ ಪ್ರಮಾಣಪತ್ರ ನೀಡಲಾಗುವುದು. ಆಸಕ್ತ ವಿದ್ಯಾರ್ಥಿಗಳು ತಮ್ಮ ರೀಲ್ಸ್‌ಗಳನ್ನು 99723–91577 ವಾಟ್ಸ್‌ಆಪ್ ಸಂಖ್ಯೆಗೆ ಕಳುಹಿಸಬಹುದಾಗಿದ್ದು, ಸಲ್ಲಿಕೆಗೆ 2025ರ ಡಿಸೆಂಬರ್ 30, ಕೊನೆಯ ದಿನವಾಗಿದೆ.

ದೇಶ - ವಿದೇಶ

ಚಂಡಮಾರುತಕ್ಕೆ ಬ್ರೆಜಿಲ್ ತತ್ತರ: ಗಾಳಿಯ ರಭಸಕ್ಕೆ ಕುಸಿದು ಬಿದ್ದ ಲಿಬರ್ಟಿ ಪ್ರತಿಮೆಯ ಪ್ರತಿಕೃತಿ



ಬ್ರೆಸಿಲಿಯಾ (ಬ್ರೆಜಿಲ್): ಭಾರೀ ಚಂಡಮಾರುತ ಹಾಗೂ ಭೀಕರ ಗಾಳಿಗೆ ಬ್ರೆಜಿಲ್ ತತ್ತರಿಸಿ ಹೋಗಿದೆ. ದಕ್ಷಿಣ ಬ್ರೆಜಿಲ್‌ನ ಗುವಾಯ್ಬಾ ನಗರದಲ್ಲಿ ಅಪ್ಪಳಿಸಿದ ಭಾರೀ ಚಂಡಮಾರುತಕ್ಕೆ ಲಿಬರ್ಟಿ ಪ್ರತಿಮೆ ಕುಸಿದು ಬಿದ್ದಿದೆ. ಇದು ಲಿಬರ್ಟಿ ಪ್ರತಿಮೆಯ ಪ್ರತಿಕೃತಿಯಾಗಿದ್ದು, ಮೊದಲ ಪ್ರತಿಮೆ ಅಮೆರಿಕಾದ ನ್ಯೂಜರ್ಸಿಯಲ್ಲಿದೆ. ಬ್ರೆಜಿಲ್‌ನಲ್ಲಿ ವೇಗವಾಗಿ ಗಾಳಿ ಬೀಸುತ್ತಿರುವ ಪರಿಣಾಮ ಪ್ರತಿಮೆ ಓರೆಯಾಗಿ ಬಳಿಕ ಖಾಲಿ ಪಾರ್ಕಿಂಗ್ ಪ್ರದೇಶದಲ್ಲಿ ಕುಸಿದು ಬಿದ್ದಿದೆ

ಈ ಪ್ರತಿಮೆಯನ್ನು 2020 ರಲ್ಲಿ ಸ್ಥಾಪಿಸಲಾಗಿತ್ತು. ಪ್ರತಿಮೆಯ 11 ಮೀಟರ್ ಎತ್ತರದ ಸ್ತಂಭ ಬಲಿಷ್ಠವಾಗಿಯೇ ಇತ್ತು. ಆದರೆ ಗಾಳಿಯ ವೇಗ ಗಂಟೆಗೆ 80 ರಿಂದ 90 ಕಿ.ಮೀ ವೇಗದಲ್ಲಿದ್ದ ಪರಿಣಾಮ ಪ್ರತಿಮೆ ಕುಸಿದು ಬಿದ್ದಿದೆ. ಮುಂಜಾಗ್ರತಾ ಕ್ರಮವಾಗಿ ಅಧಿಕಾರಿಗಳು ಪ್ರತಿಮೆ ಸಮೀಪದ ಅಂಗಡಿ–ಮುಂಗಟ್ಟುಗಳನ್ನು ಮುಚ್ಚಿ ಜನರನ್ನು ಸುರಕ್ಷಿತ ಸ್ಥಳಕ್ಕೆ ಕಳುಹಿಸಿದ್ದರು. ಈ ಘಟನೆಯಲ್ಲಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಬಂದೂಕುಧಾರಿಗಳಿಂದ ಬಸ್ ಅಪಹರಣ; 18 ಪ್ರಯಾಣಿಕರು ಒತ್ತೆ



ಇಸ್ಲಾಮಾಬಾದ್: ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿ ಕ್ವೆಟ್ಟಾಗೆ ತೆರಳುತ್ತಿದ್ದ 30 ಜನರಿದ್ದ ಬಸ್ ಅನ್ನು ಬಂದೂಕುಧಾರಿಗಳು ಅಪಹರಿಸಿದ್ದಾರೆ. ಸೋಮವಾರ ರಾತ್ರಿ ಘೋಟ್ಕಿ ಪ್ರದೇಶದ ಬಳಿ ಈ ಘಟನೆ ನಡೆದಿದ್ದು, ಸಿಂಧ್ ಮತ್ತು ಪಂಜಾಬ್ ಗಡಿಯ ಸಮೀಪವಿರುವ ಹೈವೇ ಲಿಂಕ್ ರಸ್ತೆಯಲ್ಲಿ ದಾಳಿಕೋರರು ಬಸ್ ಮೇಲೆ ಗುಂಡು ಹಾರಿಸಿ, 18 ಪುರುಷ ಪ್ರಯಾಣಿಕರನ್ನು ಒತ್ತೆಯಾಳುಗಳಾಗಿ ಇಟ್ಟುಕೊಂಡಿದ್ದಾರೆ. ಗುಂಡಿನ ದಾಳಿಯಲ್ಲಿ ಚಾಲಕ ಮತ್ತು ಕೆಲವು ಪ್ರಯಾಣಿಕರು ಗಾಯಗೊಂಡಿದ್ದಾರೆ.

ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಮಹಿಳಾ ಪ್ರಯಾಣಿಕರೊಬ್ಬರು ನೀಡಿದ ಮಾಹಿತಿಯ ಪ್ರಕಾರ ಒಟ್ಟು 18 ರಿಂದ 20 ದಾಳಿಕೋರರು ಸ್ಥಳದಲ್ಲಿದ್ದರು. ಎಲ್ಲರೂ ಶಸ್ತ್ರಸಜ್ಜಿತರಾಗಿದ್ದರು ಮತ್ತು ಅವರ ಮುಖಗಳನ್ನು ಮುಚ್ಚಲಾಗಿತ್ತು ಎಂದು ಜಿಯೋ ನ್ಯೂಸ್ ವರದಿ ಮಾಡಿದೆ.

ದಾಳಿಕೋರರು 25 ಪ್ರಯಾಣಿಕರನ್ನು ಬಸ್‌ನಿಂದ ಇಳಿಯುವಂತೆ ಒತ್ತಾಯಿಸಿದರು. ಆದರೆ ಮಹಿಳಾ ಪ್ರಯಾಣಿಕರಿಗೆ ಯಾವುದೇ ಹಾನಿ ಮಾಡಲಿಲ್ಲ ಎಂದು ಅವರು ಹೇಳಿದ್ದಾರೆ.

ನೇಪಾಳದಲ್ಲಿ ದಶಕದ ನಂತರ ಭಾರತದ ಕರೆನ್ಸಿ ಮೇಲಿನ ನಿಷೇಧ ತೆರವು



ಕಠ್ಮಂಡು: ಪರಿಷ್ಕೃತ ನಿಬಂಧನೆಯಡಿಯಲ್ಲಿ ನೇಪಾಳಿ ಮತ್ತು ಭಾರತೀಯ ನಾಗರಿಕರು ಇಬ್ಬರೂ ಹೆಚ್ಚಿನ ಮೌಲ್ಯದ ಬ್ಯಾಂಕ್ ನೋಟುಗಳನ್ನು ಭಾರತದಿಂದ ನೇಪಾಳಕ್ಕೆ ತರಬಹುದು ಅಥವಾ ನೇಪಾಳದಿಂದ ಭಾರತಕ್ಕೆ ಕೊಂಡೊಯ್ಯಬಹುದು.

ಭಾರತೀಯ ರಿಸರ್ವ್ ಬ್ಯಾಂಕ್ ವಿದೇಶಿ ವಿನಿಮಯ ನಿರ್ವಹಣೆ (ಕರೆನ್ಸಿಯ ರಫ್ತು ಮತ್ತು ಆಮದು) ನಿಯಮಗಳು, 2015ಕ್ಕೆ ತಿದ್ದುಪಡಿಗಳನ್ನು ತಂದ ನಂತರ ನೇಪಾಳ ಸಂಪುಟದ ಈ ನಿರ್ಧಾರ ಹೊರಬಿದ್ದಿದೆ. ಭಾರತ, ನೇಪಾಳಿ ಮತ್ತು ಭೂತಾನಿನ ಪ್ರಜೆಗಳು ಭಾರತಕ್ಕೆ ಮತ್ತು ಭಾರತದಿಂದ ಪ್ರಯಾಣಿಸುವಾಗ ಹೆಚ್ಚಿನ ಮೌಲ್ಯದ ಭಾರತೀಯ ಕರೆನ್ಸಿಯನ್ನು ಸಾಗಿಸಲು ಈ ತಿದ್ದುಪಡಿ ಅನುಮತಿಸುತ್ತದೆ.

ನೇಪಾಳ ರಾಷ್ಟ್ರ ಬ್ಯಾಂಕ್ (NRB) ವಕ್ತಾರ ಗುರುಪ್ರಸಾದ್ ಪೌಡೆಲ್ ಅವರ ಪ್ರಕಾರ ಸರ್ಕಾರದ ನಿರ್ಧಾರವು ನೇಪಾಳ ಗೆಜೆಟ್‌ನಲ್ಲಿ ಪ್ರಕಟವಾದ ನಂತರ ಭಾರತದಿಂದ ನೇಪಾಳಕ್ಕೆ ಪ್ರಯಾಣಿಸುವ ವ್ಯಕ್ತಿಗಳು ಅಥವಾ ನೇಪಾಳದಿಂದ ಭಾರತಕ್ಕೆ ಬರುವ ವ್ಯಕ್ತಿಗಳು ಹೆಚ್ಚಿನ ಮೌಲ್ಯದ ಭಾರತೀಯ ಬ್ಯಾಂಕ್ ನೋಟುಗಳ ಬಳಕೆಯನ್ನು ಕಾನೂನುಬದ್ಧಗೊಳಿಸುವ ಸುತ್ತೋಲೆಯನ್ನು NRB ಹೊರಡಿಸುತ್ತದೆ ಎಂದು ಹೇಳಿದ್ದಾರೆ.

1 ಲಕ್ಷ ರೂ. ಸಾಲ, ಬಡ್ಡಿ, ಚಕ್ರಬಡ್ಡಿ ಸೇರಿ 74 ಲಕ್ಷ ರೂಗೆ ಏರಿಕೆ: ಕಿಡ್ನಿ ಮಾರಾಟ ಮಾಡಿದ ರೈತ



ಮಹಾರಾಷ್ಟ್ರ ತೆಗೆದುಕೊಂಡಿದ್ದ ಒಂದು ಲಕ್ಷ ರೂಪಾಯಿ ಸಾಲಕ್ಕೆ ಪ್ರತಿದಿನ 10,000 ಬಡ್ಡಿ ಸೇರಿದಂತೆ 74 ಲಕ್ಷರೂ. ಆಗಿದ್ದರಿಂದ ಮಹಾರಾಷ್ಟ್ರದ ರೈತರೊಬ್ಬರು, ಕಾಂಬೋಡಿಯಾಗೆ ತೆರಳಿ ತನ್ನ ಕಿಡ್ನಿ ಮಾರಾಟ ಮಾಡಿರುವ ಘಟನೆ ನಡೆದಿದೆ.

ಚಂದ್ರಾಪುರ ಜಿಲ್ಲೆಯ ರೈತ ರೋಶನ್ ಸದಾಶಿವ್ ಕುಡೆ, ಕೃಷಿಯಲ್ಲಿ ನಿರಂತರವಾಗಿ ನಷ್ಟ ಅನುಭವಿಸಿದ್ದು, ಡೈರಿ ವ್ಯವಹಾರ ಆರಂಭಿಸಲು ನಿರ್ಧರಿಸಿದ್ದಾರೆ. ಅದಕ್ಕಾಗಿ ಅನೇಕ ಸಾಲಗಾರರಿಂದ 1 ಲಕ್ಷ ರೂ. ಸಾಲ ತೆಗೆದುಕೊಂಡಿದ್ದಾರೆ. ಆದರೆ, ಅವರು ಖರೀದಿಸಿದ್ದ ಹಸುಗಳು ಸಾವನ್ನಪ್ಪಿದ್ದವು. ಬೆಳೆ ನಷ್ಟ ಆಗಿದ್ದರಿಂದ ಸಾಲದ ಸಮಸ್ಯೆ ದಿನದಿಂದ ದಿನಕ್ಕೆ ಬಿಗಡಾಯಿಸಿತು. ಸಾಲ ಕೊಟ್ಟವರು ಕುಡೆ ಹಾಗೂ ಅವರ ಕುಟುಂಬಕ್ಕೆ ಕಿರುಕುಳ ನೀಡಲು ಆರಂಭಿಸಿದ್ದಾರೆ. ತದನಂತರ ತನ್ನ ಜಮೀನು, ಟ್ರಾಕ್ಟರ್ ಮತ್ತಿತರ ಮನೆಯಲ್ಲಿದ್ದ ಮೌಲ್ಯಯುತ ವಸ್ತುಗಳನ್ನು ಮಾರಾಟ ಮಾಡಿದರು. ಆದರೆ, ಅದು ಸಾಕಾಗಿಲ್ಲ. ಕಿಡ್ನಿ ಮಾರಾಟ ಮಾಡುವಂತೆ ಸಾಲಕೊಟ್ಟಿದ್ದ ವ್ಯಕ್ತಿಯೊಬ್ಬ ಸಲಹೆ ನೀಡಿದ್ದಾನೆ. ತದನಂತರ ಕಾಂಬೋಡಿಯಾಗೆ ತೆರಳಿ, ಕಿಡ್ನಿ ತೆಗೆಸಿದ್ದು, ರೂ.8 ಲಕ್ಷಕ್ಕೆ ಮಾರಾಟ ಮಾಡಿದ್ದಾರೆ.

ವಿಮಾನದಲ್ಲಿ ಮಹಿಳಾ ಸಿಬ್ಬಂದಿಗೆ ಅನುಚಿತವಾಗಿ ಸ್ಪರ್ಶಿಸಿದ ವೃದ್ಧ ಪ್ರಯಾಣಿಕನ ವಿರುದ್ಧ ಕೇಸ್ ದಾಖಲು



ಹೈದರಾಬಾದ್: ಸೌದಿ ಅರೇಬಿಯಾದ ದಮ್ಮಾಮ್‌ನಿಂದ ಹೈದರಾಬಾದ್‌ಗೆ ಆಗಮಿಸುತ್ತಿದ್ದ ವಿಮಾನದಲ್ಲಿ ಮಹಿಳಾ ಸಿಬ್ಬಂದಿಯೊಬ್ಬರಿಗೆ ಅನುಚಿತವಾಗಿ ಸ್ಪರ್ಶಿಸಿದ ಆರೋಪದ ಮೇಲೆ ವೃದ್ಧ ಪ್ರಯಾಣಿಕರೊಬ್ಬರ ವಿರುದ್ಧ ಹೈದರಾಬಾದ್ ನಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ವಿಮಾನ ಇಲ್ಲಿಗೆ ಬಂದ ನಂತರ ಕ್ಯಾಬಿನ್ ಸಿಬ್ಬಂದಿ ಡಿ.13 ರಂದು ಸುಮಾರು 60 ವರ್ಷ ವಯಸ್ಸಿನ ಪ್ರಯಾಣಿಕನ ವಿರುದ್ಧ ಆರ್‌ಜಿಐ ವಿಮಾನ ನಿಲ್ದಾಣ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಆದರೆ, ಪ್ರಯಾಣಿಕ ತಾನು ಉದ್ದೇಶಪೂರ್ವಕವಾಗಿ ಈ ದುಷ್ಕೃತ್ಯವನ್ನು ಎಸಗಿಲ್ಲ. ಆಕಸ್ಮಿಕವಾಗಿ ಟಚ್ ಆಗಿದೆ ಎಂದು ಹೇಳಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಮಹಿಳಾ ಸಿಬ್ಬಂದಿಯ ದೂರಿನ ಆಧಾರದ ಮೇಲೆ ಬಿಎನ್‌ಎಸ್‌ನ ಸಂಬಂಧಿತ ವಿಭಾಗಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಮತ್ತು ಆ ಪ್ರಯಾಣಿಕರಿಗೆ ನೋಟಿಸ್ ನೀಡಲಾಗಿದೆ. ಈ ಕುರಿತು ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಡಿ.20ರಿಂದ ಬೆಂಗಳೂರಿನಲ್ಲಿ ಗ್ರಾ.ಪಂ ನೌಕರರ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ



ಗ್ರಾಮ ಪಂಚಾಯಿತಿ ಮುಂಭಾಗದಲ್ಲಿ ಗ್ರಾ.ಪಂ. ನೌಕರರು ಪ್ರತಿಭಟನೆ ನಡೆಸಿ ಕರಪತ್ರ ಬಿಡುಗಡೆಗೊಳಿಸಿದರು.

ಸುಂಟಿಕೊಪ್ಪ, ಡಿ.16–ಗ್ರಾಮ ಪಂಚಾಯಿತಿ ನೌಕರರ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಬೆಂಗಳೂರಿನಲ್ಲಿ ಡಿ.20ರಿಂದ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ನಡೆಸಲಾಗುತ್ತದೆ ಎಂದು ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಪಿ.ಆರ್.ಭರತ್ ಹೇಳಿದ್ದಾರೆ.

ಸುಂಟಿಕೊಪ್ಪ ಗ್ರಾಪಂ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿ ಕರಪತ್ರ ಬಿಡುಗಡೆ ಮಾಡಿ ಮಾತನಾಡಿದ ಅವರು, ರಾಜ್ಯದಲ್ಲಿ ಸು. 36 ಸಾವಿರ ನೌಕರರಿದ್ದು, 17 ಪ್ರಮುಖ ಬೇಡಿಕೆಗಳಿಗಾಗಿ ನಿರುತರ ಹೋರಾಟ ನಡೆಸಿಕೊಂಡು ಬಂದಿದ್ದು, ಕೆಲ ಬೇಡಿಕೆಗಳು ಈಡೇರಿದ್ದರೂ ಕೂಡ ಪ್ರಸ್ತುತ ಬೆಲೆ ಏರಿಕೆ ಆಧಾರದಲ್ಲಿ ಕನಿಷ್ಠ ವೇತನವನ್ನು ರೂ. 36 ಸಾವಿರಕ್ಕೆ ನಿಗಧಿ ಮಾಡಬೇಕು, ಇದನ್ನೇ ಮಾನದಂಡವಾಗಿ ಇಟ್ಟುಕೊಂಡು ವಾರ್ಷಿಕ ವರಮಾನ ಹೆಚ್ಚು ಮಾಡಲು ಒತ್ತಾಯಿಸಿ ಕಾರ್ಮಿಕರ ಬಿಪಿಎಲ್ ಕಾರ್ಡ್ ರದ್ದು ಪಡಿಸದಂತೆ ಒತ್ತಾಯಿಸಿ ಹೋರಾಟ ನಡೆಸಲಾಗುವುದು ಎಂದು ಹೇಳಿದರು.

ಸೇವಾ ಹಿರಿತನದ ಆಧಾರದಲ್ಲಿ ವೇತನ ನಿಗಧಿಪಡಿಸಬೇಕು. ಸ್ವಚ್ಛವಾಹಿನಿ ನೌಕರರನ್ನು ಪಂಚಾಯಿತಿ ನೌಕರರೆಂದು ಪರಿಗಣಿಸಬೇಕು. ನಿವೃತ್ತಿ ನಂತರ ರೂ. 10 ಲಕ್ಷ ಇಡುಗಂಟು ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮುಖ್ಯಮಂತ್ರಿಗಳ ನಿವಾಸಕ್ಕೆ ಮುತ್ತಿಗೆ ಹಾಕಿ ಹೋರಾಟ ನಡೆಸಲಾಗುವುದು ಎಂದು ಅವರು ಹೇಳಿದರು.

ಕೆಲ ಗ್ರಾ.ಪಂ.ಗಳಲ್ಲಿ ಸಿಬ್ಬಂದಿಗಳನ್ನು ನೇಮಿಸಿಕೊಳ್ಳಲು ಆದೇಶವಿದ್ದರೂ ನೇಮಿಸಿಕೊಳ್ಳುತ್ತಿಲ್ಲ. ಪಂಚಾಯಿತಿ ಸ್ವಚ್ಛತಾ ನೌಕರರು ಹಾಗೂ ಪಂಚಾಯಿತಿ ನೌಕರರನ್ನು ಖಾಯಂಗೊಳಿಸಲು ಜಿ.ಪಂ. ಸಿಇಓಗೆ ಅವಕಾಶವಿದ್ದರೂ ಆದೇಶ ಪ್ರತಿಗಳಿಗೆ ಸಹಿ ಮಾಡಿಲ್ಲ. ಈ ಬಗ್ಗೆಯೂ ಮುಂದಿನ ವಾರದಲ್ಲಿ ಅವರ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ತಿಳಿಸಿದರು. ರಂಗಸ್ವಾಮಿ, ಗಾಯತ್ರಿ, ಮಣಿಕಂಠ, ಮುನಿಸ್ವಾಮಿ, ರಾಮಚಂದ್ರ, ವಿಶ್ವ, ರವಿ, ರಾಜ, ಮುರುಗೇಶ್, ರಮೇಶ, ಚಂದ್ರಮಣಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಇಂದು ಗುಂಡಿಗೆರೆ ಶಾಲೆಯಲ್ಲಿ ಚಿತ್ರಕಲಾ ಸ್ಪರ್ಧೆ



ನಾಪೋಕ್ಲು, ಡಿ.16 (ದುಗ್ಗಳ)–ರಾಜ್ಯ ಮಕ್ಕಳ ಸಾಹಿತ್ಯ ಪ'ರಿಷ'ತ್, ವಿರಾಜ ಪೇಟೆ ತಾಲೂಕು ಘಟಕದ ವತಿಯಿಂದ ನಾಳೆ (ಡಿ.17) ಬೆಳಿಗ್ಗೆ 11 ಗಂಟೆಗೆ ಕೆದ ಮುಳ್ಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗುಂಡಿಗೆರೆ ಸರ್ಕಾರಿ ಶಾಲೆಯಲ್ಲಿ, ಸ್ಥಳೀಯ ಶಾಲಾ ಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ಕೇಂದ್ರ ಸಮಿತಿ ನಿರ್ದೇಶನದಲ್ಲಿ, ಪರಿಷತ್ತಿನ ಜಿಲ್ಲಾ ಘಟಕದ ಸಹಕಾರದೊಂದಿಗೆ, ತಾಲೂಕು ಅಧ್ಯಕ್ಷ ಮುಕ್ಕಾಟಿರ ಕಾವೇರಮ್ಮ ಕರುಂಬಯ್ಯರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಪರಿಷತ್ತಿನ ಜಿಲ್ಲಾಧ್ಯಕ್ಷ ಚಾಮೆರ ದಿನೇಶ್ ಬೆಳ್ಯಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕರಿನೆರವಂಡ ಡ್ಯಾನಿ ಕುಶಾಲಪ್ಪ, ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಎಂ.ಎಂ. ಇಸ್ಮಾಯಿಲ್, ಶಾಲಾ ಮುಖ್ಯ ಶಿಕ್ಷಕಿ ಹೆಚ್.ಜಿ.ಸವಿತಾ, ಜಿಲ್ಲಾ ಹಾಗೂ ತಾಲೂಕು ಸಮಿತಿ ಸದಸ್ಯರು ಭಾಗ ವಹಿಸಲಿದ್ದಾರೆ ಎಂದು ಪರಿಷತ್ತಿನ ಪ್ರಕಟಣೆ ತಿಳಿಸಿದೆ.

ಕಾಫಿ ತೋಟದಲ್ಲಿ ಹುಲಿ ಕಳೇಬರ ಪತ್ತೆ



ಕಾಫಿ ತೋಟದಲ್ಲಿ ಪತ್ತೆಯಾದ ಹುಲಿಯ ಕಳೇಬರ.

ಮಡಿಕೇರಿ,ಡಿ.16– ಕಾಫಿ ತೋಟದ ಒಳಭಾಗ ಅಂದಾಜು 8 ವರ್ಷ ಪ್ರಾಯದ ಗಂಡು ಹುಲಿಯೊಂದು ಮೃತಪಟ್ಟಿರುವ ಘಟನೆ ಕುಶಾಲನಗರ ತಾಲೂಕು ಶ್ರೀಮಂಗಲ ಗ್ರಾಮ ಚೆಟ್ಟಳ್ಳಿಯಲ್ಲಿ ಸಂಭವಿಸಿದೆ.

ಚೆಟ್ಟಳ್ಳಿ ಗ್ರಾಮದ ನಿವಾಸಿ ಕೆಚ್ಚೆಟ್ಟಿರ ಡಿಕ್ಕಿ ಅಪ್ಪಯ್ಯ ಎಂಬವರಿಗೆ ಸೇರಿದ ವಿಷ್ಣು ಮಾಯ ಕಾಫಿ ತೋಟದೊಳಗಿನ ಬೇಲಿ ಬದಿಯಲ್ಲಿ ಹುಲಿಯ ಕಳೇಬರ ಪತ್ತೆಯಾಗಿದ್ದು, ಕುತ್ತಿಗೆ ಭಾಗ ಉರುಳಿಗೆ ಸಿಲುಕಿ ಆಳ ಗಾಯದಿಂದಾಗಿ ಹುಲಿ ಮೃತಪಟ್ಟಿರುವ ಶಂಕೆ ವ್ಯಕ್ತವಾಗಿದೆ. ತೋಟಕ್ಕೆ ತೆರಳಿದ್ದ ಕಾರ್ಮಿಕರು ಹುಲಿಯ ಮೃತ ದೇಹ ಕಂಡು ತೋಟದ ಮಾಲೀಕರಿಗೆ ಮಾಹಿತಿ ನೀಡಿದರು.

ತೋಟದ ಮಾಲೀಕರು ಅರಣ್ಯ ಇಲಾಖೆಗೆ ವಿಚಾರ ತಿಳಿಸಿದ ಹಿನ್ನೆಲೆಯಲ್ಲಿ ಡಿಎಫ್‌ಓ ಅಭಿಷೇಕ್, ಎಸಿಎಫ್ ಎ.ಎ. ಗೋಪಾಲ್, ವಲಯ ಅರಣ್ಯಾಧಿಕಾರಿ ರಕ್ಷಿತ್, ವೈದ್ಯಾಧಿಕಾರಿಗಳಾದ ಡಾ. ಮುಜೀಬ್, ಡಾ.ಸಂಜೀವ್ ಆರ್.ಸಿಂಧೆ, ಮೀನುಕೊಲ್ಲಿ ಉಪವಲಯಾಧಿಕಾರಿ ಸಚಿನ್ ಲಿಂಬಾಳ್‌ಕರ್, ಗಸ್ತು ವನಪಾಲಕ ನಾಗರಾಜು, ಅರಣ್ಯ ಇಲಾಖೆ ಸಿಬ್ಬಂದಿ ವರ್ಗ ಮತ್ತು ಆರ್‌ಆರ್‌ಟಿ ತಂಡ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದರು.

ಚೆಟ್ಟಳ್ಳಿ ಪೊಲೀಸ್ ಠಾಣಾ ಎಎಸ್‌ಐ ದಿನೇಶ್ ಮತ್ತು ಪೊಲೀಸ್ ಶ್ವಾನದಳ ತಂಡ ಕೂಡ ಸ್ಥಳ ಪರಿಶೀಲಿಸಿತು. ಘಟನಾ ಸ್ಥಳದ ಮಹಜರು ನಡೆಸಿ ಸಂಜೆ ವೇಳೆ ಹುಲಿಯ ಕಳೇಬರವನ್ನು ಆನೆಕಾಡು ಮೀಸಲು ಅರಣ್ಯಕ್ಕೆ ಕೊಂಡೊಯ್ದು ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಕಳೇಬರದ ಅಂತ್ಯಕ್ರಿಯೆ ನಡೆಸಲಾಯಿತು. ಮರಣೋತ್ತರ ಪರೀಕ್ಷೆ ವರದಿ ಬಂದ ಬಳಿಕ ಹುಲಿ ಸಾವಿಗೆ ನಿಖರ ಕಾರಣ ತಿಳಿಯಲಿದೆ ಎಂದು ಅರಣ್ಯ ಇಲಾಖಾಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸೋಮವಾರಪೇಟೆ ಸುತ್ತಮುತ್ತ ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ, ಡಿ.16–ಸೋಮವಾರಪೇಟೆ ವಿದ್ಯುತ್ ವಿತರಣಾ ಉಪ ಕೇಂದ್ರದಿಂದ ಹೊರಹೊಮ್ಮುವ ಫೀಡರ್ ನಿರ್ವಾಹಣೆ ಕಾಮಗಾರಿ ನಡೆಸುವುದರಿಂದ ಡಿ. 18ರ ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಬಿಳಿರಕೊಪ್ಪ, ಮಟ್ನಳ್ಳಿ, ಕಿಬ್ಬೆಟ್ಟ, ಅಯ್ಯಪ್ಪ ಕಾಲೋನಿ, ದೊಡ್ಡಹನಕೋಡು, ಗೆಜ್ಜೆಹನಕೋಡು, ಕಾಡು ಮನೆ, ಚಿಕ್ಕತೋಳೂರು, ಕಾಗಡೀಕಟ್ಟೆ, ದೊಡ್ಡಮಳ್ತೆ, ಒಳಗುಂದ, ಸುಳಿಮಳ್ತೆ, ಹೊನ್ನಾವಳ್ಳಿ, ಕೂಗೆಕೋಡಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಚಾವಿಸನಿನಿ ಕಾರ್ಯ ಮತ್ತು ಪಾಲನೆ ವಿಭಾಗ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಲೀಕರಿಗೆ ಪರಿಹಾರ ನೀಡಲು ಆಗ್ರಹ

ವಿರಾಜಪೇಟೆ, ಡಿ.16–ರಸ್ತೆ ಅಗಲೀಕರಣ ಕಾಮಗಾರಿ ನೆಪದಲ್ಲಿ ಜನರಿಗೆ ತೊಂದರೆ ಆಗದಂತೆ ಕಾಮಗಾರಿ ನಡೆಸಬೇಕು ಕಟ್ಟಡ ಒಡೆಯುವ ಮಾಲಿಕರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ರಸ್ತೆ ಅವೈಜ್ಞಾನಿಕ ಅಗಲೀಕರಣ ವಿರೋಧಿ ಸಮಿತಿ ಸದಸ್ಯ ಡಾ, ಐ.ಆರ್. ದುರ್ಗಾ ಪ್ರಸಾದ್ ಹೇಳಿದ್ದಾರೆ.

ರಸ್ತೆ ಅಗಲಿಕರಣದ ಬಗ್ಗೆ ಇತ್ತೀಚೆಗೆ ಶಾಸಕರಿಗೆ ಮನವಿ ಸಲ್ಲಿಸಿದಾಗ ಕಟ್ಟಡದ ಮಾಲಿಕರು ಸ್ವ ಇಚ್ಛೆಯಿಂದ ರಸ್ತೆ ಅಗಲೀಕರಣಕ್ಕೆ ಜಾಗ ಬಿಟ್ಟು ಕೊಟ್ಟರೆ ಉತ್ತಮ ಎಂದಿದ್ದರು. ಆದರೆ ಇತ್ತೀಚೆಗೆ ಕಾಂಗ್ರೆಸ್ ಪಕ್ಷದ ಕೆಲವರು ಜನರಲ್ಲಿ ಗೊಂದಲ ಸೃಷ್ಟಿಸಿ ದಾರಿ ತಪ್ಪಿಸುವಂತ ಕೆಲಸ ಮಾಡುತ್ತಿರುವುದು ಸರಿಯಲ್ಲ ಎಂದ ಅವರು, ಈ ಹಿಂದೆ ಬಿಜೆಪಿ ಶಾಸಕರಿದ್ದಾಗಲೂ ಪಟ್ಟಣದ ರಸ್ತೆ ಅಗಲಿ ಕರಣದ ವಿಚಾರ ಪ್ರಸ್ತಾಪವಾಗಿತ್ತು ಅಂದು ನಾವು ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಈಗಲೂ ನ್ಯಾಯಾಲಯದಲ್ಲಿ ಪ್ರಕರಣ ಇದೆ. ರಸ್ತೆ ಅಗಲೀಕರಣಕ್ಕೆ ನಮ್ಮ ವಿರೋಧವಿಲ್ಲ ಆದರೆ ಮನೆ ಕಳೆದು ಕೊಳ್ಳುವವರಿಗೆ ಪರಿಹಾರ ನೀಡುವಂತೆ ಒತ್ತಾಯಿಸುವುದಾಗಿ ಹೇಳಿದರು.

ಪುರಸಭೆ ವ್ಯಾಪ್ತಿಯ ಮುಖ್ಯರಸ್ತೆಗಳಲ್ಲಿ ಬೆಂಗಳೂರು –ಮೈಸೂರಿಗೆ ಹೋಗುವ ರಿದ್ದಾರೆ ಅಂತ ವಾಹನಗಳನ್ನು ಅಡ್ಡದಿಡ್ಡಿ ನಿಲ್ಲಿಸುವ ವಾಹನಗಳನ್ನು ಗುರುತು ಮಾಡಿ ಹೆಚ್ಚು ದಂಡ ವಿಧಿಸಬೇಕು ಎಂದು ವಕೀಲ ಕೆ.ವಿ.ಸುನೀಲ್ ಆಗ್ರಹಿಸಿದರು

ಶಾಮನೂರು ನಿಧನಕ್ಕೆ ಸಂತಾಪ

ವಿರಾಜಪೇಟೆ, ಡಿ.16–ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ನಿಧನದಿಂದ ಧೀಮಂತ ನಾಯಕನನ್ನು ಕಳೆದು ಕೊಂಡಂತಾಗಿದೆ ಎಂದು ಮಹಾಸಭಾದ ವಿರಾಜಪೇಟೆ ಹಾಗೂ ಪೊನ್ನಂಪೇಟೆ ತಾಲೂಕು ಘಟಕದ ಗೌರವ ಅಧ್ಯಕ್ಷರು ಹಾಗೂ ಸಮಾಜ ಬಾಂಧವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕಾರುಗುಂದ ಗೌಡ ಸಮಾಜದಲ್ಲಿ ಅರೆಭಾಷೆ ದಿನಾಚರಣೆ



ಅರೆಭಾಷೆ ದಿನವನ್ನು ಕಡ್ಲೇರ ತುಳಸಿ ಮೋಹನ್ ಉದ್ಘಾಟಿಸಿದರು.

ನಾಪೋಕ್ಲು, ಡಿ.16 (ದುಗ್ಗಳ)– ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ, ಚೇರಂಬಾಣೆ ಗೌಡ ಸಮಾಜ ಮತ್ತು ಗೌಡ ಮಹಿಳಾ ಒಕ್ಕೂಟ ಚೇರಂಬಾಣೆ ಇವರೆಲ್ಲರ ಸಹಯೋಗದಲ್ಲಿ ಕಾರುಗುಂದ ಗೌಡ ಸಮಾಜದಲ್ಲಿ ಅರೆಭಾಷೆ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಸಮಾಜದ ಅಧ್ಯಕ್ಷ ಕೊಡಪಾಲು ಗಣಪತಿ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮವನ್ನು ಚೇರಂಬಾಣೆ ಗೌಡ ಮಹಿಳಾ ಒಕ್ಕೂಟದ ಅಧ್ಯಕ್ಷೆ ಕಡ್ಲೇರ ತುಳಸಿ ಮೋಹನ್ ಉದ್ಘಾಟಿಸಿ ಶುಭಹಾರೈಸಿದರು.

ಮುಖ್ಯ ಭಾಷಣಕಾರರಾಗಿ ಗೌಡ ಸಾಂಸ್ಕೃತಿಕ ಅಕಾಡೆಮಿಯ ಮಾಜಿ ಅಧ್ಯಕ್ಷ ತುಂತಜೆ ವೆಂಕಟೇಶ (ಗಣೇಶ್) ಮಾತನಾಡಿ ಮಾತೃಭಾಷೆ ಉಳಿಯುವುದು ಮಾತೆಯಿಂದ ಹಾಗೂ ಮನೆಯಿಂದ. ಪ್ರತಿ ಮನೆಯಲ್ಲೂ ಮಕ್ಕಳಿಗೆ ಮಾತೃಭಾಷೆಯನ್ನು ಕಲಿಸಿದಲ್ಲಿ ಭಾಷೆ ಉಳಿಯುವುದು. ಹಾಗೆಯೇ ನಮ್ಮ ಸಂಸ್ಕೃತಿ ಸಂಪ್ರದಾಯವನ್ನೂ ಕೈಬಿಡಬಾರದು ಎಂದು ಹೇಳಿದರು.

ಮತ್ತೊಬ್ಬ ಮುಖ್ಯ ಭಾಷಣಗಾರರಾಗಿ ಶಿಕ್ಷಕಿ ತಳೂರು ಉಷಾಕಾಶಿ ಮಾತನಾಡಿ ಭಾಷೆ, ಸಂಸ್ಕೃತಿಯನ್ನು ಮರೆತರೆ ಆ ಜನಾಂಗವನ್ನು ಮಾರಿ ಕೊಂಡಂತೆ. ಆದ್ದರಿಂದ ಆಯಾ ಜನಾಂಗಕ್ಕೆ ಸಂಬಂಧಪಟ್ಟ ಭಾಷೆ, ಉಡುಪು ಪದ್ದತಿ ಪರಂಪರೆಯನ್ನು ಪೋಷಣೆ ಮಾಡಬೇಕು ಎಂದರು. ಪ್ರತಿಯೊಂದು ಸಾಂಪ್ರದಾಯಿಕ ಆಚರಣೆಗಳ ಬಗ್ಗೆ ಯುವ ಜನತೆ ಅರಿತು ಬಾಳಬೇಕು ಇದಕ್ಕಾಗಿ ಸಮಾಜಗಳ ಮೂಲಕ ಕಾರ್ಯಾಗಾರ ನಡೆಯಬೇಕು ಎಂದರು. ಅಧ್ಯಕ್ಷ ಕೊಡಪಾಲು ಗಣಪತಿ ಮಾತನಾಡಿ, ಮುಂದಿನ ದಿನಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ದೊಡ್ಡ ಮಟ್ಟದಲ್ಲಿ ಹಮ್ಮಿಕೊಳ್ಳಲಾಗುವುದು ಎಂದರು. ಸಮಾಜದ ಉಪಾಧ್ಯಕ್ಷ ಕೇಕಡ ದಿನೇಶ್, ಮಹಿಳಾ ಒಕ್ಕೂಟದ ಉಪಾಧ್ಯಕ್ಷೆ ಹೊಸೊಕ್ಲು ಲತಾ ಮೊಣ್ಣಪ್ಪ, ನಡುವಟ್ಟಿರ ಅನಂತ, ಸಮಾಜದ, ಮಹಿಳಾ ಒಕ್ಕೂಟದ ನಿರ್ದೇಶಕರು, ಗ್ರಾಮಸ್ಥರು ಭಾಗವಹಿಸಿದ್ದರು.

ತಿತಿಮತಿಯಲ್ಲಿ ಸಿಎನ್‌ಸಿ ಮಾನವ ಸರಪಳಿ ಪ್ರತಿಭಟನೆ



ಕೊಡವ ಲ್ಯಾಂಡ್‌ಗಾಗಿ ಒತ್ತಾಯಿಸಿ ತಿತಿಮತಿಯಲ್ಲಿ ಸಿಎನ್‌ಸಿ ಮಾನವ ಸರಪಳಿ ಪ್ರತಿಭಟನೆ ನಡೆಸಿತು.

ಮಡಿಕೇರಿ, ಡಿ.16–ಕೊಡವರ ಕುರಿತು ಸುಳ್ಳು ಚರಿತ್ರೆಗಳನ್ನು ಸೃಷ್ಟಿಸುವ ಮೂಲಕ ಕೊಡವ ಸಮುದಾಯದ ನೈಜ ಚರಿತ್ರೆಯನ್ನು ಬುಡಮೇಲು ಮಾಡುವ ಷಡ್ಯಂತ್ರ ನಡೆಯುತ್ತಿದೆ. ಇದರ ವಿರುದ್ಧ ಕೊಡವರು ಜಾಗೃತರಾಗಬೇಕು ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಅಧ್ಯಕ್ಷ ಎನ್.ಯು.ನಾಚಪ್ಪ ಕರೆ ನೀಡಿದ್ದಾರೆ.

ತಿತಿಮತಿಯಲ್ಲಿ ನಡೆದ 22ನೇ ಮಾನವ ಸರಪಳಿ ಚಳವಳಿಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಕೊಡವ ಲ್ಯಾಂಡ್‌ಗಾಗಿ ಒತ್ತಾಯಿಸಿ ಮತ್ತು ಕೊಡವರ ಕುರಿತು ಸುಳ್ಳು ಚರಿತ್ರೆ ಸೃಷ್ಟಿಯ ವಿರುದ್ಧ ಜನವರಿ ತಿಂಗಳಿನಿಂದ ಜಿಲ್ಲೆಯಾದ್ಯಂತ ಜಾಗೃತಿ ಅಭಿಯಾನ ನಡೆಸಲಾಗುವುದು ಎಂದರು.

ಈ ಜನಗಣತಿಯು ಕೊಡವರ ರಾಜಕೀಯ ಸಬಲೀಕರಣ, ಸ್ವಯಂ ನಿರ್ಧಾರದ ಹಕ್ಕಿಗೆ ಮೆಟ್ಟಿಲಾಗಲಿದೆ ಎಂದು ಅಭಿಪ್ರಾಯಪಟ್ಟರು.

ಕಾಣತಂಡ ನವ್ಯಾ ನವೀನ್, ಚೆಪ್ಪುಡಿರ ರಾಮಕೃಷ್ಣ, ಪಾಳೆಂಗಡ ಮನು, ಬೊಳ್ಳಿಮಾಡ ನಂಜಪ್ಪ, ನೆಲ್ಲಮಕ್ಕಡ ವಿವೇಕ್, ಮನೆಯ ಪಂಡ ಬೋಪಣ್ಣ, ಕೊಕ್ಕಂಡ ದಿನೇಶ್, ಕಾಂಡೇರ ಸುರೇಶ್, ಅಜ್ಜಿಕುಟ್ಟೀರ ಲೋಕೇಶ್, ಬೊಟ್ಟಂಗಡ ಗಿರೀಶ್, ಕಿರಿಯಮಾಡ ಶೆರಿನ್, ಕುಪ್ಪಂಡ ರಾಜೀವ್ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಮಕ್ಕಳ ವಾಕ್, ಶ್ರವಣ ಸಮಸ್ಯೆ ಪರಿಹಾರಕ್ಕೆ ಪ್ರಯಾಸ್ ಯೋಜನೆ ರಾಜ್ಯದಲ್ಲೇ ಮಾದರಿ



ಮೈಸೂರಿನ ಆಯುಷ್‌ನ ಪ್ರೊ.ಎಂ.ಸಂದೀಪ್, ಮಗುವಿನ ತಪಾಸಣೆ ಮಾಡುತ್ತಿರುವುದು.

ಚಾಮರಾಜನಗರ, ಡಿ.16–ಮಕ್ಕಳ ವಾಕ್ ಮತ್ತು ಶ್ರವಣ ಸಮಸ್ಯೆಗಳನ್ನು ಗುರುತಿಸಿ ಪರಿಹಾರ ಚಿಕಿತ್ಸೆ ಒದಗಿ ಸುವ ಸಲುವಾಗಿ ಪ್ರಯಾಸ್ ಕಾರ್ಯಕ್ರಮವು ರಾಜ್ಯ ಮಟ್ಟದಲ್ಲಿ ಮಾದರಿ ಕಾರ್ಯಕ್ರಮವಾಗಿ ಮೆಚ್ಚುಗೆ ಪಡೆದಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಹೇಳಿದ್ದಾರೆ.

ತಾಲೂಕಿನ ಸಂತೇಮರಹಳ್ಳಿಯ ಸಮುದಾಯ ಆರೋಗ್ಯ ಕೇಂದ್ರದ ಸಭಾಂಗಣದಲ್ಲಿಂದು ಅಂಗನವಾಡಿ ಮಕ್ಕಳ ವಾಕ್ ಮತ್ತು ಶ್ರವಣ ದ್ವಿತೀಯ ಹಂತದ ತಪಾಸಣಾ ಹಾಗೂ ಪ್ರಯಾಸ್ ಕಾರ್ಯಕ್ರಮಕ್ಕೆ ನೆರವು ನೀಡುತ್ತಿರುವ ಸಂಸ್ಥೆಗಳಿಗೆ ಕೃತಜ್ಞತೆ ಸಲ್ಲಿಸುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಾತು ಬಾರದ ಮತ್ತು ಕಿವಿ ಕೇಳದಿರುವ ಸಮಸ್ಯೆಗಳು ತಡವಾಗಿ ಪತ್ತೆಯಾದರೆ ಮಕ್ಕಳ ಶೈಕ್ಷಣಿಕ ಕಾರ್ಯಕ್ಷಮತೆ ಕ್ಷೀಣಿಸುತ್ತದೆ. ಈ ಸಮಸ್ಯೆಗೆ ಆರಂಭದಲ್ಲಿಯೇ ಗುರುತಿಸಿ ಚಿಕಿತ್ಸೆ ನೀಡದೆ ಹೋದರೆ ಮುಂದೆ ಅನೇಕ ಸವಾಲುಗಳು ಎದುರಾಗುತ್ತದೆ. ಈ ಹಿನ್ನೆಲೆಯಲ್ಲಿ ತಪಾಸಣೆ, ವೈದ್ಯಕೀಯ ಚಿಕಿತ್ಸೆ, ಅಗತ್ಯವಿರುವ ಶ್ರವಣ ಸಾಧನಗಳನ್ನು ಒದಗಿಸುವ ಪ್ರಯಾಸ್ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಸಿಎಸ್‌ಆರ್ ಆರ್ಥಿಕ ನೆರವಿನಿಂದ ಮಾಡಲಾಗುತ್ತಿದೆ ಎಂದರು.

ಜಿಲ್ಲೆಯಲ್ಲಿ ಆರಂಭವಾಗಿರುವ ಪ್ರಯಾಸ್ ಕಾರ್ಯಕ್ರಮ ಇತರೆ ಜಿಲ್ಲೆಗಳಿಗೂ ಮಾದರಿಯಾಗುವಂತಿದ್ದು, ರಾಜ್ಯಮಟ್ಟದಲ್ಲಿ ಮೆಚ್ಚುಗೆ ಪಡೆದಿದೆ. ಮಕ್ಕಳಿಗಷ್ಟೇ ಅಲ್ಲದೆ ಹಿರಿಯ ನಾಗರಿಕರಿಗೂ ಪ್ರಯಾಸ್ ಕಾರ್ಯಕ್ರಮ ವಿಸ್ತರಿಸಲು ಯೋಜಿಸಲಾಗಿದೆ. ಶ್ರವಣ ಮತ್ತು ಮಾತಿನ ಸಮಸ್ಯೆಗಳನ್ನು ಪರಿಹರಿಸಿ ಶ್ರವಣ ಹಾಗೂ ವಾಕ್ ಸಮಸ್ಯೆ ಮುಕ್ತ ಜಿಲ್ಲೆಯನ್ನಾಗಿಸುವುದು ನಮ್ಮ ಮುಂದಿನ ಗುರಿಯಾಗಿದೆ ಎಂದರು.

ಮೈಸೂರಿನ ಆಯುಷ್‌ನ ಪ್ರಭಾರ ನಿರ್ದೇಶಕಿ ಡಾ. ಮಂಜುಳ ಮಾತನಾಡಿ ಜಿಲ್ಲಾಧಿಕಾರಿಗಳ ವಿಶೇಷ ಆಸಕ್ತಿ ಮತ್ತು ಕಾಳಜಿಯಿಂದ ಬಹುಶಃ ದೇಶದಲ್ಲಿಯೇ ಪ್ರಯಾಸ್‌ನಂತಹ ಕಾರ್ಯಕ್ರಮ ಅನುಷ್ಠಾನವಾಗುತ್ತಿರುವುದು ಮೊದಲ ಜಿಲ್ಲೆ ಎನಿಸಿದೆ. ಪೂರ್ವ ಸಿದ್ದತೆಯೊಂದಿಗೆ ಆರಂಭವಾಗಿರುವ ಕಾರ್ಯಕ್ರಮವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಸಲಹೆ ಮಾಡಿದರು.

ಇದೇ ವೇಳೆ ಪ್ರಯಾಸ್ ಯೋಜನೆಗೆ ನೆರವು ನೀಡುತ್ತಿರುವ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ವೈದ್ಯರು, ಸಿಎಸ್.ಆರ್ ಅಡಿ ಆರ್ಥಿಕ ಸಹಾಯ ಒದಗಿಸುತ್ತಿರುವ ಪ್ರತಿನಿಧಿಗಳಾದ ರೋಟರಿ ಕ್ಲಬ್ ಆಫ್ ಮೈಸೂರು ವೆಸ್ಟ್‌ನ ದೇವರಾಜ್, ರುದ್ರೇಶ್, ಷಡಕ್ಷರಸ್ವಾಮಿ, ಕಿರಣ್ ರಾಬರ್ಟ್, ಸ್ಯಾಂ ಚೆರಿಯನ್, ಆಟೋಮೆಟಿಕ್ ಆಕ್ಸೆಲ್ ನ ದಯಾನಂದ್ ಬಿ.ಜಿ, ಇನ್ನಿತರರನ್ನು ಸನ್ಮಾನಿಸಿ ಪ್ರಮಾಣ ಪತ್ರಗಳನ್ನು ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ. ಚಂದ್ರು, ಜಿ.ಪಂ. ಸಿಇಓ ಮೋನಾ ರೋತ್ ವಿತರಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್. ಚಿದಂಬರ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಪ್ರೊ. ಡಾ. ಎಂ. ಸಂದೀಪ್, ಡಾ ಪ್ರೀತ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಮಂಜುನಾಥ, ಕಾರ್ಯಕ್ರಮ ಸಂಯೋಜಕ ಶಿವಸ್ವಾಮಿ, ಸಿಎಸ್‌ಆರ್ ಸಮಾಲೋಚಕ ರಕ್ಷಿತಾ, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕುಮಾರಸ್ವಾಮಿ ಹುಟ್ಟುಹಬ್ಬ

ಚಾಮರಾಜೇಶ್ವರಸ್ವಾಮಿಗೆ ವಿಶೇಷ ಪೂಜೆ



ಕುಮಾರಸ್ವಾಮಿ ಹುಟ್ಟುಹಬ್ಬದ ಅಂಗವಾಗಿ ಜೆಡಿಎಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಅನ್ನ ಸಂತರ್ಪಣೆ ಮಾಡಿದರು.

ಚಾಮರಾಜನಗರ, ಡಿ.16–ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ 66 ನೇ ಹುಟ್ಟುಹಬ್ಬದ ಅಂಗವಾಗಿ ಜೆಡಿಎಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ನಗರದ ಚಾಮರಾಜೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಹೆಚ್.ಡಿ.ಕುಮಾರಸ್ವಾಮಿ ಹೆಸರಿನಲ್ಲಿ ಚಾಮರಾಜೇಶ್ವರಸ್ವಾಮಿಗೆ ಅರ್ಚನೆ ಮಾಡಿಸಿ, ವಿಶೇಷಪೂಜೆ ಸಲ್ಲಿಸಲಾಯಿತು. ಮುಖಂಡ ಅಜಯ್ ಅರಕಲವಾಡಿ ಮಾತನಾಡಿ, ಹೆಚ್.ಡಿ. ಕುಮಾರಸ್ವಾಮಿಗೆ ದೀರ್ಘ ಮತ್ತು ಆರೋಗ್ಯಕರ ಜೀವನ ದಯಪಾಲಿಸಲಿ, ಮತ್ತೆ ಮುಖ್ಯಮಂತ್ರಿಯಾಗಲಿ ಎಂದು ಹಾರೈಸಿ ಚಾಮರಾಜೇಶ್ವರಸ್ವಾಮಿಗೆ ವಿಶೇಷಪೂಜೆ ಸಲ್ಲಿಸಲಾಯಿತು ಎಂದರು.

ಜೆಡಿಎಸ್ ಜಿಲ್ಲಾ ಉಪಾಧ್ಯಕ್ಷ ಮಹೇಶ್ ಗೌಡ, ಎಲ್ಐಸಿ ರಾಜು ಪಣ್ಯದ ಹುಂಡಿ, ಅಜಯ್ ಅರಕಲವಾಡಿ, ನಾಗರಾಜು, ಪಾಪಣ್ಣ ಸುಂದರ್, ಚಿಕ್ಕಣ್ಣ, ಡಿ.ಎನ್.ಉಷಾ, ಸುಬ್ಬಲಕ್ಷ್ಮಮ್ಮ, ರಘುಪತಿ, ಕರ್ನಾಟಕ ಸೇನಾಪಡೆ ಅಧ್ಯಕ್ಷ ಶ್ರೀನಿವಾಸಗೌಡ, ಸೈಯದ್ ಅಕ್ರಂ ಹಾಜರಿದ್ದರು.

ಕೊಳ್ಳೇಗಾಲದಲ್ಲಿ ಹೆಚ್‌ಡಿಕೆ ಹುಟ್ಟುಹಬ್ಬ ಆಚರಣೆ



ಕೊಳ್ಳೇಗಾಲದಲ್ಲಿ ಕುಮಾರಸ್ವಾಮಿ ಹುಟ್ಟುಹಬ್ಬವನ್ನು ಜೆಡಿಎಸ್ ಕಾರ್ಯಕರ್ತರು ಸಿಹಿ ತಿನ್ನಿಸುವ ಮೂಲಕ ಆಚರಿಸಿದರು.

ಕೊಳ್ಳೇಗಾಲ, ಡಿ.16–ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಯವರ 66 ನೇ ವರ್ಷದ ಹುಟ್ಟುಹಬ್ಬವನ್ನು ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರು ಮಂಗಳವಾರ ಆಚರಿಸಿದರು.

ಪಟ್ಟಣದ ಬಸ್ ನಿಲ್ದಾಣದ ಗಣಪತಿ ದೇವಸ್ಥಾನದಲ್ಲಿ ಕುಮಾರಸ್ವಾಮಿರವರ ಹೆಸರಿನಲ್ಲಿ ಅರ್ಚನೆ ಮಾಡಿಸಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಕಾರ್ಯಕರ್ತರಿಗೆ, ಗಣ್ಯರಿಗೆ ಸಿಹಿ ತಿನಿಸುವ ಮೂಲಕ ಹುಟ್ಟುಹಬ್ಬ ಆಚರಿಸಲಾಯಿತು. ಜೆಡಿಎಸ್ ತಾಲೂಕು ಕ್ಷೇತ್ರಾಧ್ಯಕ್ಷ ಬಿ.ಪುಟ್ಟಸ್ವಾಮಿ ಮಾತನಾಡಿ ಕುಮಾರಸ್ವಾಮಿ ಅವರು ನಾಡಿನ ಧೀಮಂತ, ಜನಪರ ಮುಖ್ಯಮಂತ್ರಿಯಾಗಿದ್ದವರು, ಅವರು ರೈತಪರ ಹಾಗೂ ಜನಪರ ಕಾಳಜಿಯುಳ್ಳ ನಾಯಕರೆಂದು ಹೊಗಳಿದರು. ಜೆಡಿಎಸ್ ಮುಖಂಡ ರಾಚಯ್ಯ, ಶಶಿಶೇಖರ್, ರವಿ ಅಂಬಳೆ, ಜಯಮರಿ, ಸೋಮಣ್ಣ ಯರಿಯೂರು, ಯಳಂದೂರು ಅಧ್ಯಕ್ಷ ಕೆಸ್ತೂರು ಆನಂದ್, ಪ್ರಧಾನ ಕಾರ್ಯದರ್ಶಿ ಅಂಬಳೆ ರವೀಶ್, ಕೆಸ್ತೂರು ಮರಪ್ಪ, ವೈ.ಕೆ.ಮೋಳೆ ಸೋಮಣ್ಣ, ಗುಂಬಳ್ಳಿ ರಾಮದಾಸನಾಯಕ, ನಟರಾಜು ಕೊಮಾರನಪುರ, ಮಾದೇಶ್.ಕೆ, ಹೊಂಗನೂರು ರವಿ, ರಾಜು, ಯಳಂದೂರು ಟೌನ್ ಚಂದ್ರು, ಗುರುಲಿಂಗು, ಕಟ್ನವಾಡಿ, ಬಸವಯ್ಯ, ಸುರಾಪುರ ನಾಗೇಂದ್ರ ಇನ್ನಿತರಿದ್ದರು

ಸಮುದಾಯದ ಆಸ್ತಿಗಳನ್ನು ರಕ್ಷಿಸಲು ಮುಂದಾಗಿ



ಪಟ್ಟಣದ ತಾಪಂ ಸಭಾಂಗಣದಲ್ಲಿ ನಡೆದ ಸಮುದಾಯ ಆಸ್ತಿಗಳ ಕುರಿತ ತರಬೇತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಕೃಷಿ, ಪಶು ಇಲಾಖೆಯ ಸಿಬ್ಬಂದಿ.

ಯಳಂದೂರು, ಡಿ.16 (ವಿ.ನಾಗರಾಜು)–ಸಮುದಾಯದ ಆಸ್ತಿಗಳಾದ ಕೆರೆ, ಕಾಲುವೆ, ಸ್ಮಶಾನ, ಬಾವಿ, ರಸ್ತೆ ಮತ್ತು ಗೋಮಾಳಗಳನ್ನು ಕಾಪಾಡುವಲ್ಲಿ ಸಮುದಾಯದ ಪಾತ್ರ ಅತ್ಯಂತ ಪ್ರಮುಖವಾಗಿರುತ್ತದೆ ಎಂದು ತಾ.ಪಂ. ಸಹಾಯಕ ನಿರ್ದೇಶಕ ಕೆ.ಎಂ. ರವೀಂದ್ರ ತಿಳಿಸಿದರು.

ಪಟ್ಟಣದ ತಾ.ಪಂ. ಸಭಾಂಗಣದಲ್ಲಿ ಇತ್ತೀಚೆಗೆ ನಡೆದ ಸಮುದಾಯ ಆಸ್ತಿಗಳ ಕುರಿತ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ದೇಶ–ವಿದೇಶಗಳಲ್ಲಿ ಪರಿಸರ ರಕ್ಷಣೆಯಲ್ಲಿ ಸಾಧನೆ ಮಾಡಿರುವ ಸಂಪನ್ಮೂಲ ವ್ಯಕ್ತಿಗಳಿಂದ ಅಂತರ್ಜಾಲದ ಮೂಲಕ ಸಮುದಾಯ ಆಸ್ತಿಗಳನ್ನು ರಕ್ಷಿಸುವ ಸಲುವಾಗಿ ತರಬೇತಿಯನ್ನು ನೀಡಲಾಗುತ್ತಿದೆ. ಇಲಾಖೆಯ ಜೊತೆಗೆ ಸಮುದಾಯ ಕೈಜೋಡಿಸುವ ಮೂಲಕ ಸಮುದಾಯ ಆಸ್ತಿಗಳನ್ನು ರಕ್ಷಿಸಬೇಕಾಗಿದೆ ಎಂದು ತಿಳಿಸಿದರು.

ಎನ್‌ಆರ್‌ಎಲ್‌ಎಂ. ವಿಭಾಗದ ತಾಲೂಕು ಕಾರ್ಯಕ್ರಮ ವ್ಯವಸ್ಥಾಪಕ ಶ್ರೀಕಾಂತ್ ಮಾತನಾಡಿ, ಸರ್ಕಾರದ ಮಾರ್ಗಸೂಚಿಯನ್ವಯ ಸಮುದಾಯದ ಮಹಿಳೆಯರನ್ನು ಸಂಘಟಿಸಿ, ಸ್ವಯಂ ಉದ್ಯೋಗದ ಕುರಿತು ತರಬೇತಿಗಳನ್ನು ನೀಡಲಾಗಿದೆ ಎಂದು ತಿಳಿಸಿದರು. ತಾಲೂಕು ವ್ಯವಸ್ಥಾಪಕ ರವಿ, ಎಫ್.ಇ.ಎಸ್. ಸಂಸ್ಥೆಯ ಜಿಲ್ಲಾ ಸಂಯೋಜಕ ಶಾಂತರಾಜು ಸೇರಿದಂತೆ ವಿವಿಧ ಗ್ರಾಪಂಗಳ ಎಂ.ಬಿ.ಕೆ.ಗಳು, ಎಲ್.ಸಿ.ಆರ್.ಪಿ.ಗಳು, ಕೃಷಿ ಮತ್ತು ಪಶು ಇಲಾಖೆ ಸಿಬ್ಬಂದಿ ಮತ್ತಿತರರು ಹಾಜರಿದ್ದರು

ಕ್ರಿಕೆಟ್ ಪಂದ್ಯಾವಳಿಯಲ್ಲಿ ಬೇಗೂರು ತಂಡಕ್ಕೆ ಕಪ್

ಬೇಗೂರು, ಡಿ.16–ಸಮೀಪದ ರಾಘವಾಪುರ ಗ್ರಾಮದಲ್ಲಿ ಡಾ.ನವೀನ್ ಮೌರ್ಯ ಅಭಿಮಾನಿ ಬಳಗ ಆಯೋಜಿಸಿದ ಜೈ ಭೀಮ್ ರೆವಲ್ಯೂಷನರಿ ಕ್ರಿಕೆಟ್ ಪಂದ್ಯಾವಳಿಯಲ್ಲಿ ಬೇಗೂರು ಗ್ರಾಮದ ಲಯನ್ಸ್ ತಂಡ ಪ್ರಥಮ ಸ್ಥಾನ ಪಡೆದು ಕಪ್ ಮುಡಿಗೇರಿಸಿಕೊಂಡಿದೆ.

ರಾಘವಾಪುರ ಗ್ರಾಮದಲ್ಲಿ 75ನೇ ಸಂವಿಧಾನ ದಿನಾಚರಣೆ ಅಂಗವಾಗಿ 2 ದಿನಗಳಿಂದ ನಡೆದ ಜೈ ಭೀಮ್ ರೆವಲ್ಯೂಷನರಿ ಕ್ರಿಕೆಟ್ ಪಂದ್ಯಾವಳಿಯಲ್ಲಿ ಬೇಗೂರು ಲಯನ್ಸ್ ತಂಡ ಗೆಲುವು ಸಾಧಿಸಿ ಪ್ರಥಮ ಸ್ಥಾನ ಮತ್ತು ಕಪ್ ತನ್ನದಾಗಿಸಿಕೊಂಡಿದೆ. ದ್ವಿತೀಯ (ರನ್ನರ್ ಅಪ್) ಸ್ಥಾನವನ್ನು ಡೆಂಜರ್ ಬಾಯ್ಸ್ ರಾಘವಾಪುರ ತಂಡ ಪಡೆಯಿತು. ಸರಣಿಯ ಉತ್ತಮ ಬ್ಯಾಟ್ಸ್‌ಮನ್ ಆಗಿ ನಾಗಣ್ಣ ಕನ್ವಿ ಮತ್ತು ಉತ್ತಮ ಬೌಲರ್ ಆಗಿ ರವಿ ಗುಬ್ಬಿ ಆಯ್ಕೆಯಾದರು.

ಗೆಲುವು ಸಾಧಿಸಿದ ತಂಡಗಳಿಗೆ ಆಯೋಜಕ ಯುವ ವಿಜ್ಞಾನಿ ಡಾ.ನವೀನ್ ಮೌರ್ಯ ಪ್ರಶಸ್ತಿ ಮತ್ತು ಕಪ್ ನೀಡಿ ಗ್ರಾಮೀಣ ಪ್ರದೇಶದ ಕ್ರೀಡಾಪಟುಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ರಾಘವಾಪುರ ಗ್ರಾಮದಲ್ಲಿ ಜೈ ಭೀಮ್ ರೆವಲ್ಯೂಷನರಿ ಪಂದ್ಯಾವಳಿ ಆಯೋಜನೆ ಮಾಡಲಾಗಿದೆ.

ಬಿಜೆಪಿ ನಗರ ಮಂಡಲಕ್ಕೆ ಪದಾಧಿಕಾರಿಗಳ ನೇಮಕ



ಪರಮೇಶ್



ಸುಂದ್ರಪ್ಪ



ಮಧುಚಂದ್ರ

ಕೊಳ್ಳೇಗಾಲ, ಡಿ.16–ಕೊಳ್ಳೇಗಾಲ ನಗರ ಮಂಡಲಕ್ಕೆ ಬಿಜೆಪಿಯ ನೂತನ ಅಧ್ಯಕ್ಷ ಹಾಗೂ ಕಾರ್ಯದರ್ಶಿಗಳಾಗಿ ಮೂವರನ್ನು ನೇಮಿಸಿ ಜಿಲ್ಲಾಧ್ಯಕ್ಷರಾದ ನಿರಂಜನ್ ಕುಮಾರ್ ಆದೇಶಿಸಿದ್ದಾರೆ ನಗರ ಮಂಡಲ ಅಧ್ಯಕ್ಷರಾಗಿ ನಗರಸಭೆ ಮಾಜಿ ಸದಸ್ಯ ಚಿಂತು ಪರಮೇಶ್, ನಾಮ ನಿರ್ದೇಶಿತ ಮಾಜಿ ಸದಸ್ಯ ಮದುಚಂದ್ರ, ವೀರಶೈವ ಸಮಾಜದ ಮುಖಂಡ ಮುಡಿಗುಂಡ ಸುಂದ್ರಪ್ಪ ಅವರನ್ನು ನಗರ ಘಟಕದ ಪ್ರಧಾನ ಕಾರ್ಯದರ್ಶಿಗಳಾಗಿ ನೇಮಿಸಿದ್ದಾರೆ.

ನಗರಸಭೆ ಮಾಜಿ ಸದಸ್ಯ ಚಿಂತು ಪರಮೇಶ್ ಮಾತನಾಡಿ ನನ್ನನ್ನು ನಗರ ಮಂಡಲಕ್ಕೆ ಅಧ್ಯಕ್ಷರಾಗಿ ನೇಮಿಸಿರುವುದು ಸಂತಸ ತಂದಿದ್ದು ಜವಾಬ್ದಾರಿ ಸಹಾ ಹೆಚ್ಚಿದೆ. ಮುಂಬರುವ ಚುನಾವಣೆಯಲ್ಲಿ ಪಕ್ಷ ಸಂಘಟನೆ, ಅಭ್ಯರ್ಥಿಗಳ ಗೆಲುವಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವೆ ಎಂದರು

ಶಫಿವುಲ್ಲಾ ಖಾನ್ ನಿಧನ



ಯಳಂದೂರು, ಡಿ.16–ಪಟ್ಟಣದ ಬಳೇಪೇಟೆಯ 10ನೇ ವಾರ್ಡ್‌ನ ನಿವಾಸಿ ಶಫಿವುಲ್ಲಾ ಖಾನ್ (75) ಮಂಗಳವಾರ ರಾತ್ರಿ ಅನಾರೋಗ್ಯದಿಂದ ನಿಧನರಾದರು.

ಮೃತರಿಗೆ ಪತ್ನಿ, ಪತ್ರಕರ್ತ ಫೈರೋಜ್ ಖಾನ್ ಸೇರಿದಂತೆ ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ, ಬುಧವಾರ ಪಟ್ಟಣದ ಈದ್ಗಾ ಮೈದಾನದಲ್ಲಿ ಮಧ್ಯಾಹ್ನ ಅಂತ್ಯಕ್ರಿಯೆ ಜರುಗಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್‌ಡಿಕೆಗೆ ಹುಟ್ಟುಹಬ್ಬದ ಶುಭಾಶಯ



ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮನ್ನು ಭೇಟಿಯಾದ ಕೇಂದ್ರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದರು.



ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದರು.



ಮೈಸೂರಿಗೆ ಮಂಗಳವಾರ ಆಗಮಿಸಿದ ಕೇಂದ್ರ ಸಚಿವ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಮಾಜಿ ಸಂಸದ ಪ್ರತಾಪ್ ಸಿಂಹ ಹಾಗೂ ಬಿಜೆಪಿ ಚಾಮರಾಜ ಕ್ಷೇತ್ರದ ಅಧ್ಯಕ್ಷ ದಿನೇಶ್‌ಗೌಡ ಸ್ವಾಗತಿಸಿ, ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದರು.




ಮೈಸೂರು ವಿಮಾನ ನಿಲ್ದಾಣದಲ್ಲಿ ತಮಗೆ ಹುಟ್ಟುಹಬ್ಬದ ಶುಭಾಶಯ ಕೋರಿದ ಮಾಜಿ ಸಚಿವ ಸಾ.ರಾ.ಮಹೇಶ್ ಅವರಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಕೇಕ್ ತಿನ್ನಿಸಿದರು. ಈ ವೇಳೆ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಎಂಎಲ್‌ಸಿ ರಮೇಶ್‌ಗೌಡ, ಜಿಪಂ ಮಾಜಿ ಅಧ್ಯಕ್ಷ ದ್ವಾರಕೀಶ್ ಹಾಜರಿದ್ದರು.



ಬೆಂಗಳೂರು ಜೆ.ಪಿ.ನಗರದ ನಿವಾಸದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ ಭೇಟಿಯಾಗಿ, ಹುಟ್ಟುಹಬ್ಬದ ಶುಭಾಶಯ ಕೋರಿದರು.



ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಹುಟ್ಟುಹಬ್ಬದ ಅಂಗವಾಗಿ ಪಡುವಾರಹಳ್ಳಿಯ ಉದ್ಯಾನವನದಲ್ಲಿ ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಎಂ ಭೈರಪ್ಪ ಸಸಿ ನೆಟ್ಟು ಪರಿಸರ ಕಾಳಜಿಯಿಂದ ಶುಭ ಕೋರಿದರು. ಈ ವೇಳೆ ಯಜಮಾನ್ ರಾಮಣ್ಣ, ನಗರಪಾಲಿಕೆಯ ಮಾಜಿ ಸದಸ್ಯರಾದ ಎಂ ಚಿಕ್ಕವೆಂಕಟು, ನಗರ ಬಿಜೆಪಿ ಎಸ್‌ಟಿ ಮೋರ್ಚಾ ಅಧ್ಯಕ್ಷ ಎನ್.ಯೋಗಾನಂದ್, ಪಡುವಾರಹಳ್ಳಿ ಎಂ ರಾಮಕೃಷ್ಣ, ಜನಹಿತ ಸೊಸೈಟಿ ನಿರ್ದೇಶಕ ಎಸ್ ಕೃಷ್ಣಕುಮಾರ್, ರಾಘವ್ ಎಂ ಗೌಡ, ಸಿ.ಸಂತೋಷ್, ಕೇಬಲ್ ಕಿಟ್ಟಿಲಾರಿ ರವಿ,ಛಾಯಾ ಪ್ರಸಾದ್ ಗೋವಿಂದಣ್ಣ, ಕೆ ಗಿರೀಶ್ ಮತ್ತಿತರರು ಇದ್ದಾರೆ.



ಮೈಸೂರು ತಾಲೂಕು ಜಯಪುರ ಗ್ರಾಮದ ಹೊಸಕೆರೆ ಬಡಾವಣೆಯಲ್ಲಿ ಕೆಂಪೇಗೌಡ ಸಂಘದ ವತಿಯಿಂದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹುಟ್ಟುಹಬ್ಬ ಆಚರಿಸಿ, ಸಿಹಿ ಹಂಚಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಬೈರೇಗೌಡ, ಉಪಾಧ್ಯಕ್ಷ ರಮೇಶ್, ಮುಖಂಡರಾದ ಜವರನಾಯಕ, ಎಂ.ನಾಗರಾಜು, ಜಯಪುರ ಗ್ರಾಮ ಘಟಕ ರೈತ ಸಂಘದ ಅಧ್ಯಕ್ಷ ಕಾಳಯ್ಯ ಕೃಷ್ಣೇಗೌಡ, ಕೆಲ್ಲಹಳ್ಳಿ ವೆಂಕಟೇಶ್, ಚಂದ್ರು, ಹೊಸಕೆರೆ ಮಂಜುನಾಥ್, ಪ್ರಗತಿಪರ ರೈತ ಅರುಣ್ ಕುಮಾರ್, ಕಿರಣ್ ಕುಮಾರ್, ರಾಮಣ್ಣ ಸೇರಿದಂತೆ ಸಂಘದ ಪದಾಧಿಕಾರಿಗಳು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

ಐಪಿಎಲ್–2026 ಮಿನಿ ಹರಾಜು


ಆರ್‌ಸಿಬಿಗೆ ಒಲಿದ ವೆಂಕಿ ಅಯ್ಯರ್



ಆರ್‌ಸಿಬಿ ತಂಡದ ಆಟಗಾರರು



ಐಪಿಎಲ್ ಮಿನಿ ಹರಾಜು–2026ರಲ್ಲಿ ಅತಿಹೆಚ್ಚು ಮೊತ್ತಕ್ಕೆ ಖರೀದಿಯಾದ ಕ್ಯಾಮರೋನ್ ಗ್ರೀನ್



ಆರ್‌ಸಿಬಿ ಖರೀದಿಸಿದ ಎಡಗೈ ಬ್ಯಾಟರ್ ವೆಂಕಟೇಶ್ ಅಯ್ಯರ್

ಅಬುಧಾಬಿ, ಡಿ.16(ವಿವಿಹೆಚ್)– 2026ರ ಐಪಿಎಲ್ ಮಿನಿ ಹರಾಜಿನಲ್ಲಿ ದೇಸಿ ಆಟಗಾರ ವೆಂಕಟೇಶ್ ಅಯ್ಯರ್ ಅವರೊಂದಿಗೆ ಒಟ್ಟು 8 ಆಟಗಾರರನ್ನು ಖರೀದಿಸಿರುವ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿ ತಂಡವನ್ನು ಮತ್ತಷ್ಟು ಬಲಪಡಿಸಿದೆ.

ಇಲ್ಲಿನ ಇತಿಹಾದ್ ಹೋಟೆಲ್‌ನಲ್ಲಿ ಮುಂಬರುವ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಸಲುವಾಗಿ ನಡೆದ 2026ರ ಐಪಿಎಲ್ ಮಿನಿ ಹರಾಜು ಪ್ರಕ್ರಿಯೆಯಲ್ಲಿ 16.40 ಕೋಟಿ ರೂ. ಪರ್ಸ್‌ನೊಂದಿಗೆ ಎಂಟ್ರಿಕೊಟ್ಟು, 6 ಭಾರತೀಯ ಮತ್ತು 2 ವಿದೇಶಿ ಆಟಗಾರರನ್ನು ಸೇರಿಸಿಕೊಂಡಿರುವ ಆರ್‌ಸಿಬಿ, ತಮ್ಮ ತಂಡವನ್ನು ಬಲಪಡಿಸಿಕೊಂಡಿದೆ. ಈ ಹೊಸ ಸೇರ್ಪಡೆಗಳು ತಂಡಕ್ಕೆ ಹೊಸ ಹುರುಪು ನೀಡಲಿವೆ.

ವೆಂಕಟೇಶ್ ಅಯ್ಯರ್ 7 ಕೋಟಿ ರೂ.ಗೆ ಸೇರ್ಪಡೆಯಾದರೆ, ಮಂಗೇಶ್ ಯಾದವ್ 5.2 ಕೋಟಿ ರೂ.ಗೆ ಖರೀದಿಯಾಗಿದ್ದಾರೆ. ಇದರೊಂದಿಗೆ ನ್ಯೂಜಿಲೆಂಡ್ ವೇಗಿ ಜಾಕೋಬ್ ಡಫಿ ಅವರನ್ನು 2 ಕೋಟಿ ಮೂಲ ಬೆಲೆಗೆ ಖರೀದಿಸಿತು. ಉಳಿದಂತೆ ಸಾತ್ವಿಕ್ ದೇಸ್ವಾಲ್ 30 ಲಕ್ಷ ರೂ., ಜೋರ್ಡಾನ್ ಕಾಕ್ಸ್ 75 ಲಕ್ಷ ರೂ., ವಿಕ್ಕಿ ಒಸ್ವಾಲ್ 30 ಲಕ್ಷರೂ., ಕಾನಿಷ್ಕ್ ಚೌಹಾಣ್ 30 ಲಕ್ಷ ರೂ., ವಿಹಾನ್ ಮಲ್ಹೋತ್ರಾ– 30 ಲಕ್ಷ ರೂ. ಗಳಿಗೆ ಖರೀದಿಸಿ 25 ಜನರನ್ನೊಳಗೊಂಡ ತಂಡವನ್ನು ರಚಿಸಿದ್ದು, ಹಾಲಿ ಚಾಂಪಿಯನ್ ಪಟ್ಟವನ್ನು ಉಳಿಸಿಕೊಳ್ಳುವ ಭರವಸೆಯನ್ನು ಮೂಡಿಸಿದೆ.

ಆರ್‌ಸಿಬಿ ಪೂರ್ಣ ತಂಡ: ರಜತ್ ಪಾಟಿದಾರ್ (ನಾಯಕ), ವಿರಾಟ್ ಕೊಹ್ಲಿ, ದೇವದತ್ ಪಡಿಕ್ಕಲ್, ಫಿಲ್ ಸಾಲ್ಟ್, ಜಿತೇಶ್ ಶರ್ಮಾ, ವೆಂಕಟೇಶ್ ಅಯ್ಯರ್, ಕೃನಾಲ್ ಪಾಂಡ್ಯ, ಮಂಗೇಶ್ ಯಾದವ್, ಸ್ವಪ್ನಿಲ್ ಸಿಂಗ್, ಟಿಮ್ ಡೇವಿಡ್, ರೊಮಾರಿಯೊ ಶೆಫರ್ಡ್, ಜಾಕೋಬ್ ಬೆಥೆಲ್, ಜೋಶ್ ಹೇಜಲ್‌ವುಡ್, ಜಾಕೋಬ್ ಡಫಿ, ಯಶ್ ದಯಾಳ್, ಭುವನೇಶ್ವರ್ ಕುಮಾರ್, ನುವಾನ್ ತುಷಾರ, ರಸಿಕ್ ಸಲಾಂ, ಅಭಿನಂದನ್ ಸಿಂಗ್, ಸುಯಶ್ ಶರ್ಮಾ, ಜೋರ್ಡಾನ್ ಕಾಕ್ಸ್, ಸಾತ್ವಿಕ್ ದೇಸ್ವಾಲ್, ವಿಕ್ಕಿ ಒಸ್ವಾಲ್, ಕಾನಿಷ್ಕ್ ಚೌಹಾಣ್, ವಿಹಾನ್ ಮಲ್ಹೋತ್ರಾ.

ಕ್ಯಾಮರೋನ್ ಗ್ರೀನ್ ದುಬಾರಿ ಆಟಗಾರ

ಅಬುಧಾಬಿಯಲ್ಲಿ ನಡೆದ ಐಪಿಎಲ್ ಮಿನಿ ಹರಾಜು ಪ್ರಕ್ರಿಯೆಯಲ್ಲಿ ಎಲ್ಲಾ 10 ತಂಡಗಳು ಸೇರಿದಂತೆ 237.55 ಕೋಟಿ ಮೊತ್ತದ ಒಟ್ಟು 77 ಖಾಲಿ ಇರುವ ಸ್ಥಾನಗಳಿಗೆ ತಮ್ಮ ನೆಚ್ಚಿನ ಆಟಗಾರರನ್ನು ಖರೀದಿ ಮಾಡಿದ್ದು, ಇದರಲ್ಲಿ ಕೆಕೆಆರ್ (ಕೋಲ್ಕತ್ತಾ ನೈಟ್ ರೈಡರ್ಸ್)ಗೆ ಆಸ್ಟ್ರೇಲಿಯಾದ 26 ವರ್ಷದ ಆಲ್‌ರೌಂಡರ್ ಕ್ಯಾಮರೋನ್ ಗ್ರೀನ್ ಬರೋಬ್ಬರಿ 25.20 ಕೋಟಿ ರೂ.ಗೆ ಖರೀದಿಯಾಗುವ ಮೂಲಕ ಈ ಬಾರಿಯ ದುಬಾರಿ ಆಟಗಾರ ಎಂಬ ಹೆಗ್ಗಳಿಕೆ ಪಾತ್ರರಾದರು.

ಉಳಿದಂತೆ ಮತೀಶ ಪತಿರಣ 18 ಕೋಟಿ (ಕೆಕೆಆರ್), ಕಾರ್ತಿಕ್ ಶರ್ಮಾ ಹಾಗೂ ಪ್ರಶಾಂತ್ ವೀರ್ ತಲಾ 14.20 ಕೋಟಿ (ಸಿಎಸ್‌ಕೆ), ಲಯಾಮ್ ಲಿವಿಂಗ್‌ಸ್ಟೋನ್ 13 ಕೋಟಿ (ಎಸ್‌ಆರ್‌ಎಚ್), ಮುಸ್ತಾಫಿಜುರ್ ರೆಹಮಾನ್ 9.2 ಕೋಟಿ (ಕೆಕೆಆರ್), ಜೋಸ್ ಇಂಗ್ಲಿಸ್ 8.6 ಕೋಟಿ (ಎಲ್‌ಎಸ್‌ಜಿ), ಆಕಿಬ್ ಡಾರ್ 8.4 ಕೋಟಿ (ಡಿಸಿ), ರವಿ ಬಿಷ್ಣೋಯಿ 7.2 ಕೋಟಿ (ಆರ್.ಆರ್), ವೆಂಕಟೇಶ್ ಅಯ್ಯರ್ 7 ಕೋಟಿ (ಆರ್‌ಸಿಬಿ), ಜೇಸನ್ ಹೋಲ್ಡರ್ 7 ಕೋಟಿ (ಜಿಟಿ) ಬಿಕರಿಯಾದರು.

ಯುಎಇಯಲ್ಲಿ ಕೊಡಗು ಗೌಡ ಸಮಾಜದಿಂದ ಹುತ್ತರಿ ಆಚರಣೆ



ಯುಎಇಯಲ್ಲಿರುವ ಕೊಡಗು ಗೌಡ ಸಮಾಜದ ವತಿಯಿಂದ ಹುತ್ತರಿ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಮೈಸೂರು, ಡಿ.16– ಯುಎಇಯಲ್ಲಿರುವ ಕೊಡಗು ಗೌಡ ಸಮಾಜದ ವತಿಯಿಂದ ದುಬೈನ ಅಲ್ ರಾವ್ದಾ ರೆಸಾರ್ಟ್‌ನಲ್ಲಿ ನಾಲ್ಕನೇ ವರ್ಷದ ಹುತ್ತರಿ ಹಬ್ಬವನ್ನು ಇತ್ತೀಚೆಗೆ ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು.

ಕುಲದೇವತೆ ಕಾವೇರಿ ತಾಯಿ ಹಾಗೂ ಶ್ರೀ ವೆಂಕಟರಮಣ ಸ್ವಾಮಿಯವರಿಗೆ ಪೂಜೆ ಸಲ್ಲಿಸುವ ಮೂಲಕ ಸಂಜೆ ಕಾರ್ಯಕ್ರಮಕ್ಕೆ ಅಧಿಕೃತವಾಗಿ ಚಾಲನೆ ನೀಡಲಾಯಿತು.

ಹಬ್ಬದ ಅಂಗವಾಗಿ ಮಕ್ಕಳು, ಮಹಿಳೆಯರು, ಪುರುಷರು ಹಾಗೂ ದಂಪತಿಗಳಿಗೆ ಪ್ರತ್ಯೇಕ ವಿವಿಧ ಆಟಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಯುಎಇಯಲ್ಲಿ ನೆಲೆಸಿರುವ ಎಲ್ಲಾ ಕೊಡಗು ಅರೆಭಾಷೆ ಗೌಡ ಕುಟುಂಬಗಳು ಕೊಡಗಿನ ಸಂಸ್ಕೃತಿ ಹಾಗೂ ಐಕ್ಯತೆ ಸಾರುವ ಹುತ್ತರಿ ಹಬ್ಬದಲ್ಲಿ ಭಾಗವಹಿಸಿ, ಸಂಭ್ರಮಿಸಿದವು.

ಅಚ್ಚಂಡೀರ, ಆನೇರ, ಬೆಳ್ಯನ, ಕಡ್ಲೇರ, ಕಲ್ಲಂಬಿ, ಕರ್ಣಯ್ಯನ, ಕೊಂಪುಳಿರ, ಕತ್ರಿಕೊಲ್ಲಿ ಮತ್ತು ಮೊಟ್ಟನ ಕುಟುಂಬಗಳು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದವು.

ಕನ್ನಡ ರಾಜ್ಯೋತ್ಸವ



ಮೈಸೂರಿನ ವಿಶ್ವೇಶ್ವರನಗರ ವೀವರ್ಸ್ ಕಾಲೋನಿಯಲ್ಲಿ ಜೈ ಭೀಮ್ ಕನ್ನಡ ಯುವಕರ ಬಳಗದ ವತಿಯಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ದಿ ರೈಲ್ವೆ ಕೋ ಆಪರೇಟಿವ್ ಬ್ಯಾಂಕ್ ಉಪಾಧ್ಯಕ್ಷ ಎಸ್.ಆನಂದ್, ನಗರ ಬಿಜೆಪಿ ಎಸ್ಸಿ ಮೋರ್ಚಾ ಉಪಾಧ್ಯಕ್ಷ ಎಸ್.ಡಿ.ಮುರಳೀಧರ್, ಸಮಾಜ ಸೇವಕ ಎಂ.ಜೆ.ರವಿಕುಮಾರ್, ಕಾಂಗ್ರೆಸ್ ಮುಖಂಡರಾದ ಸುಂದರ್, ಕೆ.ಮಹೇಶ್, ಸಂಘದ ಪದಾಧಿಕಾರಿಗಳಾದ ಎಸ್.ಗಂಗಾಧರ್, ಅಭಿಷೇಕ್, ಶಾಂತಕುಮಾರ್, ಸಂದೀಪ್, ನಿತ್ಯಾನಂದ, ಸಂಜು, ಕಿರಣ್, ಜ್ಞಾನೇಶ್, ಸಂತೋಷ್, ಚಂದ್ರು ರಾಜು, ರವಿ, ಗೌರವ್, ಶಶಾಂಕ್, ದೀಕ್ಷಿತ್, ಚಿನ್ನು ರಾಮಣ್ಣ, ಜೀವನ್‌ದಾಸ್, ಪ್ರತಾಪ್ ಮತ್ತಿತರರು ಪಾಲ್ಗೊಂಡಿದ್ದರು.

2013–14, 2014–15 ರಲ್ಲಿ ಪ್ರವೇಶ ಪಡೆದು ಪದವಿ ಪೂರ್ಣಗೊಳಿಸಿದವರು ಪ್ರಮಾಣ ಪತ್ರಕ್ಕೆ ಅರ್ಹರು

ಕರ್ನಾಟಕ ರಾಜ್ಯ ಮುಕ್ತ ವಿವಿ ಅಧಿಸೂಚನೆ

ಮೈಸೂರು, ಡಿ.16(ಎಸ್‌ಪಿಎನ್)– ಕರ್ನಾಟಕ ರಾಜ್ಯ ಮುಕ್ತ ವಿವಿಯ 21ನೇ ವಾರ್ಷಿಕ ಘಟಿಕೋತ್ಸವವನ್ನು 2026ರ ಜನವರಿ ಕೊನೆ ವಾರದಲ್ಲಿ ನಡೆಸಲು ತೀರ್ಮಾನಿಸಲಾಗಿದ್ದು, ಈ ವೇಳೆ 2013–14/2014–15ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ಪಡೆದು ಪದವಿ ಪೂರ್ಣಗೊಳಿಸಿರುವ ಅಭ್ಯರ್ಥಿಗಳೂ ಕೂಡ 'ಪದವಿ ಪ್ರಮಾಣ ಪತ್ರ' ಪಡೆಯಲು ಅರ್ಹರಾಗಿರುತ್ತಾರೆ ಎಂದು ಕುಲಸಚಿವ(ಪರೀಕ್ಷಾಂಗ)ರು ಡಿ.16ರಂದು ಅಧಿಸೂಚನೆ ಹೊರಡಿಸಿದ್ದಾರೆ.

2013–14ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿಯನ್ನು ಪಡೆದು(ಏಪ್ರಿಲ್/ಮೇ 2024ರವರೆಗೆ) ಉತ್ತೀರ್ಣಗೊಂಡಿರುವ ಬಿಎ, ಬಿ.ಕಾಂ, ಬಿ.ಲಿಬ್‌ಐಎಸ್ಸಿ ಬಿ.ಎಡಿ ಮತ್ತು ಬಿ.ಎಡ್ ಸ್ಪೆಷಲ್ ಮತ್ತು ಸರ್ಟಿಫಿಕೇಟ್ ಕಾರ್ಯಕ್ರಮಗಳ ಸ್ನಾತಕ ಪದವಿಯ ವಿದ್ಯಾರ್ಥಿಗಳು, ಎಂ.ಎ, ಎಂ.ಕಾಂ, ಎಂಬಿಎ, ಎಂಎಡ್ ಎಲ್ಲಾ ಎಂಎಸ್ಸಿ, ಎಂಲಿಬ್‌ಐಎಸ್ಸಿ ಮತ್ತು ಪಿಜಿ ಡಿಪ್ಲೊಮಾ ಕಾರ್ಯಕ್ರಮಗಳ ಸ್ನಾತಕೋತ್ತರ ವಿದ್ಯಾರ್ಥಿಗಳು.

> ಘಟಿಕೋತ್ಸವ ನಡೆಯುವ ನಿಗದಿತ ದಿನಾಂಕ, ಸಮಯ ಮತ್ತು ಸ್ಥಳವನ್ನು ವಿವಿ ಅಧಿಕೃತ ಜಾಲತಾಣ ಮತ್ತು ಇತರೆ ಮಾಧ್ಯಮದಲ್ಲಿ ಪ್ರಕಟಿಸಲಾಗುವುದು.
> – ಕುಲಸಚಿವರು(ಪರೀಕ್ಷಾಂಗ)

2014–15ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿಯನ್ನು ಪಡೆದು(ಏಪ್ರಿಲ್/ಮೇ 2024ರ ವರೆಗೆ) ಉತ್ತೀರ್ಣಗೊಂಡಿರುವ ಬಿಎ, ಬಿ.ಕಾಂ, ಬಿಲಿಬ್‌ಐಎಸ್ಸಿ, ಬಿಎಡ್ ಮತ್ತು ಬಿಎಡ್ ಸ್ಪೆಷಲ್ ಸರ್ಟಿಫಿಕೇಟ್ ಕಾರ್ಯಕ್ರಮಗಳ ಸ್ನಾತಕ ಪದವಿಯ ವಿದ್ಯಾರ್ಥಿಗಳು. ಎಂ.ಎ, ಎಂಬಿಎ, ಎಂಕಾಂ, ಎಂಎಡ್ ಎಲ್ಲಾ ಎಂಎಸ್ಸಿ, ಎಂಲಿಬ್ ಐಎಸ್ಸಿ ಮತ್ತು ಪಿಜಿ ಡಿಪ್ಲೊಮಾ ಕಾರ್ಯಕ್ರಮಗಳ ಸ್ನಾತಕೋತ್ತರ ವಿದ್ಯಾರ್ಥಿಗಳು ಪದವಿ ಪ್ರಮಾಣ ಪತ್ರ ಪಡೆಯಬಹುದು.

ಪದಕ ಮತ್ತು ನಗದು ಬಹುಮಾನಕ್ಕೆ ಅರ್ಹರಾದ ಸ್ನಾತಕ ಮತ್ತು ಸ್ನಾತಕೋತ್ತರ ಕಾರ್ಯಕ್ರಮದ ಅಭ್ಯರ್ಥಿಗಳು ಹಾಗೂ ಪಿಎಚ್‌ಡಿ ಪದವೀಧರರು ಘಟಿಕೋತ್ಸವದಲ್ಲಿ ಭಾಗವಹಿಸಲು ಅರ್ಹರಿರುತ್ತಾರೆ.

ಯಾವುದೇ ವಿದ್ಯಾರ್ಥಿಯ ಅಂತಿಮ ವರ್ಷದ ಅಂಕಪಟ್ಟಿಯಲ್ಲಿ ದರ್ಜೆ ಘೋಷಣೆಯಾಗದಿದ್ದಲ್ಲಿ(ಎನ್‌ಸಿಎಲ್ ತೆರವುಗೊಂಡಿರದಿದ್ದಲ್ಲಿ) ಅಥವಾ ಇನ್ನಾವುದೇ ತಿದ್ದುಪಡಿಗಳಿದ್ದಲ್ಲಿ ಮನವಿ ಅರ್ಜಿಯನ್ನು ತಮ್ಮ ಮೂಲ ಅಂಕಪಟ್ಟಿಗಳೊಂದಿಗೆ ಲಗತ್ತಿಸಿ, ಕುಲಸಚಿವರು (ಪರೀಕ್ಷಾಂಗ) ಕರಾಮುವಿ, ಮೈಸೂರು ಇವರ ವಿಳಾಸಕ್ಕೆ ದಿ: 30.12. 2025 ರೊಳಗೆ ಅರ್ಜಿ ಸಲ್ಲಿಸಿ, ಅಂಕಪಟ್ಟಿಯ ದರ್ಜೆ ಘೋಷಣೆ ಮಾಡಿಸಿಕೊಳ್ಳುವುದು ತಪ್ಪಿದ್ದಲ್ಲಿ ಪದವಿ ಪ್ರಮಾಣ ಪತ್ರವನ್ನು ಪಡೆಯಲು ಅರ್ಹರಾಗಿರುವುದಿಲ್ಲ ಎಂದು ತಿಳಿಸಿದ್ದಾರೆ.

ಚಿನ್ನದ ಪದಕ ಮತ್ತು ನಗದು ಬಹುಮಾನ ಪುರಸ್ಕೃತರು ಮಾತ್ರ ಘಟಿಕೋತ್ಸವದಲ್ಲಿ ಉಪಸ್ಥಿತರಿರುವರು 1700ರೂ., ಶುಲ್ಕ ಭರಿಸಬೇಕು. ಎಲ್ಲಾ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಅನುಪಸ್ಥಿತಿಯಲ್ಲಿ ಪ್ರಮಾಣ ಪಡೆಯುವವರು 1700 ರೂ., ಶುಲ್ಕ ಭರಿಸಬೇಕು.

2026ರ ಜ.10ರವರೆಗೆ ದಂಡ ಶುಲ್ಕವಿಲ್ಲದೆ ಶುಲ್ಕ ಪಾವತಿಸಬಹುದು, 100 ರೂ ದಂಡ ಶುಲ್ಕದೊಡನೆ 2026ರ ಜ.15ರಂದು ಕೊನೆಯ ದಿನವಾಗಿದೆ ಎಂದು ಮುಕ್ತ ವಿವಿ ಕುಲ ಸಚಿವ (ಪರೀಕ್ಷಾಂಗ) ಅಧಿಸೂಚನೆಯಲ್ಲಿ ತಿಳಿಸಿದ್ದಾರೆ.



ಮೈಸೂರು ಚಾಮುಂಡಿಬೆಟ್ಟದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಹುಟ್ಟುಹಬ್ಬವನ್ನು ಆಚರಿಸಲಾಯಿತು. ವರುಣಾ ಹೋಬಳಿ ಜೆಡಿಎಸ್ ಘಟಕದ ಅಧ್ಯಕ್ಷ ಕುಪ್ಪೇಗಾಲ ಬಾಬು, ನಿಖಿಲ್ ಕುಮಾರ್ ಸ್ವಾಮಿ ಅಭಿಮಾನಿ ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ, ವರುಣ ವಿಧಾನ ಸಭಾ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಸಿದ್ದರಾಮನಹುಂಡಿ ಮಹೇಶ್, ಉಪಾಧ್ಯಕ್ಷ ಚಿಕ್ಕೇಗೌಡನಹುಂಡಿ ಉಮೇಶ್ ಮತ್ತಿತರು ಭಾಗವಹಿಸಿದ್ದರು.

ಮಂಡ್ಯ ಪಿಆರ್‌ಇಡಿ ಸೂಪರ್‌ಇನ್‌ಟೆಂಡೆಂಟ್ ಭೈರೇಶ್ ಅವರ ನಿವಾಸದ ಮೇಲೆ ಲೋಕಾಯುಕ್ತ ದಾಳಿ

ಮಂಡ್ಯ, ಡಿ.16– ಆದಾಯಕ್ಕಿಂತ ಹೆಚ್ಚು ಆಸ್ತಿ ಸಂಪಾದನೆ ಆರೋಪದಡಿ ಲೋಕಾಯುಕ್ತ ಅಧಿಕಾರಿಗಳು ಮಂಡ್ಯ ಪಿಆರ್‌ಇಡಿ ಸೂಪರ್‌ಇನ್‌ಟೆಂಡೆಂಟ್ ಭೈರೇಶ್ ಅವರ ನಿವಾಸದ ಮೇಲೆ ದಾಳಿ ನಡೆಸಿದ್ದಾರೆ.

ಮಂಗಳವಾರ ಮುಂಜಾನೆಯೇ ಭೈರೇಶ್ ಅವರಿಗೆ ಸೇರಿದ 5 ಸ್ಥಳಗಳ ಮೇಲೆ ದಾಳಿ ನಡೆಸಿದ ಲೋಕಾಯುಕ್ತ ಅಧಿಕಾರಿಗಳು ಆದಾಯಕ್ಕಿಂತ 1.92 ಕೋಟಿ ಮೌಲ್ಯದ ಆಸ್ತಿಯನ್ನು ಪತ್ತೆ ಹಚ್ಚಿದ್ದಾರೆ. ದಾಳಿ ವೇಳೆ ಭೈರೇಶ್ ಅವರು ಮೈಸೂರಿನಲ್ಲಿ ಒಂದು ಸೈಟ್, ಮಂಡ್ಯದಲ್ಲಿ 2 ಸೈಟ್ ಸೇರಿದಂತೆ 4 ಸೈಟ್ ಹೊಂದಿರುವುದು ಪತ್ತೆಯಾಗಿದ್ದು, ಮೈಸೂರಿನ ಸೈಟ್ ದಾಖಲಾತಿ ಪಿಡಿಓ ಮಂಜುನಾಥ್ ಅವರ ಮನೆಯಲ್ಲಿ ಪತ್ತೆಯಾಗಿದೆ. ಅಲ್ಲದೇ 1.37 ಎಕರೆ ಜಮೀನು ಹಾಗೂ 18 ಲಕ್ಷ ರೂ. ಮೌಲ್ಯದ ಚಿನ್ನಾಭರಣ ದೊರೆತಿದೆ ಎಂದು ಲೋಕಾಯುಕ್ತ ಅಧಿಕಾರಿಗಳು ತಿಳಿಸಿದ್ದಾರೆ. ಒಟ್ಟಾರೆ ಸಂಪಾದನೆಗಿಂತ 1.92 ಕೋಟಿ ಅಕ್ರಮ ಆಸ್ತಿ ಸಂಪಾದನೆ ಮಾಡಿರುವುದು ಲೋಕಾಯುಕ್ತ ದಾಳಿಯಿಂದ ಪತ್ತೆಯಾಗಿದೆ.

ವರದಕ್ಷಿಣೆ ಕಿರುಕುಳ ನೀಡಿ, ಗೃಹಿಣಿ ಸಾವಿಗೆ ಕಾರಣರಾದ ಪತಿ ಸೇರಿ ಇಬ್ಬರಿಗೆ ಜೀವಾವಧಿ ಶಿಕ್ಷೆ

ಮೈಸೂರು, ಡಿ.16(ಎಸ್‌ಪಿಎನ್)– ಗೃಹಿಣಿಗೆ ವರದಕ್ಷಣೆ ಕಿರುಕುಳ ನೀಡಿ, ಅಕೆಯ ಸಾವಿಗೆ ಕಾರಣವಾಗಿದ್ದ ಪತಿ ಸೇರಿ ಇಬ್ಬರಿಗೆ ಜೀವಾವಧಿ ಶಿಕ್ಷೆ ನೀಡಿ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಕೆ.ಎನ್.ರೂಪಾ ತೀರ್ಪು ನೀಡಿದ್ದಾರೆ.

ತೇಜಾಮಣಿ ಸಾವನ್ನಪ್ಪಿದವರಾಗಿದ್ದು, ಅವರ ಪತಿ ಎನ್.ನವೀನ್‌ಕುಮಾರ್ ಮತ್ತು ರಾಣಿ ಜೀವಾವಧಿ ಶಿಕ್ಷೆಗೆ ಗುರಿಯಾದವರು.

ವಿವರ: 2017ರ ನ.9ರಂದು ನವೀನ್ ಕುಮಾರ್ ಜೊತೆ ತೇಜಮಣಿ ಮದುವೆಯಾಗಿತ್ತು. ಈ ವೇಳೆ ರಾಣಿ ಬೇಡಿಕೆ ಮೇರೆಗೆ 60 ಗ್ರಾಂ ಚಿನ್ನ ನಗ–ನಾಣ್ಯ 8 ಲಕ್ಷ ನಗದು ವರದಕ್ಷಿಣೆಯಾಗಿ ನೀಡಲಾಗಿತ್ತು.

ಆದರೂ ಕೆಲ ದಿನಗಳ ನಂತರ ಮತ್ತೆ ತವರು ಮನೆಯಿಂದ 10 ಲಕ್ಷ ರೂ., ವರದಕ್ಷಿಣೆ ಹಣ ತರುವಂತೆಯೂ, ತೇಜೋಮಣಿಗೆ ಬರುತ್ತಿದ್ದ ಪ್ರತಿ ತಿಂಗಳ ಸಂಬಳವನ್ನು ಕೊಡುವಂತೆ ಪತಿ ಪಿಡಿಸುತ್ತಿದ್ದ. ಅಲ್ಲದೆ,' ತೇಜೋಮಣಿಗೆ ಊಟ, ತಿಂಡಿ ಕೊಡದೇ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿ, ಮನೆಯಿಂದ ಹೊರಹಾಕಿದ್ದ. ಈ ಬಗ್ಗೆ ತೇಜೋಮಣಿ ಮನೆಯವರು ಮಾತುಕತೆ ನಡೆಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಬೇರೆ ದಾರಿ ಕಾಣದ ತೇಜೋಮಣಿ ತವರು ಮನೆಯಲ್ಲಿ ವಾಸವಿದ್ದರೂ, ಪತಿ ನವೀನ್‌ಕುಮಾರ್ 2018ರ ಆ.7 ರಂದು ಬೆಳಗಿನ ವೇಳೆ ಮನೆಗೆ ನುಗ್ಗಿ ತೇಜೋಮಣಿಗೆ ಹೆಚ್ಚಿನ ವರದಕ್ಷಿಣೆ ಕೊಡುವಂತೆ ಮನಸೋ ಇಚ್ಛೆ ಥಳಿಸಿದ್ದ. ಅದೇ ದಿನ ಸಂಜೆ ಜಯನಗರ ಇಸ್ಕಾನ್ ಟೆಂಪಲ್ ಬಳಿ ಇರುವ ಸುರೇಶ್ ಮೋಟಾರ್ಸ್ ಗ್ಯಾರೇಜ್ ಪಕ್ಕದ ರಸ್ತೆಯಲ್ಲಿ ಅವ್ಲೋಡಿಪೈನ್ ಮಾತ್ರೆ ಅಧಿಕವಾಗಿ ಸೇವಿಸಿ, ಚಿಕಿತ್ಸೆ ಫಲಕಾರಿಯಾಗದೇ ತೇಜೋಮಣಿ ಸಾವನ್ನಪ್ಪಿದ್ದರು.

ಈ ಸಂಬಂಧ ಎನ್.ಆರ್.ವಿಭಾಗದ ಅಂದಿನ ಎಸಿಪಿ ಸಿ.ಗೋಪಾಲ್ ನೇತೃತ್ವದಲ್ಲಿ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಲಾಗಿತ್ತು. ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಕೆ.ಎನ್.ರೂಪಾ ಅವರು ಇಬ್ಬರಿಗೂ ಜೀವಾವಧಿ ಶಿಕ್ಷೆ ಮತ್ತು ತಲಾ 2 ಲಕ್ಷ ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ.

ಸರ್ಕಾರದ ಪರವಾಗಿ ಹಿಂದಿನ ಸರ್ಕಾರಿ ಅಭಿಯೋಜಕರಾಗಿ ಬಿ.ಇ. ಯೋಗೇಶ್ವರ ವಾದ ಮಂಡಿಸಿದ್ದರು ಎಂದು ಹಾಲಿ ಸರ್ಕಾರಿ ಅಭಿಯೋಜಕ ಎ.ಎನ್. ಮಧು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಬಾಡಿಗೆ ತಿದ್ದುಪಡಿ ಮಸೂದೆ ಸೇರಿ

12 ಮಸೂದೆಗಳಿಗೆ ವಿಧಾನಸಭೆ ಅನುಮೋದನೆ

ಬೆಳಗಾವಿ, ಡಿ.16– ಕರ್ನಾಟಕ ಬಾಡಿಗೆ (ತಿದ್ದುಪಡಿ) ಮಸೂದೆ ಸೇರಿದಂತೆ 12 ಮಸೂದೆಗಳನ್ನು ರಾಜ್ಯ ವಿಧಾನಸಭೆ ಮಂಗಳವಾರ ಅಂಗೀಕರಿಸಲಾಗಿದೆ.


ಬಾಡಿಗೆ ನಿಯಮ: ನೋಂದಣಿಗಾಗಿ ಗುತ್ತಿಗೆ ಒಪ್ಪಂದದ ಪ್ರತಿಯನ್ನು ಯಾವುದೇ ಮನೆ ಮಾಲೀಕರು ಅಥವಾ ಬಾಡಿಗೆದಾರರು ಪ್ರಸ್ತುತ ಪಡಿಸಲು ವಿಫಲವಾದರೆ ಅಥವಾ ಅದರ ನಿಬಂಧನೆಯ ಅಡಿಯಲ್ಲಿ ಅಗತ್ಯವಿರುವಂತೆ ವಿವರಗಳನ್ನು ಸಲ್ಲಿಸಲು ವಿಫಲವಾದರೆ, ಅವರು ಶಿಕ್ಷೆಗೊಳಗಾದ ನಂತರ 2,000 ರೂ.ಗಳವರೆಗೆ ದಂಡ ಅಥವಾ ಒಂದು ತಿಂಗಳವರೆಗೆ ಸರಳ ಜೈಲು ಶಿಕ್ಷೆ ಅಥವಾ ಎರಡನ್ನೂ ವಿಧಿಸಲಾಗುತ್ತದೆ ಎಂದು ತಿದ್ದುಪಡಿ ಹೇಳುತ್ತದೆ. ಇದರಲ್ಲಿ ಭಾಗಿಯಾಗಿರುವ ಮಧ್ಯವರ್ತಿಗಳಿಗೂ ಇದು ಅನ್ವಯಿಸುತ್ತದೆ.

ಅಂತೆಯೇ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ಮಸೂದೆ, ಗ್ರೇಟರ್ ಬೆಂಗಳೂರು ಆಡಳಿತ (ಎರಡನೇ ತಿದ್ದುಪಡಿ) ಮಸೂದೆ, ಶ್ರೀ ಮಲೈ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಮಸೂದೆ, ಚಂದ್ರಗುತ್ತಿ ಶ್ರೀ ರೇಣುಕಾಂಬ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮಸೂದೆ ಮತ್ತು ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನುಗಳು (ತಿದ್ದುಪಡಿ) ಮಸೂದೆಗಳು ಅನುಮೋದನೆ ಪಡೆದ ಇತರ ಮಸೂದೆಗಳಾಗಿವೆ.

ಕರ್ನಾಟಕ ಚಲನಚಿತ್ರ ಮತ್ತು ಸಾಂಸ್ಕೃತಿಕ ಕಾರ್ಯಕರ್ತರು (ಕಲ್ಯಾಣ) (ತಿದ್ದುಪಡಿ) ಮಸೂದೆ, ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ಮಸೂದೆ, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ದತ್ತಿ (ತಿದ್ದುಪಡಿ) ಮಸೂದೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳು (ಎರಡನೇ ತಿದ್ದುಪಡಿ) ಮಸೂದೆ, ಬಯಲುಸೀಮೆ ಅಭಿವೃದ್ಧಿ ಮಂಡಳಿ (ತಿದ್ದುಪಡಿ) ಮಸೂದೆ ಮತ್ತು ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ (ತಿದ್ದುಪಡಿ) ಮಸೂದೆಗಳನ್ನು ಸಹ ಇಂದು ಅನುಮೋದನೆ ಪಡೆಯಲಾಯಿತು.

ತಿ.ನರಸೀಪುರ, ಕೆ.ಆರ್.ನಗರದಲ್ಲಿ ಕುಮಾರಸ್ವಾಮಿ ಹುಟ್ಟುಹಬ್ಬ ಆಚರಣೆ

ತಿ.ನರಸೀಪುರ/ಕೆ.ಆರ್.ನಗರ, ಡಿ.16– ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ 66ನೇ ವರ್ಷದ ಹುಟ್ಟುಹಬ್ಬವನ್ನು ತಿ.ನರಸೀಪುರ ಮತ್ತು ಕೆ.ಆರ್.ನಗರ ಸೇರಿದಂತೆ ವಿವಿಧೆಡೆ ಸೇವಾ ಕಾರ್ಯಗಳ ಮೂಲಕ ಆಚರಿಸಲಾಯಿತು.



ತಿ.ನರಸೀಪುರದ ಶ್ರೀ ಗುಂಜಾ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಹೆಚ್.ಡಿ.ಕುಮಾರಸ್ವಾಮಿ ಅವರ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಿ ಆಯುಸ್ಸು ವೃದ್ಧಿಗೆ ಪ್ರಾರ್ಥಿಸಿದರು.



ಕೆ.ಆರ್.ನಗರದ ಬಸವೇಶ್ವರ ಬ್ಲಾಕ್‌ನಲ್ಲಿರುವ ಜೆಡಿಎಸ್ ಪಕ್ಷದ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಕೇಂದ್ರದ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ 66ನೇ ವರ್ಷದ ಹುಟ್ಟುಹಬ್ಬವನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತು.

ತಿ.ನರಸೀಪುರ: ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ 66ನೇ ವರ್ಷದ ಹುಟ್ಟುಹಬ್ಬವನ್ನು ಕ್ಷೇತ್ರ ಜೆಡಿಎಸ್ ವತಿಯಿಂದ ವಿವಿಧ ಸೇವಾ ಕಾರ್ಯಗಳ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಪಟ್ಟಣದ ಶ್ರೀ ಗುಂಜಾ ನರಸಿಂಹಸ್ವಾಮಿ ದೇವಸ್ಥಾನಕ್ಕೆ ಆಗಮಿಸಿದ ಜೆಡಿಎಸ್ ಕಾರ್ಯಕರ್ತರು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಿ ಆಯಸ್ಸು ವೃದ್ಧಿಗೆ ಪ್ರಾರ್ಥಿಸಿದರು.

ಈ ವೇಳೆ ಕ್ಷೇತ್ರ ಜೆಡಿಎಸ್ ಅಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ ಮಾತನಾಡಿ ದಣಿವರಿಯದ ನಾಯಕ ಹಾಗೂ ಜೆಡಿಎಸ್ ಪಕ್ಷದ ಸಾರಥಿಯೂ ಆದ ಹೆಚ್.ಡಿ.ಕುಮಾರಸ್ವಾಮಿ ಅವರು ತಾವು ಮುಖ್ಯಮಂತ್ರಿಯಾಗಿದ್ದ ವೇಳೆ ಜಾರಿಗೆ ತಂದಿದ್ದ ಹಲವಾರು ಜನೋಪಯೋಗಿ ಕಾರ್ಯಕ್ರಮಗಳು ಇಂದಿಗೂ ಜನರ ಮನಸ್ಸಿಂದ ದೂರವಾಗಿಲ್ಲ. ಗ್ರಾಮ ವಾಸ್ತವ್ಯದ ಮೂಲಕ ಸರ್ಕಾರವನ್ನೇ ಗ್ರಾಮಸ್ಥರ ಮನೆ ಬಾಗಿಲಿಗೆ ಕರೆದೊಯ್ದು ಸಾರ್ವಜನಿಕ ಸಮಸ್ಯೆಗೆ ತ್ವರಿತ ಪರಿಹಾರ ನೀಡುವ ಅವರ ಕಲ್ಪನೆಯೇ ನಿಜಕ್ಕೂ ಶ್ಲಾಘನೀಯವಾಗಿದ್ದು ಎಂದರು.

ಪ್ರಧಾನ ಕಾರ್ಯದರ್ಶಿ ಹೆಮ್ಮಿಗೆ ಹೊನ್ನನಾಯಕ ಮಾತನಾಡಿ ಜೆಡಿಎಸ್ ಪಕ್ಷದ ಮಿನುಗುತಾರೆ ಹೆಚ್.ಡಿ.ಕುಮಾರಸ್ವಾಮಿಯವರು ತಮ್ಮ 65ನೇ ವರ್ಷ ಪೂರೈಸಿ 66ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಈ ಸಂದರ್ಭದಲ್ಲಿ ಅವರಿಗೆ ದೇವರು ಆರೋಗ್ಯ, ಅಧಿಕಾರ ನೀಡಲೆಂದು ಪ್ರಾರ್ಥನೆ ಸಲ್ಲಿಸಿದ್ದೇವೆ. ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದ ಅವಧಿಯು ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹ ಸಂಗತಿಯಾಗಿದೆ. ಯಾವುದೇ ಸರ್ಕಾರವೂ ಮಾಡದಂತಹ ಅಭಿವೃದ್ಧಿ ಕಾರ್ಯಗಳು ಅವರ ಅವಧಿಯಲ್ಲಾಗಿವೆ ಎಂದರು.

ಇದೇ ವೇಳೆ ಜೆಡಿಎಸ್ ಪಕ್ಷದ ಕಚೇರಿಯಲ್ಲಿ ಕೇಕ್ ಕತ್ತರಿಸಿ ಕಾರ್ಯಕರ್ತರು ಸಂಭ್ರಮಿಸಿದರು. ನಂತರ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ತೆರಳಿ ರೋಗಿಗಳಿಗೆ ಹಣ್ಣು–ಬ್ರೆಡ್ ವಿತರಿಸಿ ಕುಮಾರಸ್ವಾಮಿ ಹುಟ್ಟುಹಬ್ಬವನ್ನು ಅರ್ಥ ಪೂರ್ಣವಾಗಿಸಿದರು.

ಕಾರ್ಯಕ್ರಮದಲ್ಲಿ ಜಿ.ಪಂ. ಮಾಜಿ ಸದಸ್ಯ ಜೈಪಾಲ್ ಭರಣಿ, ತಾ.ಪಂ.ಮಾಜಿ ಉಪಾಧ್ಯಕ್ಷ ಎಂ.ಎಸ್.ಬಸವರಾಜು, ಚೌಹಳ್ಳಿ ಅಡುಗೆ ಸುರೇಶ್, ಮಾದಾಪುರ ಮಹದೇವಸ್ವಾಮಿ, ಗ್ರಾ.ಪಂ. ಮಾಜಿ ಸದಸ್ಯ ಸೋಸಲೆ ರಾಜಣ್ಣ, ಗಣೇಶ್, ಕುರುಬೂರು ಜಗಪತಿ, ಗ್ರಾ.ಪಂ.ಮಾಜಿ ಅಧ್ಯಕ್ಷ ಬಿ.ಎಂ. ಶಿವಕುಮಾರ್, ಜಿಲ್ಲಾ ಜನ ಜಾಗೃತಿ ಜಿಲ್ಲಾಧ್ಯಕ್ಷ ಕೆ.ಎನ್.ಪ್ರಭುಸ್ವಾಮಿ, ಎಪಿಎಂಸಿ ಮಾಜಿ ಸದಸ್ಯ ಕಟ್ಟೇಪುರ ಸಿದ್ದಪ್ಪ, ಜಯರಾಮು, ಹೆಮ್ಮಿಗೆ ವೆಂಕಟೇಶ್, ತಿರುಮಕೂಡಲು ವಾಸು, ನಿಖಿಲ್ ಸೇರಿದಂತೆ ಮತ್ತಿತರರಿದ್ದರು.

ಕೆ.ಆರ್.ನಗರ: ಪಟ್ಟಣದ ಬಸವೇಶ್ವರ ಬ್ಲಾಕ್‌ನಲ್ಲಿರುವ ಜೆಡಿಎಸ್ ಪಕ್ಷದ ಕಚೇರಿಯಲ್ಲಿ ಜೆಡಿಎಸ್ ಪಕ್ಷದಿಂದ ಹಮ್ಮಿಕೊಂಡಿದ್ದ ಕೇಂದ್ರದ ಬೃಹತ್ ಕೈಗಾರಿಕಾ ಸಚಿವರು ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ 66 ನೇ ವರ್ಷದ ಹುಟ್ಟು ಹಬ್ಬದ ಸಂಭ್ರಮಾಚರಣೆ ಕಾರ್ಯಕ್ರಮವನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತು.

ಈ ವೇಳೆ ಮಾತನಾಡಿದ ನವನಗರ ಅರ್ಬನ್ ಕೊ.ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್ ಕುಮಾರಸ್ವಾಮಿಯವರು ಎರಡೂ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದ ವೇಳೆ ಕೈಗೊಂಡ ಕಲ್ಯಾಣ ಕಾರ್ಯಕ್ರಮಗಳನ್ನು ಸ್ಮರಿಸಿದರು.

ಬಳಿಕ ಕೇಂದ್ರದ ದಿಶಾ ಕಮಿಟಿ ಸದಸ್ಯ ಹಾಗೂ ತಾಲೂಕು ಜಾದಳ ಅಧ್ಯಕ್ಷ ಹಂಪಾಪುರ ಕುಮಾರ್ ಮಾತನಾಡಿದರು.

ಇದಕ್ಕೂ ಮೊದಲು ಪಟ್ಟಣದ ಬಸವೇಶ್ವರ ಬ್ಲಾಕ್‌ನಲ್ಲಿರುವ ಮಲೇ ಮಹದೇಶ್ವರ ಸ್ವಾಮಿ ದೇವಾಲಯದಲ್ಲಿ ನೆಚ್ಚಿನ ನಾಯಕ ಕೇಂದ್ರದ ಸಚಿವರಾದ ಹೆಚ್‌ಡಿಕೆ ಅಭಿಮಾನಿಗಳು, ಜಾದಳ ಕಾರ್ಯಕರ್ತರು, ಮುಖಂಡರು ವಿಶೇಷ ಪೂಜೆ ಸಲ್ಲಿಸಿದರು.

ಬಳಿಕ ಬಾಬಾ ಸಾಹೇಬ್ ಅಂಬೇಡ್ಕರ್ ಪುತ್ಥಳಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಪುತ್ಥಳಿ, ಬಾಬು ಜಗಜೀವನ್ ರಾಂ ಪುತ್ಥಳಿಗೆ ಜೆಡಿಎಸ್ ಮುಖಂಡರು, ಕಾರ್ಯಕರ್ತರು ಮಾಲಾರ್ಪಣೆ ಮಾಡಿದರು.

ಇದೇ ಸಂದರ್ಭದಲ್ಲಿ ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆ, ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ತೆರಳಿ ರೋಗಿಗಳಿಗೆ ಹಣ್ಣು ಹಂಪಲ ವಿತರಿಸಲಾಯಿತು.

ರಾಜ್ಯ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ಜಿ.ಪಂ.ಮಾಜಿ ಉಪಾಧ್ಯಕ್ಷ ಅಡಗೂರು ಚನ್ನಬಸಪ್ಪ ತಾಲೂಕು ಜಾದಳ ವಕ್ತಾರ ಕೆ.ಎಲ್.ರಮೇಶ್, ಯುವ ಜೆಡಿಎಸ್ ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಕಗ್ಗರೆ ಕುಚೇಲ, ತಾಲೂಕು ಜಾದಳ ಯುವ ಘಟಕದ ಅಧ್ಯಕ್ಷ ಡಿ.ವಿ.ಗುಡಿ ಯೋಗೇಶ್, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ದಾಕ್ಷಾಯಿಣಿ, ತಾಲೂಕು ಘಟಕದ ಅಧ್ಯಕ್ಷೆ ರಾಜಲಕ್ಷ್ಮಿ, ತಾ.ಜಾದಳ ಕಾನೂನು ಸಲಹೆಗಾರ ವಕೀಲ ಅಂಕನಹಳ್ಳಿ ತಿಮ್ಮಪ್ಪ, ತಾಪಂ ಮಾಜಿ ಸದಸ್ಯರಾದ ಹಂಗರಬಾಯನಹಳ್ಳಿ ತಮ್ಮಣ್ಣ, ಭಾಗ್ಯ ಶಂಕರ್, ತಾಲೂಕು ಯುವ ಜೆಡಿಎಸ್ ಎಸ್.ಸಿ.ಘಟಕದ ಅಧ್ಯಕ್ಷ ಹಂಪಾಪುರ ಸೂರಿ, ಪುರಸಭೆ ಮಾಜಿ ಅಧ್ಯಕ್ಷ ಡಿ.ಕಾಂತರಾಜ್, ಮಾಜಿ ಸದಸ್ಯರಾದ ಕೆ.ಉಮೇಶ್, ಸಂತೋಷ್‌ಗೌಡ, ಮಂಜುಳ ಚಿಕ್ಕವೀರು, ತೋಂಟದಾರ್ಯ, ರಾಜ ಶ್ರೀಕಾಂತ್, ಬಾರ್ ಶಿವಕುಮಾರ್, ಕೆ.ಬಿ.ಸುಬ್ರಹ್ಮಣ್ಯ, ಜೆಡಿಎಸ್ ಮುಖಂಡರಾದ ಶಂಬು, ಧನಪಾಲ್, ಅನೀಪ್ ಗೌಡ, ವಡ್ಡರವಿ, ಭಾಗ್ಯಲಕ್ಷ್ಮಿ ರೂಪ, ಬಾಲಾಜಿಗಣೇಶ್, ಸಾತಿಗ್ರಾಮ ಶಂಕರ್, ನಾಗಣ್ಣ ಇದ್ದರು.

ಹೆಚ್.ಡಿ.ಕೋಟೆ: ಹುಲಿ ಪ್ರತ್ಯಕ್ಷ ಆತಂಕಗೊಂಡ ಕ್ಯಾತನಹಳ್ಳಿ ಗ್ರಾಮಸ್ಥರು

ಅರಣ್ಯ ಇಲಾಖೆಯಿಂದ ಕ್ಯಾಮರಾ ಅಳವಡಿಕೆ



ಹೆಚ್.ಡಿ.ಕೋಟೆ: ತಾಲೂಕಿನ ಕ್ಯಾತನಹಳ್ಳಿ ಗ್ರಾಮದ ಕೆರೆಯ ಸಮೀಪವಿರುವ ರೈತ ಕೆಂಪಯ್ಯ ಅವರ ತೋಟದ ಬಳಿ ಹುಲಿ ಪ್ರತ್ಯಕ್ಷಗೊಂಡಿದ್ದು, ಗ್ರಾಮಸ್ಥರು ಆತಂಕಗೊಂಡಿದ್ದಾರೆ.

ಗ್ರಾಮ ಪಂಚಾಯಿತಿ ಸದಸ್ಯ ಶಿವರಾಜ್ ಅವರು ತೋಟದ ಬಳಿ ಹೋಗುತ್ತಿದ್ದ ಹುಲಿಯನ್ನು ಕಂಡು, ಸಿಂಡಿಕೇಟ್ ಸದಸ್ಯ ಕ್ಯಾತನಹಳ್ಳಿ ನಾಗರಾಜ್ ಅವರಿಗೆ ತಿಳಿಸಿದ್ದಾರೆ. ನಾಗರಾಜ್ ಅವರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಆಗಮಿಸಿದ, ಅರಣ್ಯ ಸಿಬ್ಬಂದಿಗಳು ಆ ಭಾಗದಲ್ಲಿ ಹುಲಿಯ ಚಲನವಲನಗಳನ್ನು ಪತ್ತೆ ಹಚ್ಚಿ, ಹುಲಿ ಓಡಾಡಿರುವುದನ್ನು ಖಚಿತಪಡಿಸಿಕೊಂಡು ನಂತರ ರೈತ ಕೆಂಪಯ್ಯ ತೋಟದಲ್ಲಿ ಕ್ಯಾಮರಾವನ್ನು ಅಳವಡಿಸಿದ್ದಾರೆ.

ಈ ಸಂದರ್ಭದಲ್ಲಿ ಡೈರಿ ಅಧ್ಯಕ್ಷ ಕೆ.ಪಿ.ಚಲುವರಾಜು, ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ರಾಮಚಂದ್ರಣ್ಣ, ಗುತ್ತಿಗೆದಾರ ಕೃಷ್ಣ, ಕೆ.ಡಿ.ಕೃಷ್ಣಮೂರ್ತಿ, ಮಡಿವಾಳ ಬೀರೇಶ್, ಪ್ರಸನ್ನ ಕುಮಾರ್, ಕೆ.ಟಿ.ಬಸಪ್ಪ, ರಾಜಕೀಯ ಕುಮಾರ, ಚಲುವ, ಕೆ.ಸಿ.ಬಸವರಾಜ್, ಚಂದು, ಮಹದೇವಣ್ಣ, ಅರಣ್ಯ ಇಲಾಖೆಯ ಸಿಬ್ಬಂದಿಗಳು ಹಾಜರಿದ್ದರು.

ಏಡ್ಸ್ ಪೀಡಿತರಿಗೆ ಆತ್ಮಸ್ಥೈರ್ಯ ಅಗತ್ಯ



ವಿಶ್ವ ಏಡ್ಸ್ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿದ ಗಣ್ಯರು.

ಹುಣಸೂರು, ಡಿ.16– ಇತ್ತೀಚಿಗೆ ಏಡ್ಸ್ ಎಂಬ ಮಹಾಮಾರಿ ಅಳಿವಿನ ಅಂಚಿನಲ್ಲಿದ್ದರೂ ಏಡ್ಸ್‌ನಿಂದ ಬಳಲುತ್ತಿರುವವರಿಗೆ ಆತ್ಮಸ್ಥೈರ್ಯದ ಅವಶ್ಯಕತೆ ಇದೆ ಎಂದು ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಭಾಗ್ಯಮ್ಮ ತಿಳಿಸಿದರು.

ನಗರದ ಸಂತ ಜೋಸೆಫರ ಪದವಿ ಪೂರ್ವ ಕಾಲೇಜು, ತಾಲೂಕು ಕಾನೂನು ಸಮಿತಿ, ವಕೀಲರ ಸಂಘ, ತಾಲೂಕು ಆರೋಗ್ಯ ಕೇಂದ್ರ, ಸಾರ್ವಜನಿಕ ಆಸ್ಪತ್ರೆ, ಹುಣಸೂರು ರೋಟರಿ ಸಂಸ್ಥೆ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ, ವಿಶ್ವ ಏಡ್ಸ್ ದಿನಾಚರಣೆ. ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದ ಅವರು, ಏಡ್ಸ್ ರೋಗಿಗಳನ್ನು ಮಡಿವಂತಿಕೆ ಮಾಡಿ ದೂರವಿಡುವ ಬದಲು. ಒಂದಾಣಿಕೆಯಿಂದ ಅರಿವಿನ ಮೂಲಕ ಏಡ್ಸ್ ಒಂದು ರೋಗವಲ್ಲ ಎಂದು ಜಾಗೃತಿ ಮೂಡಿಸುವ ಪ್ರಯತ್ನವಾಗಬೇಕಿದೆ ಎಂದರು.

ಪ್ರಭಾರ ತಾಲೂಕು ಆರೋಗ್ಯಾಧಿಕಾರಿ ಡಾ.ದರ್ಶನ್.ಎ.ವಿ. ಮಾತನಾಡಿ, ಕೋವಿಡ್ ಸಂದರ್ಭದಲ್ಲಿ. ವಿದ್ಯಾರ್ಥಿಗಳಿಗೆ ಆನ್ಲೈನ್ ಮೂಲಕ ಶಿಕ್ಷಣ ಸಿಗಲಿ ಎಂಬ ಕಾರಣಕ್ಕೆ ಪೋಷಕರು ಮಕ್ಕಳ ಕೈಯಲ್ಲಿ ಮೊಬೈಲ್ ಕೊಟ್ಟರು. ಆದರೆ ನೀವುಗಳು ವಾಟ್ಸಾಪ್, ಇನ್ಸ್ಟಾಗ್ರಾಂ, ಫೇಸ್‌ಬುಕ್, ರೀಲ್ಸ್ ಮೊರೆ ಹೋದಿರಿ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ರೋಟರಿ ಅಧ್ಯಕ್ಷ ಹೆಚ್.ಆರ್.ಕೃಷ್ಣಕುಮಾರ್, ಸಹಾಯಕ ಸರಕಾರಿ ಅಭಿಯೋಜಕರಾದ ಹೆಚ್.ಡಿ.ಪಾರ್ವತಿ, ಕಾಲೇಜಿನ ಪ್ರಾಂಶುಪಾಲೆ ಭಗಿನಿ ಅನಿತಾ ಡಯಾಸ್ ಮಾತನಾಡಿದರು,

ಕಾರ್ಯಕ್ರಮದಲ್ಲಿ ವಕೀಲರ ಸಂಘದ ಅಧ್ಯಕ್ಷ ಎಸ್.ಶಿವಣ್ಣೇಗೌಡ, ಆರೋಗ್ಯ ಇಲಾಖೆಯ ಚಂದ್ರೇಗೌಡ ಹಾಗು ಹುಣಸೂರು ಸಾರ್ವಜನಿಕ ಆಸ್ಪತ್ರೆಯ ಡಾ. ಶಶಾಂಕ್ ಏಡ್ಸ್ ಬಗ್ಗೆ ಸಮಗ್ರ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು. ನಿರೂಪಣೆಯನ್ನು ಕಾಲೇಜಿನ ನಂಜುಂಡಸ್ವಾಮಿ ನಡೆಸಿಕೊಟ್ಟರು.

ಅಪರಿಚಿತ ವಾಹನ ಡಿಕ್ಕಿ: ಗೂಡ್ಸ್ ಆಟೋ ಕೆರೆಗೆ ಉರುಳಿ ಎಳನೀರು ವ್ಯಾಪಾರಿ ಸಾವು



ಹುಣಸೂರು, ಡಿ.16– ಅಪರಿಚಿತ ವಾಹನವೊಂದು ಹಿಂದಿನಿಂದ ಡಿಕ್ಕಿ ಹೊಡೆದ ಪರಿಣಾಮ ಗೂಡ್ಸ್ ಆಟೊ ಕೆರೆಗೆ ಉರುಳಿ ಎಳನೀರು ವ್ಯಾಪಾರಿ ಸಾವನ್ನಪ್ಪಿರುವ ಘಟನೆ ಇಂದು ಸಂಜೆ ತಾಲೂಕಿನ ರಾಷ್ಟ್ರೀಯ ಹೆದ್ದಾರಿ ಮೂಕನಹಳ್ಳಿ ಗ್ರಾಮದ ಕೆರೆ ಸಮೀಪ ಸಂಭವಿಸಿದೆ.

ತಾಲೂಕಿನ ಉದ್ದೂರು ಗ್ರಾಮದ ಪ್ರಕಾಶ್ ಅವರ ಪುತ್ರ ರಾಜು(47) ಎಂಬಾತನೆ ಅಟೊ ಸಮೇತ ಕೆರೆಗೆ ಉರುಳಿ ಸಾವನ್ನಪ್ಪಿದ ದುರ್ದೈವಿ.

ಮೃತ ರಾಜು ತನ್ನ ಗೂಡ್ಸ್ ಆಟೋ (ಕೆಎ–01 ಎಹೆಚ್–2958)ದಲ್ಲಿ ಹುಣಸೂರಿನಿಂದ ಉದ್ದೂರಿಗೆ ಹೋಗುವಾಗ ಹುಣಸೂರು ಹೊರ ವಲಯದ ಮೂಕನಹಳ್ಳಿ ಕೆರೆ ಬಳಿ ಅಪರಿಚಿತ ವಾಹನವೊಂದು ಹಿಂದಿನಿಂದ ಡಿಕ್ಕಿ ಹೊಡೆದ ಪರಿಣಾಮ ಆಟೋ ಸಮೇತ ಪಕ್ಕದಲ್ಲೇ ಇದ್ದ ಕೆರೆಗೆ ಉರುಳಿ ಮೃತಪಟ್ಟಿದ್ದಾನೆ.

ವಿಷಯ ತಿಳಿಯುತ್ತಿದ್ದಂತೆ ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್, ಪಿಎಸ್‌ಐ ಜಮೀರ್ ಅಹಮದ್ ಮತ್ತು ಸಿಬ್ಬಂದಿ ಸ್ಥಳಕ್ಕೆ ದಾವಿಸಿ ಅಗ್ನಿ ಶಾಮಕ ದಳದ ಸಹಾಯದಿಂದ ಆಟೊ ಮತ್ತು ಮೃತದೇಹವನ್ನು ಹೊರ ತೆಗೆದು ಹುಣಸೂರು ಸಾರ್ವಜನಿಕ ಅಸ್ಪತ್ರೆಯ ಶವಾಗಾರಕ್ಕೆ ಮೃತದೇಹವನ್ನು ಸಾಗಿಸಿ, ಆಟೋವನ್ನು ವಶಪಡಿಸಿಕೊಂಡರು. ಶವಾಗಾರದ ಬಳಿ ರಾಜು ಪತ್ನಿ ಮತ್ತು ಇಬ್ಬರೂ ಹೆಣ್ಣು ಮಕ್ಕಳು, ಸಂಬಂಧಿಕರು ಮತ್ತು ಗ್ರಾಮಸ್ಥರ ಆಕ್ರಂದನ ಮುಗಿಲು ಮುಟ್ಟಿತು.

ಈ ದುರಂತದಿಂದ ಎರಡು ಬದಿಯಲ್ಲೂ ಒಂದು ಕಿಮೀಗೂ ಹೆಚ್ಚು ದೂರ ವಾಹನಗಳು ಸಾಲುಗಟ್ಟಿ ನಿಂತು ಸಂಚಾರ ಅಸ್ತವ್ಯಸ್ತಗೊಂಡಿತ್ತು. ಪೊಲೀಸರು ಹರಸಾಹಸ ಪಡಬೇಕಾಯಿತು.

ನಾಮಧಾರಿಗೌಡ ಸಂಘಕ್ಕೆ ಅಧ್ಯಕ್ಷರ ಆಯ್ಕೆ



ಸರಗೂರು: ಸರಗೂರು ಮತ್ತು ಹೆಚ್.ಡಿ.ಕೋಟೆ ತಾಲೂಕು ಅಖಿಲ ನಾಮಧಾರಿ ಗೌಡ ಸಂಘದ ನೂತನ ಅಧ್ಯಕ್ಷರಾಗಿ ಹಳೆಯೂರು ಎಚ್.ಡಿ.ರತ್ನಯ್ಯ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಪಟ್ಟಣದ ಅಖಿಲ ನಾಮಧಾರಿಗೌಡ ಸಮುದಾಯ ಭವನದಲ್ಲಿ ಭಾನುವಾರ ಸರಗೂರು ಮತ್ತು ಎಚ್.ಡಿ.ಕೋಟೆ ಅಖಿಲ ನಾಮಧಾರಿಗೌಡ ಸಂಘದ ಸರ್ವ ಸದಸ್ಯರ ಮಹಾಸಭೆಯಲ್ಲಿ ಉಪಾಧ್ಯಕ್ಷರಾಗಿ ಕೆ.ಬೆಳತೂರು ಪ್ರಕಾಶ್, ಪ್ರಧಾನ ಕಾರ್ಯದರ್ಶಿಯಾಗಿ ಬಿ.ಮಟಕೆರೆ ನಾಗೇಶ್ ಅವರನ್ನು ಸರ್ವಾನುಮತದಿಂದ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಸಭೆಯಲ್ಲಿ ಕಳೆದ 3 ವರ್ಷದ ಆಡಿಟ್ ವರದಿ, ಅಯವ್ಯಯ ವರದಿಯನ್ನು ಪ್ರಧಾನ ಕಾರ್ಯದರ್ಶಿ ಎ.ಅಕಪ್ಪ ಮಂಡಿಸಿದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಎಂ.ಎನ್.ಜಗದೀಶ್, ಸಂಘದ ಮಾಜಿ ಅಧ್ಯಕ್ಷ ಬಿ.ಸಿ.ಬಸಪ್ಪ, ಎಚ್.ದೇವದಾಸ್, ಕೇಂದ್ರ ಸಮಿತಿ ಉಪಾಧ್ಯಕ್ಷ ಮಲ್ಲಿಕಾರ್ಜುನ, ಸಣ್ಣಸ್ವಾಮಿಗೌಡ, ಬಿ.ಎಂ.ಚಿನ್ನಪ್ಪ ಎಂ.ರಾಜಶೇಖರ್, ಪ್ರೊ.ಎ.ಎಸ್.ಬಾಲಸುಬ್ರಹ್ಮಣ್ಯ, ಎಂ.ಎನ್.ನಟರಾಜು, ರವಿಶಂಕರ್, ಕಾರ್ಯಾಧ್ಯಕ್ಷ ಸಿ.ಪಿ.ಬಸವರಾಜು, ಖಜಾಂಚಿ ಎ.ಎಸ್.ಪದ್ಮರಾಜು, ಉಸ್ತುವಾರಿ ಸದಸ್ಯ ವೈ.ಪಿ.ನಾಗರಾಜು, ಕೆ.ಮಹೇಶ್, ಪಿ.ಮಹದೇವು, ಮಹದೇವು, ಅಡ್ಡಹಳ್ಳಿ ನಂದಕುಮಾರ್, ದೇವದಾಸ್, ಚಕ್ಕೂರು ಬಸವರಾಜು, ಗುಣಪಾಲ್ ಕಾಟನ್ ಮಹದೇವಪ್ಪ, ಬಿ.ಮಟಕೆರೆ ಉದಯ್ ಕುಮಾರ್, ಎಂ.ಕೆ.ಹರಿದಾಸ್, ಹಿಮತ್, ಕಲ್ಲಹಳ್ಳ ಅಭಿ, ಮ್ಯಾನೇಜರ್ ನಾಗೇಂದ್ರ ಸೇರಿದಂತೆ ಇನ್ನಿತರರು ಹಾಜರಿದ್ದರು.

ಚುಂಚನಕಟ್ಟೆ ಜಾತ್ರಾ ಮಹೋತ್ಸವ: ಅಂಗಡಿ ಮುಂಗಟ್ಟು, ಲಾಡು ಪ್ರಸಾದ ಸೇರಿ ಇತರ ವಿಭಾಗಗಳ ಹರಾಜು



ಚುಂಚನಕಟ್ಟೆಯಲ್ಲಿ ಜಾತ್ರಾ ಮಹೋತ್ಸವದ ಅಂಗವಾಗಿ ಹರಾಜು ಪ್ರಕ್ರಿಯೆ ನಡೆಯಿತು.

ಚುಂಚನಕಟ್ಟೆ: ಚುಂಚನಕಟ್ಟೆ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಹರಾಜು ಪ್ರಕ್ರೀಯೆಯಲ್ಲಿ ಅಂಗಡಿ ಮುಂಗಟ್ಟುಗಳು, ಲಾಡು ಪ್ರಸಾದ ಸೇರಿದಂತೆ ವಿವಿಧ ವಿಭಾಗಗಳು ಒಟ್ಟು 3.27ಲಕ್ಷ ರೂ. ಗಳಿಗೆ ಬಿಡ್ ನಡೆಯಿತು.

ಸಾಲಿಗ್ರಾಮ ತಾಲೂಕಿನ ಇತಿಹಾಸ ಪ್ರಸಿದ್ಧ ಚುಂಚನಕಟ್ಟೆ ಜಾನುವಾರು ಮತ್ತು ಬ್ರಹ್ಮರಥೋತ್ಸವದ ಅಂಗಡಿ–ಮುಂಗಟ್ಟುಗಳ ಮತ್ತು ದನಗಳ ಜಾತ್ರೆಯ ಗೊಬ್ಬರ ಹರಾಜು ಪ್ರಕ್ರಿಯೆಯನ್ನು ತಹಶೀಲ್ದಾರ್ ರೂಕಿಯಾ ಬೇಗಂ ಅವರ ನೇತೃತ್ವದಲ್ಲಿ ಶ್ರೀರಾಮದೇವರ ದೇವಾಲಯದ ಪ್ರಾಂಗಣದಲ್ಲಿ ನಡೆಸಲಾಯಿತು.

ಈ ಸಂದರ್ಬದಲ್ಲಿ ಜಾತ್ರಾಮಾಳದಲ್ಲಿ ಹಾಕಲಾಗುವ ಅಂಗಡಿ–ಮುಂಗಟ್ಟುಗಳ ಸುಂಕ ವಸೂಲಾತಿ 3.27ಲಕ್ಷ ರೂಗಳಿಗೆ ಹರಾಜಾಯಿತು, ಆದರೆ ಕಳೆದ ಬಾರಿ 6.20 ಲಕ್ಷ ರೂ.ಗೆ ಹರಾಜು ಆಗಿತ್ತು. ಈ ಬಾರಿ ತೀರಾ ಕಡಿಮೆ ದರದಲ್ಲಿ ಹರಾಜು ನಿಂತ ಕಾರಣ ಕಡಿಮೆ ದರದಲ್ಲಿ ಬಿಡ್ ನೀಡಲು ಸಾಧ್ಯವಿಲ್ಲ ಎಂಬ ಕಾರಣ ನೀಡಿ ತಹಸೀಲ್ದಾರ್ ರುಕಿಯಾ ಬೇಗಂ ಮತ್ತು ಬಿಡ್ದಾರರ ನಡುವೆ ಕೆಲ ಸಮಯ ಮಾತಿನ ಚಕಮಕಿ ನಡೆದು ಅಂತಿಮವಾಗಿ 3.30 ಲಕ್ಷ ರೂಗಳಿಗೆ ಅಂಗಡಿ ಮುಂಗಟುಗಳ ಸುಂಕ ವಸೂಲಾತಿ ಪ್ರಕ್ರಿಯೆ ಅಂತಿಮಗೊಳಿಸಲಾಯಿತು.

ದನಗಳ ಜಾತ್ರಾಮಾಳದಲ್ಲಿ ಸಂಗ್ರಹವಾಗುವ ಗೊಬ್ಬರ ಹರಾಜು ಪ್ರಕ್ರಿಯೆ ನಡೆಸಿದ ತಹಸೀಲ್ದಾರ್ ಅವರು ಒಟ್ಟು ಆರು ವಿಭಾಗಗಳನ್ನು 26300 ರೂ. ಗಳಿಗೆ ಹರಾಜು ಹಾಕಲಾಯಿತು ಅಂತಿಮವಾಗಿ ದೇವಾಲಯದ ಆವರಣದಲ್ಲಿ ಲಾಡು ಪ್ರಸಾದ ವಿತರಣೆಗೆ ಇದೇ ಮೊದಲ ಬಾರಿಗೆ ಹರಾಜು ನಡೆಸಿ 12000 ರೂ.ಗೆ ಬಿಡ್ ಕೂಗಲಾಯಿತು. ಆದರೆ ಮೊತ್ತ ಕಡಿಮೆಯಾದ ಕಾರಣ ಈ ಬಗ್ಗೆ ಪರಿಶೀಲನೆ ನಡೆಸಿ ತಿಳಿಸಲಾಗುವುದು ಎಂದು ನೆರೆದಿದ್ದ ಬಿಡ್‌ದಾರರಿಗೆ ಹೇಳಿದರು.

ದನಗಳ ಜಾತ್ರೆಗೆ ಮೀಸಲಾಗಿ ಇಟ್ಟಿರುವ ಜಾಗದಲ್ಲಿ ಹಲವರು ಅಕ್ರಮವಾಗಿ ಮನೆ ನಿರ್ಮಿಸಿದ್ದು ಅವರ ಮನೆಯ ಪಕ್ಕದ ಜಾಗದಲ್ಲಿ ದನಕರುಗಳನ್ನು ಕಟ್ಟಲು ಸಾಧ್ಯವಾಗುತ್ತಿಲ್ಲ ಈ ಬಗ್ಗೆ ಪ್ರಶ್ನಿಸಿದರೆ ಜಗಳ ಇಳಿಯುತ್ತಿದ್ದು ಈ ಅಕ್ರಮವನ್ನು ತಡೆಯುವಲ್ಲಿ ತಾಲೂಕು ಆಡಳಿತ ವಿಫಲವಾಗಿದೆ ಎಂದು ಕೆಲ ರೈತರು ದೂರಿದರು. ಜೊತೆಗೆ ದನಗಳ ಜಾತ್ರೆಗೆ ವರ್ಷದಿಂದ ವರ್ಷಕ್ಕೆ ಆಗಮಿಸುವ ದನಗಳ ಸಂಖ್ಯೆ ಕಡಿಮೆಯಾಗುತ್ತಿದ್ದು ಸಾಕಷ್ಟು ಪ್ರಚಾರ ಮಾಡಿ ಹೆಚ್ಚಿನ ಸಂಖ್ಯೆಯಲ್ಲಿ ದನಕರುಗಳು ಬರಲು ಗಮನಹರಿಸಿ ಎಂಬ ಸಲಹೆಯೂ ಸಭೆಯಿಂದ ಕೇಳಿಬಂದಿತು.

ಸಭೆಯಲ್ಲಿ ಚುಂಚನಕಟ್ಟೆ ಉಪತಹಸೀಲ್ದಾರ್ ಮಹೇಶ್, ಆರ್.ಐ.ಚಿದಾನಂದ ದ್ವಿತೀಯ ದರ್ಜೆ ಸಹಾಯಕಿ ನವ್ಯ ಪಾರು ಪತ್ತೆದಾರ ಯತಿರಾಜ್ ಮತ್ತಿತರರು ಹಾಜರಿದ್ದರು.

ಜಿಲ್ಲಾ ಅಧ್ಯಕ್ಷರಾಗಿ ಎನ್.ನಾಗರಾಜಾಚಾರ್ ನೇಮಕ



ಬನ್ನೂರಿನ ವಿಶ್ವಕರ್ಮ ಮುಖಂಡರಾದ ಎನ್.ನಾಗರಾಜಚಾರ್ ಅವರನ್ನು ಕಾಂಗ್ರೆಸ್ ಕುಶಲಕರ್ಮಿಗಳ ವಿಭಾಗದ ಮೈಸೂರು ಜಿಲ್ಲಾ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವ ಆದೇಶ ಪತ್ರವನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ನೀಡಿದರು.

ತಿ.ನರಸೀಪುರ ಕಾಂಗ್ರೆಸ್ ಸಹಕಾರ ವಿಭಾಗಕ್ಕೆ ರಾಜೇಶ್ ನೇಮಕ



ತಿ.ನರಸೀಪುರ, ಡಿ.16– ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿಯ ಸಹಕಾರ ವಿಭಾಗದ ತಿ.ನರಸೀಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ಶ್ರೀ ರಂಗರಾಜಪುರ ಗ್ರಾಮದ ಎಸ್.ರಾಜೇಶ್ ಅವರನ್ನು ನೇಮಕ ಮಾಡಲಾಗಿದೆ.

ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ.ಶಿವಕುಮಾರ್ ಆದೇಶದ ಮೇರೆಗೆ ಕೆಪಿಸಿಸಿ ಸಹಕಾರ ವಿಭಾಗದ ರಾಜ್ಯಾಧ್ಯಕ್ಷರಾದ ಧನರಾಜ್ ತಾಳಮ್ ಪಿಳ್ಳೆ ಅವರು ರಾಜೇಶ್ ಅವರನ್ನು ನೇಮಕ ಮಾಡಿದ್ದು, ಪಕ್ಷದ ನಿಯಾಮಾನುಸಾರ ಮತ್ತು ಧ್ಯೇಯ ಸಿದ್ಧಾಂತಗಳಿಗೆ ಅನುಗುಣವಾಗಿ ಪಕ್ಷದ ಸಬಲೀಕರಣ ಕಾರ್ಯದಲ್ಲಿ ತಮ್ಮನ್ನು ಸಮರ್ಪಣಾ ಭಾವದಿಂದ ತೊಡಗಿಸಿಕೊಳ್ಳುವಂತೆ ಆದೇಶ ಪತ್ರದಲ್ಲಿ ಸೂಚಿಸಲಾಗಿದೆ. ಈ ವೇಳೆ ಸಹಕಾರ ವಿಭಾಗದ ಬ್ಲಾಕ್ ಅಧ್ಯಕ್ಷರಾಗಿ ನೇಮಕಗೊಂಡ ರಂಗರಾಜಪುರ ರಾಜೇಶ್ ತಮ್ಮ ಆಯ್ಕೆಗೆ ಸಹಕರಿಸಿದ ಕಾಂಗ್ರೆಸ್ ಪಕ್ಷದ ಮುಖಂಡರಿಗೆ ಕೃತಜ್ಞತೆ ಸಲ್ಲಿಸಿದರು.

ಹಂಪಾಪುರದಲ್ಲಿ ಜಲಾನಯನ ಮಹೋತ್ಸವ



ಹಂಪಾಪುರ: ಹಂಪಾಪುರ ಹೋಬಳಿಯ ರೈತ ಸಂಪರ್ಕ ಕೇಂದ್ರದ ಆವರಣದಲ್ಲಿ ಜಲಾನಯನ ಮಹೋತ್ಸವ ಕಾರ್ಯಕ್ರಮವನ್ನು ಹೊಮ್ಮರಗಳ್ಳಿ, ಬಾಚೇಗೌಡನಹಳ್ಳಿ, ಚಿಕ್ಕಕೆರೆಯೂರು ಮತ್ತು ಮಾದಾಪುರ ಗ್ರಾಪಂ ಅಧ್ಯಕ್ಷ ಮತ್ತು ಪಿಡಿಓ ಉದ್ಘಾಟಿಸಿದರು.

ರೈತರು ನೀರು ಮತ್ತು ಮಣ್ಣಿನ ಸಂರಕ್ಷಣೆಗೆ ಹೆಚ್ಚು ಒತ್ತು ನೀಡಬೇಕು ಅತಿಯಾದ ನೀರು ಮತ್ತು ರಸಾಯನಿಕ ಬಳಕೆಯಿಂದ ಮಣ್ಣಿನ ಫಲವತ್ತತೆ ಕ್ಷೀಣಿಸುತ್ತದೆ. ಬದು ನಿರ್ಮಾಣ ಹಾಗೂ ಕೃಷಿ ಹೊಂಡ ಮತ್ತು ಇಂಗು ಗುಂಡಿ ನಿರ್ಮಾಣ ಮಾಡುವುದರಿಂದ ಮಣ್ಣಿನ ಸವಕಳಿ ತಡೆಯಬಹುದು ಮತ್ತು ಅಂತರ್ಜಲ ಮಟ್ಟ ಹೆಚ್ಚುವುದರಿಂದ ನೀರಾವರಿ ಕೃಷಿ ಕ್ಷೇತ್ರ ಹೆಚ್ಚುತ್ತದೆ ಎಂದು ಸಹಾಯಕ ಕೃಷಿ ನಿರ್ದೇಶಕರಾದ ವೈಪ್ರಸಾದ್ ತಿಳಿಸಿದರು. ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಶಿವಲಿಂಗೇಗೌಡ ಅವರು ಮಾತನಾಡಿದರು.

ಈ ಕಾರ್ಯಕ್ರಮದ ಅಂಗವಾಗಿ ಏರ್ಪಡಿಸಿದ್ದ ಚಿತ್ರಕಲೆ ಸ್ಪರ್ಧೆ ಮತ್ತು ರಂಗೋಲಿ ಸ್ಪರ್ಧೆಯಲ್ಲಿ ವಿಜೇತ ಶಾಲಾ ಮಕ್ಕಳಿಗೆ ಬಹುಮಾನ ವಿತರಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾ ಸದ್ಯಸರಿಗೆ ಕೃಷಿ ಅಧಿಕಾರಿ ಶ್ರೀ ಸಿದ್ದಪ್ಪಸ್ವಾಮಿ ಸ್ವಾಗತಿಸಿ ನಿರೂಪಣೆ ಮಾಡಿದರು. ಅರಣ್ಯ ಇಲಾಖೆಯಿಂದ ಶ್ರಮದಾನ ನಡೆಸಲಾಯಿತು.

ಬಾಚೇಗೌಡನಹಳ್ಳಿ ಅಧ್ಯಕ್ಷೆ ಸುರ್ವಣಮ್ಮ, ಹೊಮ್ಮರಗಳ್ಳಿ ಅಧ್ಯಕ್ಷೆ ರಾಮಮ್ಮ, ಮಾದಾಪುರ ಅಧ್ಯಕ್ಷೆ ಸುಧಾ, ಬಾಚೇಗೌಡನಹಳ್ಳಿ ಪಿಡಿಓ ಸೋಮಶೇಖರ್, ಹೊಮ್ಮರಗಳ್ಳಿ ಪಿಡಿಓ ಗಣೇಶ್, ಮಾದಾಪುರ ಪಿಡಿಓ ಅಯಮ್ಮ, ಜಿಲ್ಲಾ ಜಲಾನಯನ ಸಂಯೋಜಕ ವಿಜಯ್ ಕುಮಾರ್, ಅರಣ್ಯ ಇಲಾಖೆ ಶಶಿಕುಮಾರ್, ಸಹಾಯಕ ತಾಂತ್ರಿಕ ವ್ಯವಸ್ಥಾಪಕಿ ರಕ್ಷಿತ, ಅವಿನಾಶ್ ಉಪಸ್ಥಿತರಿದ್ದರು.

ಡಿ.22, ಮೈಸೂರಲ್ಲಿ ಕನ್ನಡ ಜಾಗೃತಿ ಸಮಾವೇಶ, ರಾಜ್ಯೋತ್ಸವ

ಕನ್ನಡ ಮಾಣಿಕ್ಯ ವಿಶೇಷ ಪ್ರಶಸ್ತಿ ಪ್ರದಾನ, ಜಾನಪದ ಕಲಾ ತಂಡಗಳ ಮೆರವಣಿಗೆ



ತಿ.ನರಸೀಪುರ ಪಟ್ಟಣದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಕನ್ನಡ ಸೇನೆ ಜಿಲ್ಲಾ ಕಾರ್ಮಿಕ ಘಟಕದ ಉಪಾಧ್ಯಕ್ಷ ಕೆ.ರಾಚು ಮಾತನಾಡಿದರು.

ತಿ.ನರಸೀಪುರ, ಡಿ.16– ಕನ್ನಡ ಸೇನೆ–ಕರ್ನಾಟಕ ಸಂಘಟನೆ ವತಿಯಿಂದ ಮೈಸೂರಿನ ಕಲಾ ಮಂದಿರದ ಕಿರು ರಂಗಮಂದಿರದಲ್ಲಿ ಕನ್ನಡ ಜಾಗೃತಿ ಸಮಾವೇಶ, ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಹಾಗು ಕನ್ನಡ ಮಾಣಿಕ್ಯ ವಿಶೇಷ ಪ್ರಶಸ್ತಿ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡಸೇನೆ ಜಿಲ್ಲಾ ಕಾರ್ಮಿಕ ಘಟಕದ ಉಪಾಧ್ಯಕ್ಷ ಕೆ.ರಾಚು ತಿಳಿಸಿದರು.

ಪಟ್ಟಣದ ಲೋಕೋಪಯೋಗಿ ಅತಿಥಿಗೃಹದಲ್ಲಿ ಮಂಗಳವಾರ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಕಾರ್ಯಕ್ರಮದ ವಿವರ ನೀಡಿ ಮಾತನಾಡಿದ ಅವರು ಡಿ.22ರ ರಂದು ಕಲಾ ಮಂದಿರದಲ್ಲಿ ಬೆಳಿಗ್ಗೆ 9 ಗಂಟೆಗೆ ಹಮ್ಮಿಕೊಳ್ಳಲಾಗಿರುವ ದೊಡ್ಡ ಮಟ್ಟದ ಕಾರ್ಯಕ್ರಮದಲ್ಲಿ ತಿ.ನರಸೀಪುರ ತಾಲೂಕಿನ ಕಲಾವಿದರಾದ ಪ್ರಸನ್ನ, ತಬಲಾ ರಾಚಪ್ಪ, ತಬಲ ಮೇಕರ್ ಮೂರ್ತಿ ಹಾಗು ಸಮಾಜ ಸೇವಕ ನಾಗರಾಜುರವರಿಗೆ ಕನ್ನಡ ಮಾಣಿಕ್ಯ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ ಎಂದರು.

ಕಲಾ ಮಂದಿರದ ಕಿರುರಂಗಮಂದಿರದಲ್ಲಿ ಆಯೋಜಿಸಲಾಗಿರುವ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಮಾಜಿ ಸಚಿವರಾದ ಜಿ.ಟಿ.ದೇವೇಗೌಡ, ಶಾಸಕ ಹರೀಶ್ ಗೌಡ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಮರಿಗೌಡ, ಯಶಸ್ವಿನಿ ಸೋಮಣ್ಣ, ನಗರ ಪಾಲಿಕೆ ಮಾಜಿ ಸದಸ್ಯ ಎಸ್.ಬಿ.ಎಂ. ಮಂಜು, ಭುವನ್ ರಾಜ್ ಫೌಂಡೇಶನ್‌ನ ಚೇತನ್ ರಾಜ್, ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ಕೆವಿಸಿ ಆಸ್ಪತ್ರೆ ಮುಖ್ಯಸ್ಥರಾದ ಡಾ.ನಂದೀಶ್, ಮಹಾನಗರ ಪಾಲಿಕೆ ಮಾಜಿ ಸದಸ್ಯ ರಾಮಪ್ರಸಾದ್, ದೀಪ್ತಿ ಡೆವಲಪರ್ಸ್ ಎ.ಸಿ.ಜಗದೀಶ್, ವಾಲ್ಮೀಕಿ ಸಂಘದ ರಾಜ್ಯಾಧ್ಯಕ್ಷರಾದ ಶ್ರೀಧರ್ ನಾಯಕ್ ಸೇರಿದಂತೆ ಕನ್ನಡ ಸೇನೆ ಸಂಘಟನೆಯ ರಾಜ್ಯಾಧ್ಯಕ್ಷರಾದ ಕೆ.ಆರ್.ಕುಮಾರ್, ಜಿಲ್ಲಾಧ್ಯಕ್ಷರಾದ ಎಂ.ಯು.ಶೈಲಜಾ, ಬಿ.ಸುಂದರ್, ಗೌರವಾಧ್ಯಕ್ಷರಾದ ಕಮಲಾ ನಟರಾಜ್, ಎಸ್.ವಿಜಯಕುಮಾರ್ ಭಾಗವಹಿಸಲಿದ್ದು ಸಂಘಟನೆಯ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮ ಸಹ ಇರಲಿದೆ ಕಾರ್ಯಕ್ರಮಕ್ಕೆ ಮೊದಲು ಜಾನಪದ ಕಲಾತಂಡದೊಂದಿಗೆ ಅತಿಥಿಗಳ ಮೆರವಣಿಗೆ ನಡೆಯಲಿದೆ ಎಂದು ತಿಳಿಸಿದರು. ಟಿ.ನರಸೀಪುರ ಪಟ್ಟಣದಿಂದ ಕಾರ್ಯಕ್ರಮದ ಸ್ಥಳಕ್ಕೆ ಕರೆದೊಯ್ಯಲು ಬಸ್ ವ್ಯವಸ್ಥೆ ಮಾಡಲಾಗಿದ್ದು, ದೊಡ್ಡ ಮಟ್ಟದಲ್ಲಿ ನಡೆಯುತ್ತಿರುವ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಆಗಮಿಸಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಅವರು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಬೈರಾಪುರ ಸ್ವಾಮಿ,ಕಳ್ಳೀಪುರ ಕಾಂತರಾಜು,ತುಂಬಲ ರಾಮು,ಗಣೇಶ್, ವಡ್ಗಲ್ಲಯ್ಯ,ಐಬಿ ಶಿವು, ಯಡದೊರೆ ಬಸವರಾಜು, ಮಹೇಶ್, ಸಾಮ್ರಾಟ್ ನಾಗರಾಜು ಹಾಜರಿದ್ದರು.

ನಾಯಕ ನೌಕರರ ಸಂಘಕ್ಕೆ ಪದಾಧಿಕಾರಿಗಳ ನೇಮಕ



ಹೆಚ್.ಡಿ.ಕೋಟೆ: ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನ ತಾಲೂಕು ನಾಯಕ ನೌಕರ ಸಂಘದ ನೂತನ ಅಧ್ಯಕ್ಷರಾಗಿ ತೋರವಳ್ಳಿ ಶಿವಣ್ಣ, ಗೌರವಾಧ್ಯಕ್ಷ ಚಿಕ್ಕನಾಯಕ, ಉಪಾಧ್ಯಕ್ಷ ಬಿ.ನಾಗನಾಯಕ, ಕಾರ್ಯದರ್ಶಿ ಶಿವಲಿಂಗ ನಾಯಕ, ಸಂಘಟನಾ ಕಾರ್ಯದರ್ಶಿ ವೆಂಕಟರಂಗನಾಯಕ, ಖಜಾಂಚಿ ಎಚ್.ಕೆ.ಚಂದ್ರಶೇಖರ್, ನಿರ್ದೇಶಕರುಗಳಾದ ಕೆಂಪನಾಯಕ, ಶ್ರೀನಿವಾಸ, ಮುದ್ದನಾಯಕ, ಕೆ.ಬಿ.ಚೆನ್ನನಾಯಕ, ಲಿಂಗರಾಜು, ಭೀಮರಾಜು, ವೆಂಕಟಸುಬ್ಬ ನಾಯಕ, ಚಿಕ್ಕನಾಯಕ, ಕುಮದಾಂಬ, ರತ್ನಮ್ಮ, ದೇವಮಣಿ, ಚನ್ನನಾಯಕ, ಆರ್.ನಾಗನಾಯಕ, ಎಸ್.ಸಿ.ಮಾದೇವಪ್ಪ, ಮಾದೇವನಾಯಕ, ಎಂ.ಎಸ್.ನಾಗರಾಜನಾಯಕ, ಗೌರವ ಅಧ್ಯಕ್ಷರುಗಳಾದ ಚಿಕ್ಕನಾಯಕ, ಸಿದ್ದರಾಜು, ಶಿವಪ್ಪ, ಸಿದ್ದನಾಯ್ಕ ಅವರುಗಳನ್ನು ನೇಮಕ ಮಾಡಲಾಗಿದೆ.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ 2,800 ರೈತರ ಆತ್ಮಹತ್ಯೆ

●ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆರೋಪ ●32 ಲಕ್ಷ ರೈತರಿಗೆ 24 ಸಾವಿರ ಕೋಟಿ ಕೊಡುವ ಹುಸಿ ಭರವಸೆ ●12 ಸಾವಿರ ಕೋಟಿ ಮಾತ್ರ ಬಿಡುಗಡೆ ●ವಿಪಕ್ಷಗಳ ಹೆದರಿಸಲು ದ್ವೇಷ ಭಾಷಣದ ಬಿಲ್




ಮೈಸೂರಿನ ಬೆಂಗಳೂರು ರಸ್ತೆಯ ಟೋಲ್ ಗೇಟ್‌ನಲ್ಲಿ ಮಂಗಳವಾರ ಜೆಡಿಎಸ್ ಹಾಗೂ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಅದ್ದೂರಿ ಸ್ವಾಗತ ಕೋರಿದರು. (ಎಡಚಿತ್ರ), ಜನ್ಮ ದಿನದ ಹಿನ್ನೆಲೆ ಕುಮಾರಸ್ವಾಮಿ ಅವರು ಮೈಸೂರಿನ ಚಾಮುಂಡಿಬೆಟ್ಟದಲ್ಲಿ ನಾಡದೇವತೆ ತಾಯಿ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು. (ಬಲ ಚಿತ್ರ)

ಮೈಸೂರು, ಡಿ.16(ಬಿಎಲ್‌ಯು)– ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ 2,800 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆರೋಪಿಸಿದ್ದಾರೆ.

ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಮಂಗಳವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರೈತರ ಆತ್ಮಹತ್ಯೆಗೆ ಕಾಂಗ್ರೆಸ್ ಸರ್ಕಾರದ ರೈತ ವಿರೋಧಿ ನೀತಿ ನೇರ ಕಾರಣ ಎಂದು ಆಪಾದಿಸಿದರು.

ರಾಜ್ಯದ 32 ಲಕ್ಷ ರೈತರಿಗೆ 24 ಸಾವಿರ ಕೋಟಿ ಹಣ ಕೊಡುತ್ತೇವೆ ಎಂದು ಭರವಸೆ ನೀಡಿದ್ದರು. ಆದರೆ 12 ಸಾವಿರ ಕೋಟಿ ರೂಪಾಯಿ ಮಾತ್ರ ನೀಡಿದ್ದಾರೆ. ಇದು ಸರ್ಕಾರದ ಆರ್ಥಿಕ ಹೀನಾಯ ಪರಿಸ್ಥಿತಿ ಹಾಗೂ ಆಡಳಿತ ವೈಫಲ್ಯವನ್ನು ತೋರಿಸುತ್ತದೆ ಎಂದು ಕುಮಾರಸ್ವಾಮಿ ಟೀಕಿಸಿದರು.

ಈ ಸರ್ಕಾರದ ಭ್ರಷ್ಟತೆ ಬಗ್ಗೆ ಏನೇ ಹೇಳಿದರೂ ಪ್ರಯೋಜನವಿಲ್ಲ. ಈ ಹಿನ್ನೆಲೆ ಸೂಕ್ತ ಸಮಯಕ್ಕಾಗಿ ಕಾಯುತ್ತಿದ್ದೇನೆ. ಡಿ.20 ನಂತರ ಮಹತ್ವದ ಸುದ್ದಿಗೋಷ್ಠಿ ನಡೆಸುತ್ತೇನೆ. ಅಂದು ಹಲವು ಮಹತ್ವದ ವಿಚಾರಗಳ ಬಗ್ಗೆ ದಾಖಲಾತಿ ಸಮೇತ ಜನರ ಮುಂದಿಡುತ್ತೇನೆ. ಈ ಸರ್ಕಾರಕ್ಕೆ ರೈತರು ಸೇರಿದಂತೆ ಜನ ಸಾಮಾನ್ಯರ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ ಎಂಬುದನ್ನು ಮನವರಿಕೆ ಮಾಡಿಕೊಡುತ್ತೇನೆ ಎಂದು ತಿಳಿಸಿದರು.

ದ್ವೇಷ ಭಾಷಣದ ಬಗ್ಗೆ ಕಾಯ್ದೆ ಜಾರಿ ಮಾಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಕುಮಾರಸ್ವಾಮಿ ಅವರು, ವಿರೋಧ ಪಕ್ಷಗಳ ಬಾಯಿ ಮುಚ್ಚಿಸಲು ತಂದಿರುವ ಬಿಲ್ ಇದಾಗಿದೆ. ಆದರೆ ಇವರ ಕುತಂತ್ರ ಯಶಸ್ವಿಯಾಗುವುದಿಲ್ಲ. ಇಂತಹ ಯಾವುದೇ ಕಾಯ್ದೆ ಜಾರಿ ಮಾಡಿದರೂ ವಿರೋಧ ಪಕ್ಷಗಳ ಬಾಯಿ ಮುಚ್ಚಿಸಲು ಸಾಧ್ಯವಿಲ್ಲ ಎಂದು ಕುಮಾರಸ್ವಾಮಿ ಅವರು ಕಾಂಗ್ರೆಸ್ ಸರ್ಕಾರಕ್ಕೆ ಟಾಂಗ್ ನೀಡಿದರು.

ಮೈಸೂರಿನಲ್ಲಿ ಹೆಚ್‌ಡಿಕೆಗೆ ಅದ್ದೂರಿ ಸ್ವಾಗತ

ಜನ್ಮ ದಿನ ಆಚರಿಸಿಕೊಳ್ಳುತ್ತಿರುವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಮೈಸೂರಿನಲ್ಲಿ ಇಂದು ಅದ್ದೂರಿ ಸ್ವಾಗತ ಕೋರಲಾಯಿತು. ಮೈಸೂರಿನ ಬೆಂಗಳೂರು ರಸ್ತೆಯ ಟೋಲ್ ಗೇಟ್ ಬಳಿ ಜೆಡಿಎಸ್ ಮತ್ತು ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಕುಮಾರಸ್ವಾಮಿ ಅವರಿಗೆ ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು. ಈ ವೇಳೆ ಪಟಾಕಿ ಸಿಡಿಸಿ ಸಂಭ್ರಮಿಸಲಾಯಿತು.

ಮಾಜಿ ಸಚಿವ ಸಾ.ರಾ.ಮಹೇಶ್, ಶಾಸಕ ಜಿ.ಡಿ.ಹರೀಶ್‌ಗೌಡ, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಶಾಸಕರಾದ ಅಶ್ವಿನ್ ಕುಮಾರ್, ಮಹದೇವು, ಮಾಜಿ ಸಂಸದ ಪ್ರತಾಪ್‌ಸಿಂಹ, ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ ನೂರಾರು ಮಂದಿ ಹೆಚ್‌ಡಿಕೆ ಅವರನ್ನು ಸ್ವಾಗತಿಸಿದರು.

ತರುವಾಯ ಕುಮಾರಸ್ವಾಮಿ ಅವರು ಚಾಮುಂಡಿಬೆಟ್ಟಕ್ಕೆ ತೆರಳಿ ನಾಡದೇವತೆ ತಾಯಿ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಹಾಸೇನಾ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಡೆವಿಲ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಕಿಸ್ ಕಿಸ್ಕೋ ಪ್ಯಾರ್ ಕರೂ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಡೆವಿಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೆವಿಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಅಖಂಡ–2 (ತೆ)	4 ಪ್ರದರ್ಶನಗಳು
ಸಂಗಂ	
ಡೆವಿಲ್ (ಕ)	3 ಪ್ರದರ್ಶನಗಳು
ಲಿಡೋ	
ಅಖಂಡ–2 (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕಾಂತಾರ–2 (ಕ)	4 ಪ್ರದರ್ಶನಗಳು

ಡಿ.21ರಂದು ಮೈಸೂರಲ್ಲಿ ಹೆಜ್ಜೆ–ಗೆಜ್ಜೆ ರಾಷ್ಟ್ರೀಯ ನೃತ್ಯೋತ್ಸವ ಕಾರ್ಯಕ್ರಮ

ಮೈಸೂರು, ಡಿ.16(ಜಿಎ)–ಮೈಸೂರಿನ ನಿಮಿಷಾಂಬ ಡ್ಯಾನ್ಸ್ ಪ್ರಮೋಟರ್ಸ್ 29ನೇ ವಾರ್ಷಿಕೋತ್ಸವದ ಅಂಗವಾಗಿ ಡಿ.21 ರ ಸಂಜೆ 5ಕ್ಕೆ ಕಲಾ ಮಂದಿರದಲ್ಲಿ 'ಹೆಜ್ಜೆ–ಗೆಜ್ಜೆ ರಾಷ್ಟ್ರೀಯ ನೃತ್ಯೋತ್ಸವ' ಆಯೋಜಿಸಲಾಗಿದೆ ಎಂದು ಸಂಸ್ಥಾಪಕ ವಿದ್ವಾನ್ ಶ್ರೀಧರ್ ಜೈನ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮಕ್ಕೆ ವಿಶೇಷ ಅತಿಥಿಗಳನ್ನು ಆಹ್ವಾನ ಮಾಡಬೇಕು ಎಂಬ ದೃಷ್ಟಿಯಿಂದ ಕಲಾವಿದರ ಕುಟುಂಬವಾದ ಹಿರಿಯ ನಟಿ ಡಾ. ಗಿರಿಜಾ ಲೋಕೇಶ್, ಪೂಜಾ ಲೋಕೇಶ್, ಸೃಜನ್ ಲೋಕೇಶ್ ಹಾಗೂ ಗ್ರೀಷ್ಮಾ ಸೃಜನ್ ಲೋಕೇಶ್ ಮುಖ್ಯ ಅತಿಥಿಗಳಾಗಿ ಆಹ್ವಾನಿಸಲಾಗಿದೆ ಎಂದರು.

ಕಳೆದ ಬಾರಿ ಕಾರ್ಯಕ್ರಮ ಆಯೋಜಿಸಿದ್ದಾಗ ಸುಮಾರು ಒಂದೂವರೆ ಸಾವಿರ ಮಂದಿ ವೀಕ್ಷಿಸಿದರು. ಈ ಬಾರಿ ಸುಮಾರು 200 ಕಲಾವಿದರು ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಶಿವ ಪಾರ್ವತಿ ನೃತ್ಯ ಸ್ಪರ್ಧೆ, ಶಿವ ಪಾರ್ವತಿ ಪ್ರೀತಿ, ಪೂರ್ಣ ನೃತ್ಯ ತಾಂಡವ ಈ ಬಾರಿಯ ವಿಶೇಷವಾಗಿದೆ. ಇವುಗಳನ್ನು 5ರಿಂದ 59 ವರ್ಷದವರೆಗಿನ ಕಲಾವಿದರು ಪ್ರಸ್ತುತ ಪಡಿಸಲಿದ್ದಾರೆ. ಉಚಿತ ಪ್ರವೇಶವಿದೆ ಎಂದರು.

ಇದು ಸುಮಾರು ಎರಡು ಗಂಟೆಯ ಕಾರ್ಯಕ್ರಮವಾಗಿದ್ದು, ನಿರೂಪಣೆ ಇರುವುದಿಲ್ಲ. ತಡೆ ರಹಿತವಾಗಿ ಸಾಗುತ್ತದೆ. ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕೆಂದು ತಮ್ಮ ಸಂಸ್ಥೆ ಶ್ರಮಿಸುತ್ತಿದೆ. ಕೂಲಿ ಕಾರ್ಮಿಕರ ಮಕ್ಕಳಿಗೂ ಇಲ್ಲಿ ಉಚಿತವಾಗಿ ಭರತನಾಟ್ಯ ಕಲಿಸಲಾಗುತ್ತಿದೆ ಎಂದು ವಿವರಿಸಿದರು.

ಇತ್ತೀಚಿನ ದಿನಗಳಲ್ಲಿ ಭರತನಾಟ್ಯ ಹೊರತು ಪಡಿಸಿ, ಅನೇಕ ಕಡೆ ಬೇರೆ ಪ್ರಕಾರಗಳ ನೃತ್ಯ ಶಾಲೆಗಳು ಆರಂಭವಾಗಿದ್ದು, ಚಿಕ್ಕ ವಯಸ್ಸಿನ ಹುಡುಗರು ಗುರು ಸ್ಥಾನದಲ್ಲಿ ನಿಂತು ತರಬೇತಿ ನೀಡುತ್ತಿದ್ದಾರೆ. ಆದರೆ, ಅವರಿಗೆ ಯಾವುದೇ ವಿದ್ವತ್ ಇರುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಜನಾ ನಾರಾಯಣ್, ರೇಖಾಶ್ರೀ ಮಂಜುನಾಥ್, ಪಲ್ಲವಿ ಶೆಟ್ಟಿ ಉಪಸ್ಥಿತರಿದ್ದರು.

ಮೈಸೂರು–ಚಾಮರಾಜನಗರದ ನಡುವೆ ಹೆಚ್ಚುವರಿ ರೈಲು ಸಂಚಾರಕ್ಕೆ ಪರಿಶೀಲನೆ

ರೈಲ್ವೆ ಇಲಾಖೆಯ ಸಾರ್ವಜನಿಕ ಸಂಪರ್ಕಾಧಿಕಾರಿ ಗಿರೀಶ್ ಧರ್ಮರಾಜ್ ಕಲಗೊಂಡ ಭರವಸೆ



ಮೈಸೂರು, ಡಿ.16(ಬಿಎಲ್‌ಯು)– ಮೈಸೂರು ರೈಲ್ವೆ ನಿಲ್ದಾಣದ ಪುನರ್ ನಿರ್ಮಾಣ ಕಾರ್ಯ ಮುಗಿದ ನಂತರ ಮೈಸೂರು ಹಾಗೂ ಚಾಮರಾಜನಗರದ ನಡುವೆ ಹೆಚ್ಚುವರಿ ರೈಲು ಸಂಚಾರದ ವ್ಯವಸ್ಥೆ ಮಾಡಲಾಗುವುದು ಎಂದು ನೈರುತ್ಯ ರೈಲ್ವೆಯ ಮೈಸೂರು ವಿಭಾಗದ ಸಾರ್ವಜನಿಕ ಸಂಪರ್ಕಾಧಿಕಾರಿ ಗಿರೀಶ್ ಧರ್ಮರಾಜ್ ಕಲಗೊಂಡ ಭರವಸೆ ನೀಡಿದ್ದಾರೆ.

'ಮೈಸೂರು ಮಿತ್ರ' ಡಿ.5 ರ ಸಂಚಿಕೆಯಲ್ಲಿ ಮೈಸೂರಿನ ಜನತಾ ನಗರದ ಅಹಲ್ಯ ಸಿ.ನಾ.ಚಂದ್ರ ಎಂಬುವರು "ಮೈಸೂರಿನಿಂದ ಚಾಮರಾಜನಗರಕ್ಕೆ ಹೆಚ್ಚಿನ ರೈಲು ಸೌಲಭ್ಯ ಕಲ್ಪಿಸಿ" ಎಂಬ ಶೀರ್ಷಿಕೆಯಲ್ಲಿ ಮನವಿ ಸಲ್ಲಿಸಿರುವ ಓದುಗರ ಪತ್ರಕ್ಕೆ ಗಿರೀಶ್ ಧರ್ಮರಾಜ್ ಕಲಗೊಂಡ ಪ್ರತಿಕ್ರಿಯೆ ನೀಡಿದ್ದಾರೆ.

ಪ್ರಸ್ತುತ ಮೈಸೂರು ಹಾಗೂ ಚಾಮರಾಜನಗರದ ನಡುವೆ 6 ಜೋಡಿ ರೈಲುಗಳು, ಮೈಸೂರು ಮತ್ತು ನಂಜನಗೂಡು ಪಟ್ಟಣದ ನಡುವೆ 7 ಜೋಡಿ ರೈಲು ಹಾಗೂ ಮೈಸೂರು ಮತ್ತು ಅಶೋಕಪುರಂ ನಡುವೆ 15 ಜೋಡಿ ರೈಲುಗಳು ಸಂಚರಿಸುತ್ತಿವೆ. ಈ ರೈಲುಗಳ ಮೂಲಕ ಪ್ರಯಾಣಿಕರ ಬೇಡಿಕೆಯನ್ನು ಸಮರ್ಪಕವಾಗಿ ಪೂರೈಸಲಾಗುತ್ತಿದೆ ಎಂದು ಹೇಳಿದ್ದಾರೆ.

ಮೈಸೂರು ರೈಲ್ವೆ ನಿಲ್ದಾಣದಲ್ಲಿ ಪಿಟ್ ಲೈನ್‌ಗಳು ಸಂಪೂರ್ಣವಾಗಿ ತುಂಬಿದ್ದು, ಪ್ಲಾಟ್ ಫಾರ್ಮ್‌ಗಳು ದಟ್ಟಣೆಯಿಂದ ಕೂಡಿವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಮೈಸೂರು ಮತ್ತು ಚಾಮರಾಜನಗರದ ನಡುವೆ ಹೆಚ್ಚುವರಿ ಸೇವೆಯನ್ನು ಪರಿಚಯಿಸುವುದು ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ.

ಆದರೂ ಮೈಸೂರು ರೈಲ್ವೆ ನಿಲ್ದಾಣದ ಪುನರ್ ನಿರ್ಮಾಣ ಕಾರ್ಯ ಪೂರ್ಣಗೊಂಡ ನಂತರ ಹೆಚ್ಚುವರಿ ಪಿಟ್‌ಲೈನ್, ಪ್ಲಾಟ್ ಫಾರಂಗಳು ಲಭ್ಯತೆಗೆ ಸಿಗಬೇಕು. ತರುವಾಯ ಹೆಚ್ಚುವರಿ ಸೇವೆಗಳನ್ನು ನಿರ್ವಹಿಸುವ ಕಾರ್ಯ ಸಾಧ್ಯತೆಯನ್ನು ಮರು ಪರಿಶೀಲನೆ ಮಾಡಲಾಗುವುದು ಎಂದು ಗಿರೀಶ್ ಧರ್ಮರಾಜ್ ಕಲಗೊಂಡ ಅವರು ತಿಳಿಸಿದ್ದಾರೆ.

ಲೋಕ ಅದಾಲತ್‌ನಲ್ಲಿ 14 ಸಾವಿರ ಪ್ರಕರಣ ಇತ್ಯರ್ಥ



ಮೈಸೂರು ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ರಾಷ್ಟ್ರೀಯ ಲೋಕ ಅದಾಲತ್ ನಡೆಯಿತು. ಜಿಲ್ಲಾ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಉಷಾರಾಣಿ, ಹಿರಿಯ ಸಿವಿಲ್ ನ್ಯಾಯಾಧೀಶರಾದ ಕೆ.ಕೆ.ಅಮರ್‌ನಾಥ್, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಕಾರ್ಯದರ್ಶಿ ಎ.ಜಿ.ಸುಧೀರ್ ಮತ್ತಿತರರಿದ್ದರು.

ಮೈಸೂರು, ಡಿ.16(ಎಂಕೆ)– ಮೈಸೂರು ನಗರ ಮತ್ತು ತಾಲೂಕು ನ್ಯಾಯಾಲಯಗಳಲ್ಲಿ ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ 14,077 ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ.

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದ ಮೇರೆಗೆ ಡಿ.13 ರಂದು ನಡೆದ ಲೋಕ ಅದಾಲತ್‌ನಲ್ಲಿ ಮೈಸೂರು ನಗರ ಮತ್ತು ತಾಲೂಕು ನ್ಯಾಯಾಲಯಗಳ ವ್ಯಾಪ್ತಿಯಲ್ಲಿದ್ದ 65,170 ಸಿವಿಲ್ ಮತ್ತು 65,666 ಕ್ರಿಮಿನಲ್ ಸೇರಿ ಒಟ್ಟು 1,30,887 ಪ್ರಕರಣಗಳಲ್ಲಿ ರಾಜಿ ಸಂಧಾನಕ್ಕೆ ಒಳಪಟ್ಟ 26,694 ಪ್ರಕರಣಗಳ ಪೈಕಿ 14,077 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ.

ಸಂಚಾರ ನಿಯಮ ಉಲ್ಲಂಘನೆಗೆ ಒಳಪಟ್ಟ 10,41,732 ಪ್ರಕರಣಗಳಲ್ಲಿ ದಂಡ ಪಾವತಿಗೆ ಶೇ.50 ರಷ್ಟು ರಿಯಾಯ್ತಿ ನೀಡಿದ್ದರಿಂದ 23,61,37,150 ರೂ.ಸಂಗ್ರಹವಾಗಿದೆ. ಹಾಗೆಯೇ 1991–92 ರಿಂದ 2019–2020ರ ಅವಧಿಯಲ್ಲಿ ದಾಖಲಾಗಿ, ಪಾವತಿಗೆ ಬಾಕಿಯಿರುವ ಪ್ರಕರಣಗಳಲ್ಲಿ 116 ಪ್ರಕರಣಗಳು ಇತ್ಯರ್ಥವಾಗಿದ್ದು, 1,41,900 ರೂ. ಸ್ವೀಕೃತವಾಗಿದೆ.

ಒಂದಾದ 42 ಜೋಡಿ: ಕೌಟುಂಬಿಕ ವಿವಾದದ ಪ್ರಕರಣಗಳಲ್ಲಿ ಮೈಸೂರು ನಗರ ಹಾಗೂ ಮೈಸೂರು ತಾಲೂಕು ನ್ಯಾಯಲಯಗಳಿಗೆ ಸಂಬಂಧಿಸಿದಂತೆ ಒಟ್ಟು 42 ದಂಪತಿಗಳು ತಮ್ಮ ನಡುವಿನ ವ್ಯಾಜ್ಯಗಳನ್ನು ಬಗೆಹರಿಸಿಕೊಂಡು ಒಂದಾಗಿದ್ದಾರೆ. ಹಾಗೆಯೇ ಎಲ್ಲಾ ಪ್ರಕರಣಗಳಿಗೆ ಸಂಬಂಧಿಸಿದಂತೆ ರಾಜಿ ಸಂಧಾನ ಮೂಲಕ 73,55,63,277 ರೂ. ಸಂದಾಯವಾಗಿದೆ.

ಲೋಕ ಅದಾಲತ್‌ನಲ್ಲಿ ಸಹಕರಿಸಿದ ವಕೀಲರ ಸಂಘದ ಪದಾಧಿಕಾರಿಗಳು, ಎಲ್ಲಾ ವಕೀಲರು ಹಾಗೂ ಕಕ್ಷಿಗಾರರು, ಪೊಲೀಸ್ ಇಲಾಖೆ ಸೇರಿದಂತೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಗೂ ಮೈಸೂರು ಜಿಲ್ಲಾ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಉಷಾರಾಣಿ ಕೃತಜ್ಞತೆ ಸಲ್ಲಿಸಿದರು. ಈ ವೇಳೆ ಹಿರಿಯ ಸಿವಿಲ್ ನ್ಯಾಯಾಧೀಶರಾದ ಕೆ.ಕೆ.ಅಮರ್ ನಾಥ್, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಕಾರ್ಯದರ್ಶಿ ಎ.ಜಿ.ಸುಧೀರ್ ಮತ್ತಿತರರಿದ್ದರು.

ಡಿ.19: ಅರಸು ಚುಟುಕು ಚಿತ್ತಾರಗಳು ಕೃತಿ ಲೋಕಾರ್ಪಣೆ

ಮೈಸೂರು, ಡಿ. 16– ಅನ್ವೇಷಣಾ ಸೇವಾ ಟ್ರಸ್ಟ್ ವತಿಯಿಂದ ವೈದ್ಯ ವಾರ್ತಾ ಪ್ರಕಾಶನ ಪ್ರಕಟಿಸಿರುವ 20 ಮಂದಿ ಪ್ರಗತಿಪರ ಚಿಂತಕ ಮಹಿಳಾ ಸಾಹಿತಿಗಳು ಮಾಡಿರುವ ವಿಮರ್ಶೆಯೊಂದಿಗೆ ಕೂಡಿರುವ ಚುಟುಕು ಜಾಹ್ನವಿ ಸಿ. ಸೀತಾಲಕ್ಷ್ಮಿ ವರ್ಮ ಸಂಪಾದಿಸಿರುವ ಚುಟುಕು ಯುಗಾಚಾರ್ಯ ಡಾ. ಎಂ.ಜಿ.ಆರ್. ಅರಸ್ ಅವರ 'ಅರಸು ಚುಟುಕು ಚಿತ್ತಾರಗಳು' ಕೃತಿ ಲೋಕಾರ್ಪಣೆ ಸಮಾರಂಭವನ್ನು ಡಿ. 19 ರಂದು ಬೆಳಗ್ಗೆ 10.45ಕ್ಕೆ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಾಜಿ ಸಚಿವೆ ರಾಣಿ ಸತೀಶ್ ಕಾರ್ಯಕ್ರಮ ಉದ್ಘಾಟಿಸುವರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ. ಪದ್ಮಾಶೇಖರ್ ಅವರು ಕೃತಿ ಲೋಕಾರ್ಪಣೆ ಮಾಡುವರು. ಕಂಠೀರವ ಸ್ಟುಡಿಯೋ ಮಾಜಿ ಅಧ್ಯಕ್ಷೆ ವಿಜಯಲಕ್ಷ್ಮಿ ಅರಸ್ ಅಧ್ಯಕ್ಷತೆ ವಹಿಸುವರು. ಶಿಕ್ಷಣ ತಜ್ಞ ಭ್ರಮರ ಬಹದ್ದೂರ್ 'ಅರಸು ಚುಟುಕು ಚಿತ್ತಾರಗಳು' ಪ್ರಥಮ ಕೃತಿ ಸ್ವೀಕರಿಸುವರು. ಬೆಂಗಳೂರು ದೂರದರ್ಶನದ ವಿಶ್ರಾಂತ ನಿರ್ದೇಶಕಿ ಡಾ. ನಿರ್ಮಲ ಸಿ. ಯಲಿಗಾರ್ ಮತ್ತು ಕೃತಿ ಸಂಪಾದಕರಾದ ವಿ. ಸೀತಾಲಕ್ಷ್ಮೀವರ್ಮ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಬಲಿಜ ಸಂಘದ 2026ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ

ಮೈಸೂರು,ಡಿ.16(ಎಸ್‌ಪಿಎನ್)–ಮೈಸೂರು ಕುವೆಂಪುನಗರ ಸೋಮಾನಿ ಕಾಲೇಜು ಸಮೀಪದ ರಾಘವೇಂದ್ರ ಸ್ವಾಮಿ ಮಠದಲ್ಲಿ ಡಿ.21ರಂದು ಬೆಳಗ್ಗೆ 9 ಗಂಟೆಗೆ ಶ್ರೀ ಕೈವಾರ ಯೋಗಿ ನಾರಾಯಣೇ ಯತೀಂದ್ರರ ಬಲಿಜ(ಬಣಜಿಗ) ಸಂಘದ ವತಿಯಿಂದ 2026ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ, ಪ್ರತಿಭಾ ಪುರಸ್ಕಾರ ಹಾಗೂ ಸತ್ಯನಾರಾಯಣ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದಲ್ಲಿ ಬಲಿಜ ಸಂಘದ ಜಿಲ್ಲಾಧ್ಯಕ್ಷರಾದ ಮೀನಾ ತೂಗುದೀಪ ಶ್ರೀನಿವಾಸ್ ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದು, ಮಾಜಿ ಅಧ್ಯಕ್ಷ ರೇಣು, ಡಾ.ಬಿ. ಗೋವಿಂದಪ್ಪ ಅವರು, ಕೈವಾರ ತಾತಯ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಲಿದ್ದಾರೆ 'ಮೈಸೂರು ಮಿತ್ರ' ಅಂಕಣಕಾರರಾದ ಗುಬ್ಬಿಗೂಡು ರಮೇಶ್ 2026ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಮಾಡಲಿದ್ದಾರೆ. ನಂತರ ಮೈಸೂರು ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡಲಿದ್ದು, ವೈದ್ಯಕೀಯ ಸ್ನಾತಕೋತ್ತರ ಪದವಿ ಪಡೆದ ಡಾ.ಕೆ.ಅಪೂರ್ವ, ಡಾ.ಕೆ.ಎನ್.ಅರ್ಜುನ, ಡಾ.ಕೆ.ಎನ್.ಕಾವ್ಯ ಅವರನ್ನು ಸನ್ಮಾನಿಸಲಿದ್ದಾರೆ.

ಹಿರಿಯ ವಿದ್ಯಾರ್ಥಿಗಳ ಸಂಘದ ಸಭೆ

ಮೈಸೂರು, ಡಿ. 16– ವಿಶ್ವಪ್ರಜ್ಞ ವಿದ್ಯಾಸಂಸ್ಥೆಯ ಹಿರಿಯ ವಿದ್ಯಾರ್ಥಿಗಳ ಸಭೆಯನ್ನು ಡಿ. 21 ರ ಭಾನುವಾರದಂದು ಬೆಳಿಗ್ಗೆ 10.30ಕ್ಕೆ ಶಾಲೆಯ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಈ ಸಭೆಯಲ್ಲಿ ಹಿರಿಯ ವಿದ್ಯಾರ್ಥಿಗಳೆಲ್ಲರೂ ತಪ್ಪದೆ ಭಾಗವಹಿಸಬೇಕೆಂದು ಕೋರಲಾಗಿದೆ. ಈ ಸಭೆಯಲ್ಲಿ ಹಿರಿಯ ವಿದ್ಯಾರ್ಥಿಗಳ ಆಡಳಿತ ಮಂಡಳಿಯ ರೂಪುರೇಷೆಗಳನ್ನು ಚರ್ಚಿಸಿ ತೀರ್ಮಾನಿಸಲಾಗುವುದು. ಹೆಚ್ಚಿನ ವಿವರಗಳಿಗಾಗಿ ಶ್ರೀಮತಿ ಉಷಾ, ಮೊ. 9108896871 ಅವರನ್ನು ಸಂಪರ್ಕಿಸಬಹುದು.

ಮೈಸೂರು ಜಿಲ್ಲೆಯಲ್ಲಿ ಶೇ.16ರಷ್ಟು ಹೆಚ್ಚುವರಿ ಹಾಲು ಉತ್ಪಾದನೆ

●ಹೈನುಗಾರಿಕೆಯಿಂದ ರೈತರಿಗೆ ನಿಗದಿತ ಸಮಯದಲ್ಲಿ ಹಣ ●ವಿದೇಶಗಳಿಗೂ ರಫ್ತಾಗುತ್ತಿರುವ ನಂದಿನಿ ತುಪ್ಪ



ಮೈಸೂರು, ಡಿ.16(ಬಿಎಲ್‌ಯು)– ಹಾಲು ಉತ್ಪಾದಕರಿಗೆ 4 ರೂಪಾಯಿ ಹೆಚ್ಚುವರಿ ಹಣ ನೀಡುತ್ತಿರುವ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಹಾಲು ಉತ್ಪಾದನೆಯ ಪ್ರಮಾಣ ಶೇ.16ರಷ್ಟು ಹೆಚ್ಚಾಗಿದೆ.

ಹೈನೋದ್ಯಮ ರೈತರಿಗೆ ಲಾಭದಾಯಕ ಮಾರ್ಗವಾಗಿದೆ. ಇದರಿಂದ ಹಸುಗಳ ಸಾಕಾಣಿಕೆ ಸಂಖ್ಯೆ ಕೂಡ ಹೆಚ್ಚಾಗಿದೆ. ಇದೇ ವೇಳೆ ಸರ್ಕಾರ ಹಾಲು ಉತ್ಪಾದಕರಿಗೆ 4 ರೂ. ಹೆಚ್ಚುವರಿ ಹಣ ನೀಡುತ್ತಿದೆ. ಇದರಿಂದ ಉತ್ತೇಜನಗೊಂಡ ರೈತರು ಹೈನೋದ್ಯಮದಲ್ಲಿ ಹೆಚ್ಚಾಗಿ ತೊಡಗಿದ್ದಾರೆ.

ಭತ್ತ, ರಾಗಿ, ಜೋಳ, ತರಕಾರಿ ಸೇರಿದಂತೆ ಯಾವುದೇ ಬೆಳೆ ಬೆಳೆದರೂ ಸೂಕ್ತ ಬೆಲೆ ಸಿಗುವುದಿಲ್ಲ. ಒಂದೊಂದು ಬಾರಿ ಬೆಲೆ ಪಾತಾಳಕ್ಕೆ ಇಳಿದಾಗ ರೈತರು ಮಾರುಕಟ್ಟೆಯಲ್ಲಿ ಆಹಾರ ಧಾನ್ಯ ಸೇರಿದಂತೆ ತರಕಾರಿಯನ್ನು ರಸ್ತೆಯಲ್ಲಿ ಸುರಿದು ಆಕ್ರೋಶ ವ್ಯಕ್ತಪಡಿಸಿ ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ಹಾಕಿದ ಬಂಡವಾಳ ಕೂಡ ಸಿಗದೆ ದುಃಖದಿಂದ ಊರಿಗೆ ಹೋಗುತ್ತಾರೆ.

ಆದರೆ ಹೈನೋದ್ಯಮದಲ್ಲಿ ಈ ರೀತಿ ಇರುವುದಿಲ್ಲ. ಹಾಲಿನ ಬೆಲೆ ಸ್ಥಿರವಾಗಿರುತ್ತದೆ. ಈ ತನಕ ಹಾಲಿನ ಬೆಲೆ ಹೆಚ್ಚಳವಾಗಿದೆಯೇ ಹೊರತು, ಕಡಿಮೆಯಾಗಿಲ್ಲ. ಇದರ ಮಧ್ಯೆ ಸರ್ಕಾರ ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ ನೀಡುತ್ತಿದೆ.

ಅಲ್ಲದೆ ಡೈರಿಗೆ ಹಾಲು ಹಾಕಿದ ನಂತರ ನಿಗದಿತ ದಿನಾಂಕದಂದು ಸರಿಯಾಗಿ ಹಾಲು ಮಾರಾಟದ ಹಣ ಉತ್ಪಾದಕರ ಕೈ ಸೇರುತ್ತದೆ. ಇದರಿಂದ ಹೈನೋದ್ಯಮ ಹೆಚ್ಚು ಜನರನ್ನು ಆಕರ್ಷಿಸುತ್ತಿದೆ.

ಗ್ರಾಹಕರು ಖರೀದಿ ಮಾಡುವ ಹಾಲಿನ ಬೆಲೆಯನ್ನು ಹೆಚ್ಚಳ ಮಾಡಿ, ಅದನ್ನು ಹಾಲು ಉತ್ಪಾದಕರಿಗೆ ಸರ್ಕಾರ ನೀಡುತ್ತಿದೆ. ಈಗ ಹಂತ ಹಂತವಾಗಿ ಹಾಲು ಉತ್ಪಾದಕರು ನೀಡುವ ಹಾಲಿನ ಬೆಲೆಯನ್ನು ನಾಲ್ಕು ರೂಪಾಯಿ ಹೆಚ್ಚಳ ಮಾಡಲಾಗಿದೆ. ಇದರಿಂದ ಹೈನೋದ್ಯಮ ರೈತರನ್ನು ಆಕರ್ಷಿಸುತ್ತಿದ್ದು, ಮೈಸೂರು ಜಿಲ್ಲೆ ಒಂದರಲ್ಲೇ ಶೇ.16 ರಷ್ಟು ಹಾಲು ಉತ್ಪಾದನೆ ಹೆಚ್ಚಾಗಿದೆ.

ಜಾಗತಿಕ ಮಟ್ಟದಲ್ಲಿ ನಂದಿನಿ ಉತ್ಪನ್ನಗಳಿಗೆ ಬೇಡಿಕೆ

ಇತರೆ ವಸ್ತುಗಳಂತೆ ಹಾಲನ್ನು ಶೇಖರಣೆ ಮಾಡಲು ಸಾಧ್ಯವಿಲ್ಲ. ಇದರಿಂದ ಹೆಚ್ಚುವರಿ ಹಾಲನ್ನು ಏನು ಮಾಡುವುದು ಎಂದು ಮೈಮುಲ್ ಅಧಿಕಾರಿಗಳು ತಲೆ ಮೇಲೆ ಕೈ ಹೊತ್ತಿ ಕುಳಿತ್ತಿದ್ದರು. ತುಪ್ಪ, ಪೇಡ ಸೇರಿದಂತೆ ಇತರೆ ಉಪ ಉತ್ಪನ್ನಗಳನ್ನು ತಯಾರು ಮಾಡಿದರೂ ಹಾಲು ಶೇಖರಣೆ ಹೆಚ್ಚಾಗಿತ್ತು.

ಆದರೆ ನಂದಿನಿ ಉತ್ಪನ್ನಗಳನ್ನು ರಫ್ತು ಆರಂಭಿಸಿದಾಗ ಜಾಗತಿಕ ಮಾರುಕಟ್ಟೆಯಲ್ಲಿ ನಂದಿನಿ ತನ್ನ ಪ್ರಾಬಲ್ಯ ಸಾಧಿಸಿತು. ಇದರಿಂದ ದಿಢೀರ್ ಆಗಿ ನಂದಿನಿ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಯಿತು. ಮೈಸೂರು ಸೇರಿದಂತೆ ರಾಜ್ಯದ ಇತರೆ ಜಿಲ್ಲೆಗಳಿಂದ ಉತ್ಪಾದನೆಯಾಗುವ ಹೆಚ್ಚುವರಿ ಹಾಲನ್ನು ವಿವಿಧ ಉತ್ಪಾದನೆಗೆ ಬಳಸಿಕೊಳ್ಳಲಾಗುತ್ತಿದೆ. ಈ ಮೂಲಕ ಕರ್ನಾಟಕ ಹಾಲು ಮಹಾ ಮಂಡಳಿ (ಕೆಎಂಎಫ್) ನಂದಿನಿ ತುಪ್ಪವನ್ನು ಸೌದಿ ಅರೇಬಿಯಾ, ಬಾಂಗ್ಲಾದೇಶ, ಅಮೇರಿಕಾ, ಆಸ್ಟ್ರೇಲಿಯಾ ದೇಶಗಳಿಗೆ 15 ಟನ್ ರಫ್ತು ಮಾಡಲಾಗುತ್ತಿದೆ. ಈ ಮೂಲಕ ನಂದಿನಿ ಉತ್ಪನ್ನಗಳಿಗೆ ಜಾಗತಿಕ ಮನ್ನಣೆ ದೊರೆತಿದೆ.

ಬೇಡಿಕೆಗೆ ತಕ್ಕಂತೆ ಹಾಲು ಉತ್ಪಾದನೆ

ಈ ಮೊದಲು ಹೆಚ್ಚುವರಿ ಹಾಲು ಉತ್ಪಾದನೆಯಾಗುತ್ತಿತ್ತು. ಆದರೆ ಈಗ ಬೇಡಿಕೆಗೆ ತಕ್ಕಂತೆ ಹಾಲು ಉತ್ಪಾದನೆಯಾಗುತ್ತಿದೆ. ಮೈಸೂರಿನಲ್ಲಿ ಉತ್ಪಾನೆಯಾಗುವ ಹಾಲನ್ನು ಕ್ಷೀರ ಭಾಗ್ಯ ಯೋಜನೆಯಲ್ಲಿ ಶಾಲಾ ಮಕ್ಕಳಿಗೆ ನೀಡುತ್ತೇವೆ. ಸ್ವಲ್ಪ ಭಾಗವನ್ನು ತುಪ್ಪ, ಹಾಲಿನ ಪೌಡರ್ ಉತ್ಪಾದಿಸಲು ಬಳಸುತ್ತೇವೆ.

ಕೇರಳ ಮಿಲ್ಕ್ ಫೆಡರೇಷನ್‌ಗೆ ಕೂಡ ಸ್ವಲ್ಪ ಹಾಲನ್ನು ಕಳುಹಿಸುತ್ತೇವೆ. ಇದರಿಂದ ಎಷ್ಟು ಹಾಲು ಉತ್ಪಾದನೆ ಆಗುತ್ತಿದೆಯೋ ಅಷ್ಟೇ ಪ್ರಮಾಣಕ್ಕೆ ಬೇಡಿಕೆ ಇದೆ.

–**ಸುರೇಶ್ ನಾಯಕ್**, ವ್ಯವಸ್ಥಾಪಕ ನಿರ್ದೇಶಕ, ಮೈಮುಲ್

ಅಂತರ ಪ್ರೌಢಶಾಲಾ ನೃತ್ಯ ಸ್ಪರ್ಧೆ ಸಂಭ್ರಮಕ್ಕೆ ಚಾಲನೆ

15 ಶಾಲೆಗಳಿಂದ 150ಕ್ಕೂ ಹೆಚ್ಚು ವಿದ್ಯಾರ್ಥಿಗಳಿಂದ ಗ್ರೂಪ್, ಏಕಾಂಗಿ ನೃತ್ಯ ಪ್ರದರ್ಶನ



ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಅಂತರ ಪ್ರೌಢಶಾಲಾ ನೃತ್ಯ ಸ್ಪರ್ಧೆ 'ಸಂಭ್ರಮ'ಕ್ಕೆ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಪ್ರೊ. ಕೆ. ರಾಮಮೂರ್ತಿರಾವ್ ಚಾಲನೆ ನೀಡಿದರು.

ಮೈಸೂರು, ಡಿ.16(ಜಿಎ)–ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಅಂತರ ಪ್ರೌಢಶಾಲಾ ನೃತ್ಯ ಸ್ಪರ್ಧೆ 'ಸಂಭ್ರಮ'ಕ್ಕೆ ರಾಜ್ಯೋತ್ಸವ ಪ್ರಶಸ್ತಿ ಪುಸ್ಕೃತರಾದ ಪ್ರೊ. ಕೆ. ರಾಮಮೂರ್ತಿರಾವ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಎಲ್ಲರೂ ಸ್ಪರ್ಧಾ ಮನೋಭಾವವನ್ನು ಬೆಳಸಿಕೊಳ್ಳಬೇಕು. ನೃತ್ಯ, ಸಂಗೀತ, ಸಾಹಿತ್ಯ ಪಠ್ಯದ ಒಂದು ಭಾಗವಾಗಿವೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಪರಿಪೂರ್ಣ ವ್ಯಕ್ತಿಗಳಾಗಿ ರೂಪುಗೊಳ್ಳುತ್ತಾರೆ. ಸುಸಂಸ್ಕೃತ ಸಮಾಜ ನಿರ್ಮಾಣಕ್ಕೆ ಇವುಗಳು ಪೂರಕವಾಗಿವೆ. ಸೋಲು ಗೆಲುವುಗಳನ್ನು ಎಲ್ಲರೂ ಸಮಾನವಾಗಿ ಸ್ವೀಕರಿಸಬೇಕು. ಚಿತ್ರಕಲೆ, ಸಂಗೀತ ಇವುಗಳು ವಿದ್ಯಾರ್ಥಿನಿಯರಲ್ಲಿ ಏಕಾಗ್ರತೆ ಹಾಗೂ ಸಮಯ ಪ್ರಜ್ಞೆಯನ್ನು ಬೆಳೆಸುತ್ತವೆ ಎಂದು ತಿಳಿಸಿದರು.

ಚಂಪಕ ಅಕಾಡೆಮಿ ಸಂಸ್ಥಾಪಕರಾದ ವಿದುಷಿ ಡಾ.ನಾಗಲಕ್ಷ್ಮಿ ನಾಗರಾಜನ್ ಮಾತನಾಡಿ, ಸಂಭ್ರಮ ಕಾರ್ಯಕ್ರಮವು ನೃತ್ಯ, ಸಂಗೀತ ಮುಂತಾದ ಕಲೆಗಳನ್ನು ಉಳಿಸಿ ಬೆಳೆಸಲು ಸಹಾಯಕವಾಗಿವೆ. ಜೆಎಸ್‌ಎಸ್ ಸಂಸ್ಥೆ ಕಲೆ ಹಾಗೂ ಸಂಸ್ಕೃತಿಯನ್ನು ಬೆಳೆಸುವುದಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ನಿಜಕ್ಕೂ ಸಂತೋಷದ ಸಂಗತಿಯಾಗಿದೆ ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ ಮಾತನಾಡಿ, ಇದೊಂದು ಅರ್ಥಪೂರ್ಣವಾದ ಕಾರ್ಯಕ್ರಮವಾಗಿದೆ. ಕಾಲೇಜು ಸ್ಥಾಪನೆಗೂ ಮುನ್ನ ಈ ಸ್ಥಳದಲ್ಲಿ ನವಜ್ಯೋತಿ ಸ್ಟುಡಿಯೋ ಇದ್ದು ಅನೇಕ ಒಳ್ಳೆಯ ಚಿತ್ರಗಳು ನಿರ್ಮಾಣಗೊಂಡಿವೆ. ಆದ್ದರಿಂದ ಈ ಸ್ಥಳವನ್ನು ಪರಮಪೂಜ್ಯರು ನವಜ್ಯೋತಿ ಸಭಾಂಗಣವನ್ನಾಗಿ ರೂಪಿಸಿ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲು ಅನುವು ಮಾಡಿಕೊಟ್ಟಿರುವುದು ನಮ್ಮೆಲ್ಲರ ಸೌಭಾಗ್ಯ. ಎಲ್ಲರ ಅಂತರಂಗದಲ್ಲೂ ಒಂದು ಪ್ರತಿಭೆ ಅಡಗಿರುತ್ತದೆ ಅದು ಹೊರಹೊಮ್ಮಲು ಇಂತಹ ಕಾರ್ಯಕ್ರಮಗಳು ಬಹಳ ಸಹಕಾರಿ ಎಂದು ತಿಳಿಸಿದರು.

ಸ್ಪರ್ಧೆಯಲ್ಲಿ 15 ಶಾಲೆಗಳ 150ಕ್ಕೂ ಹೆಚ್ಚು ವಿದ್ಯಾರ್ಥಿಗಳು ಗ್ರೂಪ್ ಮತ್ತು ಏಕಾಂಗಿ ನೃತ್ಯ ಪ್ರದರ್ಶನ ನೀಡಿ ಎಲ್ಲರ ಗಮನ ಸೆಳೆದರು. ಜಾನಪದ ಗುಂಪು ನೃತ್ಯ ವಿಭಾಗದಲ್ಲಿ ಟೀಚರ್ಸ್ ಲೇಔಟ್‌ನ ಮೈಸೂರು ಜೆಎಸ್‌ಎಸ್ ಪಬ್ಲಿಕ್ ಶಾಲೆ ಪ್ರಥಮ, ನಿರ್ಮಲ ಕಾನ್ವೆಂಟ್ ದ್ವಿತೀಯ, ಟಿ.ಎಸ್. ಸುಬ್ಬಣ್ಣ ಸಾರ್ವಜನಿಕ ಪ್ರೌಢಶಾಲೆ ತೃತೀಯ ಸ್ಥಾನವನ್ನು ಪಡೆದುಕೊಂಡಿವೆ.

ಶಾಸ್ತ್ರೀಯ ಏಕಾಂಗಿ ನೃತ್ಯ ವಿಭಾಗದಿಂದ ಸಿದ್ಧಾರ್ಥನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆ ಪ್ರಥಮ, ಎಸ್‌ಜೆಸಿಇ ಆವರಣದಲ್ಲಿರುವ ಜೆಎಸ್‌ಎಸ್ ಪಬ್ಲಿಕ್ ಶಾಲೆ ದ್ವಿತೀಯ, ಭಾರತೀಯ ವಿದ್ಯಾಭವನ್ ತೃತೀಯ ಸ್ಥಾನ ತನ್ನದಾಗಿಸಿಕೊಂಡಿತು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಟಿಗುರುಪಾದಸ್ವಾಮಿ, ಸಂಭ್ರಮ ಸಮಿತಿ ಸಂಚಾಲಕರು ಹಾಗೂ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥೆ ಎಂ.ಎಸ್.ರಶ್ಮಿ, ಸಮಿತಿ ಸಹಸಂಚಾಲಕಿ ವೈ.ಎಸ್.ಶ್ವೇತಾ, ಉಪನ್ಯಾಸಕರು ಮತ್ತು ವಿದ್ಯಾರ್ಥಿನಿಯರು ಹಾಗೂ ಪೋಷಕರು ಉಪಸ್ಥಿತರಿದ್ದರು.

ಚಳಿ ಆರ್ಭಟಕ್ಕೆ ತತ್ತರಿಸಿ ಬೆಚ್ಚನೆ ಉಡುಪು, ಹೊದಿಕೆ ಮೊರೆ ಹೋದ ಜನ



ಮೈಸೂರಿನ ವಿವಿಧ ರಸ್ತೆ ಬದಿಗಳಲ್ಲಿ ಹೊದಿಕೆ ವ್ಯಾಪಾರ ಮಾಡುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಡಿ.16– ಮೈಸೂರಿನ ಜನತೆ ಮೈಕೊರೆಯುವ ಚಳಿಯಿಂದ ತತ್ತರಿಸಿದ್ದು, ಬೆಚ್ಚಗಿನ ಉಡುಪು ಹಾಗೂ ಹೊದಿಕೆಯ ಮೊರೆ ಹೋಗುತ್ತಿದ್ದಾರೆ.

ಮಳಿಗೆಗಳಲ್ಲಿ ಮಾತ್ರವಲ್ಲದೆ ಹಲವು ರಸ್ತೆಗಳು, ಆಸ್ಪತ್ರೆಗಳ ಬಳಿ ಹೊದಿಕೆ, ಬೆಚ್ಚಗಿನ ಉಡುಪು, ಟೋಪಿಗಳ ವ್ಯಾಪಾರ ಜೋರಾಗಿದೆ. ರಸ್ತೆ ಬದಿಗಳಲ್ಲಿ 500 ರೂ.ನಿಂದ 3,500 ರೂ.ವರೆಗೂ ಹೊದಿಕೆಗಳನ್ನು ಮಾರಾಟ ಮಾಡಲಾಗುತ್ತಿದೆ.

ನಗರದ ಗಾಂಧಿ ವೃತ್ತ, ಕೆಆರ್‌ಎಸ್ ರಸ್ತೆ, ಕುಕ್ಕರಹಳ್ಳಿ ಕೆರೆ ರಸ್ತೆ, ಮಹಾತ್ಮ ಗಾಂಧಿ ರಸ್ತೆ ಸೇರಿದಂತೆ ಅನೇಕ ರಸ್ತೆಗಳ ಬದಿಯಲ್ಲಿ ಹೊದಿಕೆಗಳನ್ನು ರಾಶಿ ಇಟ್ಟುಕೊಂಡು ಮಾರಾಟ ಮಾಡಲಾಗುತ್ತಿದೆ. ಸಯ್ಯಾಜಿರಾವ್ ರಸ್ತೆ, ದೇವರಾಜ ಅರಸು ರಸ್ತೆ ಸೇರಿದಂತೆ ಪ್ರಮುಖ ವಾಣಿಜ್ಯ ರಸ್ತೆಗಳ ಮಳಿಗೆಗಳಲ್ಲೂ ಸ್ವೆಟರ್, ಮಫ್ಲರ್, ಟೋಪಿ ಸೇರಿದಂತೆ ಬೆಚ್ಚಗಿನ ಉಡುಪುಗಳ ಮಾರಾಟ ಜೋರಾಗಿದೆ.

ಕಳೆದ ಒಂದು ವಾರದಿಂದ ನಗರದ ಕನಿಷ್ಠ ತಾಪಮಾನವು ಸರಾಸರಿ 16 ಡಿಗ್ರಿ ಸೆಲ್ಸಿಯಸ್‌ವರೆಗೆ ದಾಖಲಾಗಿದ್ದು. ಮುಂದಿನ ಫೆಬ್ರವರಿವರೆಗೂ ಇದೇ ವಾತಾವರಣ ಇರುವುದಾಗಿ ಹವಾಮಾನ ಇಲಾಖೆ ಮೂಲಗಳು ತಿಳಿಸಿವೆ. ನಗರದಲ್ಲಿ ಮುಂಜಾನೆಯ ಮಂಜು ಮುಸುಕಿದ ವಾತಾವರಣ ಹಾಗೂ ಶೀತಗಾಳಿಯಿಂದ ಚಳಿ, ಹೆಚ್ಚಾಗಿದೆ. ಗ್ರಾಮೀಣ ಪ್ರದೇಶದಲ್ಲಿ ತಾಪಮಾನ ಮತ್ತಷ್ಟು ಕುಸಿದಿದ್ದು, ಪಶುಪಾಲನೆ ಹಾಗೂ ಕೃಷಿ ಚಟುವಟಿಕೆಗಳಿಗೆ ತೊಡಕಾಗಿದೆ.

ನಗರದ ಕುಕ್ಕರಹಳ್ಳಿ ಕೆರೆ, ಚಾಮುಂಡಿಬೆಟ್ಟ ತಪ್ಪಲು, ಉದ್ಯಾನ, ಕ್ರೀಡಾ ಮೈದಾನಗಳಲ್ಲಿ ಮುಂಜಾನೆ, ಸಂಜೆ ವಾಯುವಿಹಾರ ಮಾಡುವವರು, ಸೈಕ್ಲಿಂಗ್ ಮಾಡುವವರು ಸ್ವೆಟರ್, ಟೋಪಿ ಧರಿಸುವುದು ಅನಿವಾರ್ಯವಾಗಿದೆ. ದ್ವಿಚಕ್ರ ವಾಹನ, ಆಟೋ ಹಾಗೂ ವಾಹನಗಳಲ್ಲಿ ಶಾಲೆಗೆ ತೆರಳುವ ಮಕ್ಕಳು ಸಹ ಸ್ವೆಟರ್, ಮಫ್ಲರ್ ಧರಿಸುವ ದೃಶ್ಯ ಸಾಮಾನ್ಯವಾಗಿದೆ

ಬಿಸಿಲಿನ ತಾಪಮಾನದಿಂದ ದೇಹವನ್ನು ತಂಪಾಗಿಸಿಕೊಳ್ಳಲು ಕೂಲ್ ಡ್ರಿಂಕ್ಸ್, ಎಳನೀರು, ಐಸ್‌ಕ್ರೀಂ ಸೇವನೆಗೆ ಮೊರೆ ಹೊಗಿದ್ದ ಜನ ಇದೀಗ ದೇಹವನ್ನು ಬೆಚ್ಚಗೆ ಇಟ್ಟುಕೊಳ್ಳಲು ಬಿಸಿ ಚಹಾ, ಕಾಫಿ ಹಾಗೂ ಬಿಸಿ ಆಹಾರ ಸೇವನೆಗೆ ಮುಖ ಮಾಡಿದ್ದಾರೆ. ಮುಂಜಾನೆಯಿಂದಲೇ ರಸ್ತೆ ಬದಿಯ ಚಹಾದಂಗಡಿ ಮುಂದೆ ಜನಜಂಗುಳಿ ನೆರೆದಿರುತ್ತದೆ.

ಪ್ರತಿನಿತ್ಯ ಮುಂಜಾನೆಯೇ ಹಾಲು ಮಾರುವವರು, ಪತ್ರಿಕೆಗಳನ್ನು ಮನೆ ಮನೆಗೆ ತಲುಪಿಸುವವರು, ಮಾರುಕಟ್ಟೆಗೆ ತೆರಳಿ ಸಗಟು ತರಕಾರಿ ತರುವ ವ್ಯಾಪಾರಿಗಳು ಚಳಿಗೆ ತತ್ತರಿಸಿದ್ದಾರೆ. ಆದರೂ ಜೀವನಬಂಡಿ ನಡೆಸಲು ಅನಿವಾರ್ಯವಾಗಿ ಇಬ್ಬನಿ ಹಾಗೂ ಚಳಿ ಲೆಕ್ಕಿಸದೇ ತಮ್ಮ ಕಾಯಕ ನಡೆಸುತ್ತಿದ್ದಾರೆ. ಪೌರಕಾರ್ಮಿಕರು ಚಳಿಗೆ ಸೆಡ್ಡು ಹೊಡೆದು ಎಂದಿನಂತೆ ಸ್ವಚ್ಛತಾ ಕಾರ್ಯದಲ್ಲಿ ತೊಡಗಿದ್ದರೆ.

ಮುಂಜಾಗ್ರತೆ ವಹಿಸಿ: ಚಳಿ–ಗಾಳಿಯಿಂದ ಶೀತ–ನೆಗಡಿ, ಕೆಮ್ಮು ಇನ್ನಿತರ ಆರೋಗ್ಯ ಸಮಸ್ಯೆಗಳು ಸಾಮಾನ್ಯವೆನಿಸಿದರೂ ನಿರ್ಲಕ್ಷಿಸಬಾರದು. ಇಬ್ಬನಿ ಹಾಗೂ ಚಳಿಯಿಂದ ದೇಹವನ್ನು ರಕ್ಷಿಸಿಕೊಳ್ಳಬೇಕು. ಶಾಲೆಗೆ ತೆರಳುವ ಮಕ್ಕಳಿಗೆ ಸ್ವೆಟರ್, ಟೋಪಿಯನ್ನು ಧರಿಸಬೇಕು. ಬಿಸಿನೀರು ಹಾಗೂ ಬಿಸಿಯಾದ ತಾಜಾ ಆಹಾರವನ್ನು ಸೇವಿಸಬೇಕು. ಅಸ್ತಮಾ ಸಮಸ್ಯೆ ಇರುವವರು ಜಾಗೃತೆಯಿಂದಿರಬೇಕು. ಅನಿವಾರ್ಯವಿಲ್ಲವಾದರೆ ಮುಂಜಾನೆ ಹಾಗೂ ಸಂಜೆ ಹೊರಗಡೆ ಓಡಾಡಬಾರದು ಎಂದು ವೈದ್ಯರು ತಿಳಿಸಿದ್ದಾರೆ.

ಮೈಸೂರಲ್ಲಿ ರಾಷ್ಟ್ರಪತಿಗಳ ವಾಸ್ತವ್ಯ; ಇಂದು ಹೈದರಾಬಾದ್‌ಗೆ ಪ್ರಯಾಣ



ಮೈಸೂರು, ಡಿ.16(ಪಿಎಂ)– ಮಂಡ್ಯ ಜಿಲ್ಲೆ ಮಳವಳ್ಳಿಯಲ್ಲಿ ಮಂಗಳವಾರ ಆಯೋಜಿಸಿದ್ದ ಸುತ್ತೂರು ಆದಿ ಜಗದ್ಗುರು ಶ್ರೀ ಶಿವರಾತ್ರಿ ಶಿವಯೋಗಿಗಳ 1066ನೇ ಜಯಂತಿ ಮಹೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡಿದ್ದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬಳಿಕ ಸಂಜೆ 5.15ರ ಸುಮಾರಿಗೆ ಮೈಸೂರಿಗೆ ಹಿಂತಿರುಗಿದರು.

ಮೈಸೂರಿನ ಎಂಜಿ ರಸ್ತೆಯಲ್ಲಿರುವ ರ‍್ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿರುವ ಅವರು ನಾಳೆ (ಡಿ.17) ಹೈದರಾಬಾದ್‌ಗೆ ಅವರು ತೆರಳಲಿದ್ದಾರೆ. ವಾಸ್ತವ್ಯ ಹೂಡಿರುವ ರ‍್ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್ ಹಾಗೂ ಸುತ್ತಮುತ್ತಲು ರಾಷ್ಟ್ರಪತಿಗಳ ಬೆಂಗಾವಲು ಪಡೆ ಹಾಗೂ ಸ್ಥಳೀಯರು ಪೊಲೀಸರು ಭಾರೀ ಭದ್ರತೆ ಕಲ್ಪಿಸಿದ್ದಾರೆ.

ಹೈಕಮಾಂಡ್ ಹೇಳೋವರೆಗೂ ನಾನೇ ಮುಖ್ಯಮಂತ್ರಿ

ಸದನದಲ್ಲಿ ಸಿದ್ದರಾಮಯ್ಯ ಪುನರುಚ್ಚಾರ



ಬೆಳಗಾವಿ, ಡಿ.16– ಸಿಎಂ ಬದಲಾವಣೆ, ಐದು ವರ್ಷ ಅಧಿಕಾರ ಬಗ್ಗೆ ಸದನದಲ್ಲಿ ಸ್ವಾರಸ್ಯಕರ ಚರ್ಚೆ ನಡೆದಿದೆ. ನೀವೇ ಐದು ವರ್ಷ ಸಿಎಂ ಆಗಿರ್ತೀರಾ ಸರ್ ಎಂಬ ಆರ್.ಅಶೋಕ್ ಅವರ ಪ್ರಶ್ನೆಗೆ, ಹೈಕಮಾಂಡ್ ಹೇಳೋವರೆಗೂ ನಾನೇ ಮುಖ್ಯಮಂತ್ರಿ ಎಂದು ಸಿದ್ದರಾಮಯ್ಯ ಉತ್ತರಿಸಿದ್ದಾರೆ.

ಸಿಎಂ ಸ್ಥಾನದ ಗೊಂದಲ ಬಗ್ಗೆ ಬಿಜೆಪಿ ಆರೋಪಗಳಿಗೆ ಸದನದಲ್ಲಿ ಸಿಎಂ ಸ್ಪಷ್ಟನೆ ನೀಡಿದರು. ನಮ್ಮಲ್ಲಿ ಹೈಕಮಾಂಡ್ ಇದೆ, ಹೈಕಮಾಂಡ್ ಏನು ತೀರ್ಮಾನ ಮಾಡ್ತಾರೋ ಅದರಂತೆ ಕೇಳ್ತೀವೆ. ಜನ ನಮಗೆ ಆಶೀರ್ವಾದ ಮಾಡಿದ್ದಾರೆ, ಬಿಜೆಪಿಯವರಿಗೆ ಜನ ಆಶೀರ್ವಾದ ಮಾಡಲ್ಲ, ಇವರು ವಿಪಕ್ಷ ಸ್ಥಾನದಲ್ಲಿ ಶಾಶ್ವತವಾಗಿ ಇರ್ತಾರೆ ಅಂತ ಸಿಎಂ ಟಾಂಗ್ ಕೊಟ್ಟರು.

ರಾಜ್ಯದಲ್ಲಿ ಕಸ್ತೂರಿ ರಂಗನ್ ವರದಿ ಅನುಷ್ಠಾನ ಇಲ್ಲ

ಅರಣ್ಯ ಸಚಿವ ಈಶ್ವರ್ ಖಂಡ್ರೆ ಸ್ಪಷ್ಟನೆ



ಬೆಳಗಾವಿ, ಡಿ.16– ರಾಜ್ಯದಲ್ಲಿ ಕಸ್ತೂರಿ ರಂಗನ್ ವರದಿ ಅನುಷ್ಠಾನ ಮಾಡಲ್ಲ ಅಂತ ಮತ್ತೊಮ್ಮೆ ಸರ್ಕಾರ ಸ್ಪಷ್ಟನೆ ನೀಡಿದೆ.

ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಸದಸ್ಯ ಐವಾನ್ ಡಿಸೋಜಾ ಪ್ರಶ್ನೆ ಕೇಳಿದರು. ಕಸ್ತೂರಿ ರಂಗನ್ ವರದಿ ರಾಜ್ಯದಲ್ಲಿ ಜಾರಿ ಮಾಡಬಾರದು. ಅವೈಜ್ಞಾನಿಕವಾಗಿ ವರದಿ ಸಿದ್ಧಪಡಿಸಲಾಗಿದೆ. ಸ್ಯಾಟ್‌ಲೈಟ್ ಮೂಲಕ ಸರ್ವೆ ಮಾಡಲಾಗಿದೆ. ಸರಿಯಾಗಿ ಸರ್ವೆ ಆಗಿಲ್ಲ. ಈ ವರದಿ ಜಾರಿ ಮಾಡಿದರೆ ಕರಾವಳಿ ಭಾಗಕ್ಕೆ ಸಮಸ್ಯೆ ಆಗುತ್ತದೆ. ಈ ವರದಿ ರಾಜ್ಯದ ಜನರಿಗೆ ಮರಣ ಶಾಸನವಾಗಿದೆ. ಹೀಗಾಗಿ ಕಸ್ತೂರಿ ರಂಗನ್ ವರದಿ ಜಾರಿ ಮಾಡಬಾರದು ಎಂದು ಆಗ್ರಹಿಸಿದರು.

ಇದಕ್ಕೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು ಉತ್ತರ ನೀಡಿ, ಕಸ್ತೂರಿ ರಂಗನ್ ವರದಿ ಬಂದ ಮೇಲೆ ಕೇಂದ್ರ ಸರ್ಕಾರ 6 ಅಧಿಸೂಚನೆ ಹೊರಡಿಸಿದೆ. ಕೇಂದ್ರದ ಎಲ್ಲಾ ಅಧಿಸೂಚನೆಯನ್ನು ನಾವು ತಿರಸ್ಕಾರ ಮಾಡಿದ್ದೇವೆ. 6ನೇ ಬಾರಿ ಸೂಚನೆ ಹೊರಡಿಸಿದ ಮೇಲೆ ಜನಪ್ರತಿನಿಧಿಗಳ ಸಭೆ ಮಾಡಿದ್ದೇವೆ. ಕ್ಯಾಬಿನೆಟ್ ಮತ್ತು ಕ್ಯಾಬಿನೆಟ್ ಉಪಸಮಿತಿಯಲ್ಲಿ ಚರ್ಚೆ ಮಾಡಲಾಗಿದೆ. ಕೇಂದ್ರದ 6ನೇ ಅಧಿಸೂಚನೆ ರದ್ದು ಮಾಡಬೇಕು ಎಂದು 2024ರ ಸೆ.30ರಂದು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಕರಾವಳಿ ಭಾಗದಲ್ಲಿ ಇರುವವರಿಗೆ ಯಾವುದೇ ಸಮಸ್ಯೆ ಆಗಲ್ಲ. ಕೇಂದ್ರದ ವರದಿ ತಿರಸ್ಕಾರ ಮಾಡಲಾಗಿದೆ. ಸಂರಕ್ಷಿತ ಪ್ರದೇಶ ಬಿಟ್ಟು ಬೇರೆ ಕಡೆ ಯಾವುದೇ ಸಮಸ್ಯೆ ಆಗದಂತೆ ಸರ್ಕಾರ ಕ್ರಮ ತೆಗೆದುಕೊಳ್ಳಲಿದೆ ಎಂದು ಸ್ಪಷ್ಟಪಡಿಸಿದರು.

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸೂಚಿಸುವುದೇನೆಂದರೆ ನನ್ನ ಕಕ್ಷಿದಾರರು ಮೈಸೂರು 570004, ಎನ್ ಆರ್ ಮೋಹಲ್ಲ, ನಂ. 374/1, ನ್ಯೂ ಬಡೆ ಮಾರ್ಕೆಟ್ ಹಿಂದೆ ವಾಸಿಸುತ್ತಿರುವ ಸುಮಾರು 61 ವರ್ಷ ವಯಸ್ಸುಳ್ಳ ಶ್ರೀ ಫಿರೋಜ್ ಅಹ್ಮದ್ ಸಿದ್ದೀಕಿ ರವರ ಮಗನಾದ ಶ್ರೀ ಇಜಾಜ್ ಅಹಮದ್ ಸಿದ್ದೀಕಿ (ಮಾಲೀಕರು) ಮತ್ತು ಚಾಮರಾಜನಗರ – 571440, ಕೊಳ್ಳೇಗಾಲ ಪಟ್ಟಣ, ಕಬಿನಿ ಕಾಲೇಜು ಬಳಿ, ಕಂಪನ ಪಾಳ್ಯ ರಸ್ತೆ, ನಂ.7/3009 ರಲ್ಲಿ ವಾಸಿಸುತ್ತಿರುವ ಸುಮಾರು 68 ವರ್ಷ ವಯಸ್ಸಿನ ಶ್ರೀ ಯೂಸುಫ್ ಖಾನ್ ರವರ ಮಗನಾದ ಶ್ರೀ ಡಿ ವೈ ಫಿರೋಜ್ ಖಾನ್ (ಒಡಂಬಡಿಕೆದಾರರು) ರವರೊಂದಿಗೆ ಈ ಕೆಳಗಿನ ವಿವರ ಪಟ್ಟಿಯ ಸ್ವತ್ತಿನ ಮಾರಾಟ ಪ್ರಕ್ರಿಯೆಯನ್ನು ಮುಂದುವರಿಸಲು ನಿಶ್ಚಯಿಸಿರುತ್ತಾರೆ.

ಯಾವುದೇ ವ್ಯಕ್ತಿ/ಗಳು, ಘಟಕ, ಸಂಸ್ಥೆ, ಸಂಸ್ಥೆ (ಕಾರ್ಪೊರೇಟ್ ಅಥವಾ ಇತರ) ಮಾಲೀಕರು ಅಥವಾ ಅವರ ಪೂರ್ವವರ್ತಿಗಳು ಅವರ ಯಾವುದೇ ಹಕ್ಕು, ಶೀರ್ಷಿಕೆ, ಆಸಕ್ತಿ, ಹಕ್ಕು, ಬಾಕಿ ಇರುವ ಮೊಕದ್ದಮೆ ಅಥವಾ ಬೇಡಿಕೆಯ ಹಕ್ಕು ಇದ್ದರೆ ಮಾರಾಟ, ಉಡುಗೊರೆ, ಗುತ್ತಿಗೆ, ಉಪ–ಗುತ್ತಿಗೆ, ವರ್ಗಾವಣೆ ಪತ್ರ, ಉತ್ತರಾಧಿಕಾರ, ಒಪ್ಪಂದಗಳು, ತಿಳುವಳಿಕೆ ಪತ್ರ, ಬಾಕಿ ಇರುವ ಮೊಕದ್ದಮೆ, ವಿನಿಮಯ, ಅಡಮಾನ, ಶುಲ್ಕ, ಹಕ್ಕುದಾರಿಕೆ, ಟ್ರಸ್ಟ್, ಭದ್ರತೆ, ಸ್ವಾಧೀನ, ಸುಲಭಗೊಳಿಸುವಿಕೆ, ಲಗತ್ತಿಸುವಿಕೆ, ಸ್ವಾಧೀನ ಅಥವಾ ಇತರ ಯಾವುದೇ ರೀತಿಯಲ್ಲಿ ಮತ್ತು/ಅಥವಾ ಸದರಿ ಆಸ್ತಿ ಅಥವಾ ಅದರ ಯಾವುದೇ ಭಾಗದ ಮೇಲೆ, ಈ ಸೂಚನೆಯ ದಿನಾಂಕದಿಂದ ಏಳು (7) ದಿನಗಳ ಒಳಗೆ ಸದರಿ ಆಸ್ತಿಗೆ ಸಂಬಂಧಿಸಿದಂತೆ ಅವರ ಹಕ್ಕು, ಶೀರ್ಷಿಕೆ, ಆಸಕ್ತಿ, ಹಕ್ಕು, ಬಾಕಿ ಇರುವ ಮೊಕದ್ದಮೆ ಅಥವಾ ಬೇಡಿಕೆಯನ್ನು ಸಾಬೀತುಪಡಿಸುವ ಸಂಬಂಧಿತ ಲಿಖಿತ ದಾಖಲೆಯೊಂದಿಗೆ ಕೆಳಗೆ ಸಹಿ ಮಾಡಿದವರ ಗಮನಕ್ಕೆ ತರಬಹುದು, ವಿಫಲವಾದರೆ ಅಂತಹ ಹಕ್ಕನ್ನು ಮನ್ನಾ ಮಾಡಲಾಗಿದೆ ಮತ್ತು / ಅಥವಾ ಬಿಟ್ಟುಕೊಡಲಾಗಿದೆ ಎಂದು ಪರಿಗಣಿಸಲಾಗುತ್ತದೆ. ಮೇಲೆ ನಿಗದಿಪಡಿಸಿದ ಅವಧಿ ಮುಗಿದ ನಂತರ ಸ್ವೀಕರಿಸಿದ ಆಕ್ಷೇಪಣೆಗಳು ಮತ್ತು / ಅಥವಾ ಹಕ್ಕುಗಳನ್ನು ಪರಿಗಣಿಸಲಾಗುವುದಿಲ್ಲ ಅಥವಾ ನಮ್ಮ ಕಕ್ಷಿದಾರರಿಗೆ ಬದ್ಧವಾಗಿರುವುದಿಲ್ಲ ಮತ್ತು ಅವುಗಳನ್ನು ಅಸ್ತಿತ್ವದಲ್ಲಿಲ್ಲ ಮತ್ತು/ಅಥವಾ ಮನ್ನಾ ಮಾಡಲಾಗಿದೆ ಎಂದು ಪರಿಗಣಿಸಲಾಗುತ್ತದೆ.

ಷೆಡ್ಯೂಲ್ 'ಎ'

(1) ಈ ಎಲ್ಲಾ ಸಮಗ್ರ ಕೃಷಿ ಜಮೀನು ಮತ್ತು ಇದರ ಭಾಗಗಳು ಎರಡು (2) ಎಕರೆ ಇದ್ದು, ಇದು ಚಾಮರಾಜನಗರದ ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ಹೋಬಳಿಯ ಜಕ್ಕಹಳ್ಳಿ ಗ್ರಾಮದಲ್ಲಿದ್ದು ಇದರ ಸ ನಂ. 1/2 ಆಗಿರುತ್ತದೆ.

(2) ಈ ಎಲ್ಲಾ ಸಮಗ್ರ ಕೃಷಿ ಜಮೀನು ಮತ್ತು ಇದರ ಭಾಗಗಳು ಒಂದು (1) ಎಕರೆ ಮತ್ತು ಇಪ್ಪತ್ತು (20) ಗುಂಟೆಗಳು ಇದ್ದು, ಇದು ಚಾಮರಾಜನಗರದ ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ಹೋಬಳಿಯ ಜಕ್ಕಹಳ್ಳಿ ಗ್ರಾಮದಲ್ಲಿದ್ದು ಇದರ ಸ ನಂ. 58/1 ಆಗಿರುತ್ತದೆ.

(3) ಈ ಎಲ್ಲಾ ಸಮಗ್ರ ಕೃಷಿ ಜಮೀನು ಮತ್ತು ಇದರ ಭಾಗಗಳು ಒಂದು (1) ಎಕರೆ ಮತ್ತು ಇಪ್ಪತ್ತಾರು (26) ಗುಂಟೆಗಳು ಇದ್ದು, ಇದು ಚಾಮರಾಜನಗರದ ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ಹೋಬಳಿಯ ಜಕ್ಕಹಳ್ಳಿ ಗ್ರಾಮದಲ್ಲಿದ್ದು ಇದರ ಸ ನಂ. 59/3 ಆಗಿರುತ್ತದೆ.

ಮೇಲೆ ತಿಳಿಸಿರುವ ಎಲ್ಲಾ ಜಮೀನುಗಳಿಗೆ ಅಕ್ಕಪಕ್ಕದ ಜಮೀನುಗಳ ಚಕ್ಕುಬಂದಿ ಈ ಕೆಳಗಿನಂತಿದೆ.

ಪೂರ್ವಕ್ಕೆ : ಸರ್ಕಾರಿ ರಸ್ತೆ ;
ಪಶ್ಚಿಮಕ್ಕೆ : ಸ ನಂ. 1/1, 59/1 & 58/2 ರಲ್ಲಿನ ಜಮೀನು ;
ಉತ್ತರಕ್ಕೆ : ಶ್ರೀ ಇಜಾಜ್ ಅಹಮದ್ ಸಿದ್ದೀಕಿ ಅವರಿಗೆ ಸೇರಿದ ಸ ನಂ. 16/6 ಮತ್ತು 17/3, ಸ ನಂ. 16/3 ರ ಖಾಸಗಿ ಜಮೀನು ಮತ್ತು ರಸ್ತೆ ;
ದಕ್ಷಿಣಕ್ಕೆ : ಸ ನಂ. 57/1, 59/1 & 59/2.

ಇದರೊಂದಿಗೆ ಎಲ್ಲಾ ಹಕ್ಕುಗಳು, ಅದಕ್ಕೆ ಹೊಂದಿದ ಸವಲತ್ತುಗಳು ಮತ್ತು ಎಲ್ಲಾ ಸವಲತ್ತು ಹಕ್ಕುಗಳು, ನೀರಿನ ಮಾರ್ಗಗಳು ಮತ್ತು ಪ್ರವೇಶದ ಹಕ್ಕು.

ಷೆಡ್ಯೂಲ್ 'ಬಿ'

ಈ ಎಲ್ಲಾ ಸಮಗ್ರ ಕೃಷಿ ಜಮೀನು ಮತ್ತು ಇದರ ಭಾಗಗಳು ಇಪ್ಪತ್ತು (20) ಗುಂಟೆಗಳು ಇದ್ದು, ಇದು ಚಾಮರಾಜನಗರದ ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ಹೋಬಳಿಯ ಜಕ್ಕಹಳ್ಳಿ ಗ್ರಾಮದಲ್ಲಿದ್ದು, ಇದರ ಸ ನಂ. 17/3 ಆಗಿರುತ್ತದೆ.

ಮೇಲೆ ತಿಳಿಸಿರುವ ಎಲ್ಲಾ ಜಮೀನುಗಳಿಗೆ ಅಕ್ಕಪಕ್ಕದ ಜಮೀನುಗಳ ಚಕ್ಕುಬಂದಿ ಈ ಕೆಳಗಿನಂತಿದೆ.

ಪೂರ್ವಕ್ಕೆ : ಪುಟ್ಟಮಾದಪ್ಪ ಅವರಿಗೆ ಸೇರಿದ ಸ ನಂ. 17/2 ರ ಜಮೀನು ;
ಪಶ್ಚಿಮಕ್ಕೆ : ಯತೀಶ್ ಕುಮಾರ್ ಅವರಿಗೆ ಸೇರಿದ ಸ ನಂ. 16/3 ರ ಜಮೀನು ;
ಉತ್ತರಕ್ಕೆ : ಬಂಡಿಪುರ ಮತ್ತು ಜಕ್ಕಹಳ್ಳಿ ಸರ್ಕಾರಿ ರಸ್ತೆ ;
ದಕ್ಷಿಣಕ್ಕೆ : ಶ್ರೀ ಇಜಾಜ್ ಅಹಮದ್ ಸಿದ್ದೀಕಿ ಅವರಿಗೆ ಸೇರಿದ ಸ ನಂ. 1/2, ಸ ನಂ. 1/1 ರ ಖಾಸಗಿ ಜಮೀನು ಮತ್ತು ರಸ್ತೆ ;

ಇದರೊಂದಿಗೆ ಅದಕ್ಕೆ ಹೊಂದಿದ ಎಲ್ಲಾ ಹಕ್ಕುಗಳು, ಸವಲತ್ತುಗಳು ಮತ್ತು ಎಲ್ಲಾ ಸವಲತ್ತು ಹಕ್ಕುಗಳು, ನೀರಿನ ಮಾರ್ಗಗಳು ಮತ್ತು ಪ್ರವೇಶದ ಹಕ್ಕು.

ಷೆಡ್ಯೂಲ್ 'ಸಿ'

ಈ ಎಲ್ಲಾ ಸಮಗ್ರ ಕೃಷಿ ಜಮೀನು ಮತ್ತು ಇದರ ಭಾಗಗಳು ಇಪ್ಪತ್ತುವರೆ (20½) ಗುಂಟೆಗಳಾಗಿದ್ದು, ಇದು ಚಾಮರಾಜನಗರದ ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ಹೋಬಳಿಯ ಜಕ್ಕಹಳ್ಳಿ ಗ್ರಾಮದಲ್ಲಿದ್ದು, ಇದರ ಸ ನಂ. 16/4 ಆಗಿರುತ್ತದೆ.

ಈ ಎಲ್ಲಾ ಸಮಗ್ರ ಕೃಷಿ ಜಮೀನು ಮತ್ತು ಇದರ ಭಾಗಗಳು ಇಪ್ಪತ್ತುವರೆ (20½) ಗುಂಟೆಗಳಾಗಿದ್ದು, ಇದು ಚಾಮರಾಜನಗರದ ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ಹೋಬಳಿಯ ಜಕ್ಕಹಳ್ಳಿ ಗ್ರಾಮದಲ್ಲಿದ್ದು, ಇದರ ಸ ನಂ. 16/5 ಆಗಿರುತ್ತದೆ.

ಈ ಎಲ್ಲಾ ಸಮಗ್ರ ಕೃಷಿ ಜಮೀನು ಮತ್ತು ಇದರ ಭಾಗಗಳು ಇಪ್ಪತ್ತುವರೆ (20½) ಗುಂಟೆಗಳಾಗಿದ್ದು, ಇದು ಚಾಮರಾಜನಗರದ ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ಹೋಬಳಿಯ ಜಕ್ಕಹಳ್ಳಿ ಗ್ರಾಮದಲ್ಲಿದ್ದು, ಇದರ ಸ ನಂ. 16/6 ಆಗಿರುತ್ತದೆ.

ಮೇಲೆ ತಿಳಿಸಿರುವ ಎಲ್ಲಾ ಜಮೀನುಗಳಿಗೆ ಅಕ್ಕಪಕ್ಕದ ಜಮೀನುಗಳ ಚಕ್ಕುಬಂದಿ ಈ ಕೆಳಗಿನಂತಿದೆ.

ಪೂರ್ವಕ್ಕೆ : ಯತೀಶ್ ಕುಮಾರ್ ಅವರಿಗೆ ಸೇರಿದ ಜಮೀನು ಇದು ಸ ಸಂ. 16/3 ರಲ್ಲಿದೆ ;
ಪಶ್ಚಿಮಕ್ಕೆ : ಸ ನಂ. 15/2 & 15/3 ರಲ್ಲಿ ಖಾಸಗಿ ಜಮೀನು ;
ಉತ್ತರಕ್ಕೆ : ಬಂಡೀಪುರ ಮತ್ತು ಜಕ್ಕಹಳ್ಳಿಯ ಸರ್ಕಾರಿ ರಸ್ತೆ ;
ದಕ್ಷಿಣಕ್ಕೆ : ಶ್ರೀ ಇಜಾಜ್ ಅಹಮದ್ ಸಿದ್ದೀಕಿ ಅವರಿಗೆ ಸೇರಿದ ಸ ನಂ. 1/2 ರ ಜಮೀನು ಮತ್ತು ರಸ್ತೆ.

ಇದರೊಂದಿಗೆ ಅದಕ್ಕೆ ಹೊಂದಿದ ಎಲ್ಲಾ ಹಕ್ಕುಗಳು, ಸವಲತ್ತುಗಳು ಮತ್ತು ಎಲ್ಲಾ ಸವಲತ್ತು ಹಕ್ಕುಗಳು, ನೀರಿನ ಮಾರ್ಗಗಳು ಮತ್ತು ಪ್ರವೇಶದ ಹಕ್ಕು.

ದಿನಾಂಕ : 17.12.2025

ಮೀನಾ ವೇಣುಗೋಪಾಲ್, ಪಾರ್ಟ್ನರ್,
ಕೊಚ್ಚರ್ ಮತ್ತು ಕಂಪನಿ, ವಕೀಲರು ಮತ್ತು ಕಾನೂನು ಸಲಹೆಗಾರರು,
201, ಪ್ರೆಸ್ಟೀಜ್ ಸಿಗ್ಮಾ, ಸಂಖ್ಯೆ 3, ವಿಠಲ್ ಮಲ್ಯ ರಸ್ತೆ, ಬೆಂಗಳೂರು 560001.
ದೂರವಾಣಿ: (080)4030 8000 ಇಮೇಲ್: meena.venugopal@bgl.kochhar.com

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ನ್ಯಾಯಾಲಯದ ಆದೇಶದ ಮೇರೆ ಓ.ಎಸ್.ನಂ. 3827/1995 ಮತ್ತು ಇಎಕ್ಸ್.ನಂ.136/2019ರಂತೆ ಷೆಡ್ಯೂಲ್ ಸ್ವತ್ತಿನ ಮಾಲೀಕರುಗಳಾದ 1) ಲೇಟ್. ಹೆಚ್. ಸೇತುರಾವ್ ರವರ ಧರ್ಮಪತ್ನಿ ಶ್ರೀಮತಿ. ಹೆಚ್. ಸುಧಾ ಬಾಯಿ, 2) ಲೇಟ್. ಹೆಚ್. ಶಾರದಾ ಹಾಗೂ ಡಾ|| ಹೆಚ್. ಶೇಷಗಿರಿರಾವ್‌ರವರುಗಳ ಮಕ್ಕಳುಗಳಾದ ಅ) ಹೆಚ್.ಎಸ್. ನರಸಿಂಹಮೂರ್ತಿ, ಆ) ಹೆಚ್.ಎಸ್. ಆನಂದ್ ಇ) ಹೆಚ್ ಎಸ್ ಆರ್ ಪ್ರಸಾದ್ ಇವರುಗಳು ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 07 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ನಜ್ಜರ್‌ಬಾದ್, ಸಿದ್ಧಾರ್ಥನಗರ 2ನೇ ಹಂತ, ಟಿ.ಎನ್. ಪುರ ರಸ್ತೆ, ಶೀಲ ಮಾರ್ಗ, ನಿವೇಶನ ಸಂಖ್ಯೆ. 253, ಹಾಲಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೊಳಪಟ್ಟ ಇ–ಸ್ವತ್ತಿನ ಸಂಖ್ಯೆ: 63-3-591-34, ಅಸೆಸ್ಮೆಂಟ್ ನಂ. 253, ಪಿಐಡಿ ನಂ. 224751 & ವಾರ್ಡ್ ನಂ. 53 [ಎಸ್.ಎ.ಎಸ್ ನಂತೆ] ಸ್ವತ್ತಿನ ವಿಸ್ತೀರ್ಣ ಪೂರ್ವ–ಪಶ್ಚಿಮ : 40 ಅಡಿ, ಉತ್ತರ–ದಕ್ಷಿಣ : 60 ಅಡಿ, ಒಟ್ಟು ವಿಸ್ತೀರ್ಣ: 266.66 ಚದರ ಗಜಗಳು/ 2400 ಚದರ ಅಡಿಗಳುಳ್ಳ ಸ್ವತ್ತಿಗೆ ಚಕ್ಕುಬಂದಿ ಪೂರ್ವಕ್ಕೆ– ನಿವೇಶನ ಸಂಖ್ಯೆ. 252, ಪಶ್ಚಿಮಕ್ಕೆ – ನಿವೇಶನ ಸಂಖ್ಯೆ. 254, ಉತ್ತರಕ್ಕೆ – ರಸ್ತೆ ಮತ್ತು ದಕ್ಷಿಣಕ್ಕೆ ನಿವೇಶನ ಸಂಖ್ಯೆ 250.

ಸಹಿ/– ಶ್ರೀಲತಾ ದೀಕ್ಷಿತ್,
ವಕೀಲರು, ಎಸ್.ಎಲ್.ಡಿ.ಲಾ ಫರ್ಮ್
ನಂ. 1416, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು. ಮೊ: 9844640641
email: sldlawfirm2021@gmail.com

ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಡಿಕೇರಿ ಕೊಡಗು ಜಿಲ್ಲೆ
(ಕರ್ನಾಟಕ ಸರ್ಕಾರದ ನೋಂದಾಯಿತ ಸ್ವಾಯತ್ತ ಸಂಸ್ಥೆ)
ದೂ: 08272–298220 ವೆಬ್ ಸೈಟ್–www.kimskodagu.karnataka.gov.in
ಸಂಖ್ಯೆ: DME/2025-26/IND1703/CALL-2 ದಿನಾಂಕ: 15–12–2025

ಇ-ಸಂಗ್ರಹಣ ವೇದಿಕೆ ಮೂಲಕ ಟೆಂಡರ್ ಪ್ರಕಟಣೆ

ಕೊ.ವೈ.ವಿ.ಸಂ ಮಡಿಕೇರಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ SCP /TSP ಯೋಜನೆಯಡಿ ಟ್ಯಾಬ್‌ಗಳ ಪೂರೈಕೆಗಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಮರು–ಇ–ಟೆಂಡರ್ ಟೆಂಡರ್ ಆಹ್ವಾನಿಸಲಾಗಿದ್ದು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 30–12–2025 ಸಂಜೆ 05.00 ಗಂಟೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ವೆಬ್‌ಸೈಟ್ https://kppp.karnataka.gov.in

ಸಹಿ/– ನಿರ್ದೇಶಕರು ಹಾಗೂ ಡೀನ್
ಕೊ.ವೈ.ವಿ.ಸಂ ಮಡಿಕೇರಿ

ಕರ್ನಾಟಕ ಸರ್ಕಾರ
ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ
ಕಾವೇರಿ ಜಲಾನಯನ ಯೋಜನೆಗಳು–ಮೈಸೂರು
ಕಾರ್ಯಪಾಲಕ ಅಭಿಯಂತರವರ ಕಛೇರಿ, ನಂ–2 ವಿಭಾಗ, ಕಾಡಾ, ಕಾಜಯೋ, ವಿಜಯನಗರ 1 ನೇ ಹಂತ, ಮೈಸೂರು–17
Ph:0821-2414090 Email: eecada2mysore@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:15/2025–26 ದಿನಾಂಕ:12.12.2025

ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ, ಕಾವೇರಿ ಜಲಾನಯನ ಯೋಜನೆಗಳು ಮೈಸೂರು ಪ್ರಾಧಿಕಾರದಡಿ ಬರುವ ನಂ.2 ವಿಭಾಗ ಕಛೇರಿಯ ವತಿಯಿಂದ ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ನಂಜನಗೂಡು ತಾಲ್ಲೂಕಿನ ಒಂದು ಭೂಕ್ಷಾರ ನಿವಾರಣಾ ಕಾಮಗಾರಿ, ಹೆಚ್.ಡಿ.ಕೋಟೆ ತಾಲ್ಲೂಕಿನ ಒಂದು ಭೂಕ್ಷಾರ ನಿವಾರಣಾ ಕಾಮಗಾರಿಗಳಿಗೆ K/W-1ರ ಪ್ರಕಾರ Kppp portal ಮೂಲಕ ಐಟಂವಾರು ಟೆಂಡರ್ ಅನ್ನು ಏಕಲಕೋಟೆ ಪದ್ದತಿಯಲ್ಲಿ ಕರೆಯಲಾಗಿದೆ. ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ಟೆಂಡರ್‌ಗೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿಗಳನ್ನು https://kppp.karnataka.gov.inನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿ: 12.12.2025 ರಿಂದ ಟೆಂಡರ್‌ದಾರರು ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿ: 20.12.2025 ಸಂಜೆ 4.00 ಗಂಟೆಯವರೆಗೆ ಟೆಂಡರ್ ತೆರೆಯುವ ದಿ: 22.12.2025 ಸಂಜೆ 4.30 ಗಂಟೆಯ ನಂತರ.

ಸಹಿ/– ಕಾರ್ಯಪಾಲಕ ಅಭಿಯಂತರರು
DIPR/DDMYS/1367/KSMCA/776/2025-26